1946

ಸ್ಟ್ಯಾಂಡರ್ಡ್ ಬುಕ್ ಡಿಪೋ

ಬೆಂಗಳೂರು



ಶರಚ್ಚಂದ್ರರ

ನಿಷ್ಕೃತಿ

ಸ್ಟ್ಯಾಂಡರ್ಡ್ ಬುಕ್ ಡಿಪೋ, ಬೆಂಗಳೂರು-೨

ನಿಷ್ಕೃತಿ

ಶರಚ್ಚಂದ್ರರ ಕಿರುಕಾದಂಬರಿ

ಅನುವಾದ:

ಎಸ್. ಅನಂತನಾರಾಯಣ

ಸ್ಟ್ಯಾಂಡರ್ಡ್ ಬುಕ್ ಡಿಪೋ
ಅವೆನ್ಯೂರೋಡ್ : : ಬೆಂಗಳೂರು-೨.

ಮೊದಲ ಮುದ್ರಣ—೧೯೪೬.
ಎರಡನೆಯ ಮುದ್ರಣ—೧೯೫೮.

ಬೆಲೆ : ಎಪ್ಪತ್ತೈದು ನಯೆ ಪೈಸೆ.

ಮುದ್ರಣ :
ಶ್ರೀ ಸತ್ಯನಾರಾಯಣ ಪ್ರೆಸ್
ಅರಳೇಪೇಟೆ : : ಬೆಂಗಳೂರು-೨

൭

ഷ്ട

൬

ನಿಷ್ಕೃತಿ

೧

ಭವಾನಿಪುರದ ಚಟರ್ಜಿ ಮನೆತನದ ಸಂಸಾರವೆಲ್ಲ ಒಂದೇ ಕಡೆಗಿತ್ತು. ಒಡಹುಟ್ಟಿದ ಗಿರೀಶ ಮತ್ತು ಹರೀಶ ಅವರ ಜತೆಗೆ ಕಿರಿಯ ರಮೇಶ—ಅವರ ಚಿಕ್ಕಪ್ಪನ ಮಗ—ಎಲ್ಲರೂ ಕೂಡಿ ಒಂದಿಗೇ ಇದ್ದರು. ಹಿಂದೆ ಇವರ ಮನೆತನದ ಆಸ್ತಿಪಾಸ್ತಿ ಹೊಲಗದ್ದೆಯೆಲ್ಲ ರೂಪನಾರಾಯಣ ನದೀತೀರದಲ್ಲಿ, ಹೌರಾ ಜಿಲ್ಲೆಯ ವಿಷ್ಣುಪುರ ಗ್ರಾಮದಲ್ಲಿತ್ತು. ಆಗ ಗಿರೀಶನ ತಂದೆ ಭವಾನೀ ಚಟರ್ಜಿಯ ಸ್ಥಿತಿಯೂ ಚೆನ್ನಾಗಿಯೇ ಇತ್ತು. ಆದರೆ ಒಮ್ಮೆ ಇದ್ದಕ್ಕಿದ್ದಂತೆಯೇ ರೂಪನಾರಾಯಣ ನದಿ ಪ್ರಚಂಡ ಹಸಿವೆಯಿಂದ ಭವಾನಿಯ ಆಸ್ತಿಯನ್ನೆಲ್ಲ ಒಂದೊಂದಾಗಿ ನುಂಗಲಾರಂಭಿಸಿತು. ಐದಾರು ವರ್ಷಗಳೊಳಗಾಗಿಯೇ ಭವಾನಿಗೆ ಯಾವ ಆಸ್ತಿಯೂ ಉಳಿಯದಂತಾಗಿಸಿತು! ಕೊನೆಗೊಮ್ಮೆ ವಿಪರೀತ ಪ್ರವಾಹದಿಂದ ಭವಾನಿಯ ಮನೆಮಠವನ್ನೂ ನುಂಗಿ, ಈ ಬ್ರಾಹ್ಮಣ ಪರಿವಾರವನ್ನು ನಿರಾಶ್ರಿತರನ್ನಾಗಿಸಿ, ತನ್ನ ಎಲ್ಲೆಯಿಂದ ಹೊರದೂಡಿತು! ಭವಾನಿ ತನ್ನ ಸಂಸಾರದೊಂದಿಗೆ ಅಲ್ಲಿಂದ ಹೊರಬಿದ್ದು ಭವಾನೀಪುರದಲ್ಲಿ ಆಸರೆ ಪಡೆದು ನೆಲೆಯೂರಿದ. ಇದೆಲ್ಲ ಬಹಳ ಹಿಂದಿನ ಕಥೆ—ಆದಾದ ಮೇಲೆ ಏನೇನೋ ನಡೆದು ಹೋಗಿದೆ—ಗಿರೀಶ ಮತ್ತು ಹರೀಶ ಇಬ್ಬರೂ ಕಲಿತು ವಕೀಲರಾಗಿ ಸಾಕಷ್ಟು ಹಣಗಳಿಸಿದ್ದರು—ಮನೆ ಕಟ್ಟಿಸಿದ್ದರು—ಕಳೆದು ಹೋದುದರ ನಾಲ್ಕರಷ್ಟನ್ನು ಕೆಲವೇ ದಿನಗಳಲ್ಲಿ ರೂಢಿಸಿಕೊಂಡಿದ್ದರು. ಹಿರಿಯಣ್ಣ ಗಿರೀಶನ ವಾರ್ಷಿಕ ಆದಾಯ ಏನಿಲ್ಲೆಂದರೂ ೨೦-೨೫ ಸಾವಿರ ರೂಪಾಯಿ! ಹರೀಶನಿಗೂ ಐದಾರು ಸಾವಿರದ ವರಮಾನವಿತ್ತು. ಎಲ್ಲಿ ಹೋದರೂ ರಮೇಶನೊಬ್ಬನೇ ಏನೂ ಸಂಪಾದಿಸದವನು. ಹಾಗೆಂದರೆ ಅವನೇನೂ ಕೆಲಸ ಮಾಡುತ್ತಿರಲಿಲ್ಲ—ತೆಪ್ಪಗಿದ್ದನೆಂದಲ್ಲ—ಎರಡು ಮೂರು ಬಾರಿ ವಕೀಲಿ ಪರೀಕ್ಷೆಯಲ್ಲಿ ಘುಂಕಿ ಹೊಡೆದು—ಆಮೇಲೆ ಯಾವುದೋ ಒಂದು ವ್ಯಾಪಾರದಲ್ಲಿ ಹಿರಿ

ಯಣ್ಣ ಗಿರೀಶನ ಐದಾರು ಸಾವಿರ ರೂಪಾಯಿ ಕಳೆದು—ಈಗ ಹಳ್ಳಿಯ ಲ್ಲಿಯೇ ಉಳಿದುಕೊಂಡು ವೃತ್ತಪತ್ರಿಕೆಗಳ ಮೂಲಕ ದೇಶೋದ್ಧಾರದ ಕಾರ್ಯ ನಡೆಸುತ್ತಿದ್ದ.

ಇಷ್ಟು ದಿನವೂ ಒಂದಾಗಿದ್ದ ಸಂಸಾರ ಒಡೆಯುವ ಸೂಚನೆ ತೋರಿತ್ತು. ಕಾರಣವಿಷ್ಟೆ—ಹರೀಶನ ಹೆಂಡತಿಗೂ ರಮೇಶನ ಪತ್ನಿಗೂ ಅಷ್ಟಾಗಿ ಅನ್ಯೋನ್ಯವಿರಲಿಲ್ಲ. ಹರೀಶ ಇದುವರೆಗೂ ಕಲ್ಕತ್ತದಲ್ಲಿರಲಿಲ್ಲ. ಅಲ್ಲಿಯೇ ಸುತ್ತಮುತ್ತ ತನ್ನ ವಕೀಲಿವೃತ್ತಿ ನಡೆಸುತ್ತಿದ್ದ. ಒಮ್ಮೊಮ್ಮೆ ಏಳೆಂಟು ದಿನ ತನ್ನ ಸಂಸಾರ ಸಮೇತ ಮನೆಗೆ ಬಂದು ಉಳಿದುಕೊಳ್ಳುತ್ತಿದ್ದ. ಆಗಲೂ ಈ ಇಬ್ಬರು ಹೆಂಗಸರ ನಡುವೆ ವಿಶ್ವಾಸ ಬೆಳೆದಿರಲಿಲ್ಲ. ಆದರೆ ರಂಪ-ರಗಳೆ-ಜಗಳದಲ್ಲಿ ಕೊನೆಗಾಣಲು ಅವಕಾಶವೂ ಇರಲಿಲ್ಲ. ಈಗ ಸುಮಾರು ಒಂದು ತಿಂಗಳಿಂದ ಹರೀಶ ಕಲ್ಕತ್ತೆಗೇ ಬಂದು ಅಲ್ಲಿಯೇ ವಕೀಲಿ ನಡೆಸುತ್ತಿದ್ದ. ಮನೆಯಿಂದ ಸುಖಶಾಂತಿ ಓಡಿಹೋಗಲು ಸಿದ್ಧತೆಯೂ ಆಯಿತು!

ಇಷ್ಟಾದರೂ, ಈಬಾರಿ ಅವರು ಮನೆಗೆ ಬಂದ ಮೇಲೆ ಈ ಇಬ್ಬರು ಸೊಸೆಯರ ಸಮಸ್ಯೆ ಅಷ್ಟೊಂದು ವಿಪರೀತವಾಗಿರಲಿಲ್ಲ-ಕಾರಣ—ಕಿರಿಯ ಸೊಸೆ [ರಮೇಶನ ಹೆಂಡತಿ] ಇನ್ನೂ ಮನೆಗೆ ಹಿಂದಿರುಗಿರಲಿಲ್ಲ. ರಮೇಶನ ಹೆಂಡತಿ ಶೈಲಜಾ ತನ್ನ ಒಬ್ಬನೇ ಮಗ ಪಟಲ ಮತ್ತು ತನ್ನ ಸವತಿಯ ಮಗ ಕನ್ಹಯಲಾಲ ಇಬ್ಬರನ್ನೂ ಹಿರಿಯ ಸೊಸೆಯ ಜವಾಬ್ದಾರಿಗೊಪ್ಪಿಸಿ, ಮರಣಾಸನ್ನ ತಂದೆಯನ್ನು ನೋಡಲು ಕೃಷ್ಣನಗರಕ್ಕೆ ಹೊಗಿದ್ದಳು. ಆದರೆ ತಂದೆಗೆ ವಾಸಿಯಾದುದರಿಂದ ಅವಳು ಹಿಂದಿರುಗಿ ಬಂದು ನಾಲ್ಕಾರು ದಿನ ಗಳಾಗಿತ್ತು.

ಮನೆಯಲ್ಲಿ ಅತ್ತೆ ಇನ್ನೂ ಇದ್ದರೂ ಹಿರಿಯ ಸೊಸೆ ಸಿದ್ಧೇಶ್ವರಿ [ಗಿರೀಶನ ಹೆಂಡತಿ]ಯೇ ಮನೆಯ ನಿಜವಾದ ಯಜಮಾನಿ. ಆಕೆಯ ವಿಷಯ ಸರಿಯಾಗಿ ಹೇಳುವುದು ಕಷ್ಟ-- ಇದರಿಂದಲೇ ಆ ಮೊಹಲ್ಲಾದಲ್ಲಿ ಅವಳ ವಿಚಾರವಾಗಿ ಹೊಗಳಿಕೆ ತೆಗಳಿಕೆಗಳೆರಡೂ ವಿಪರೀತವಾಗಿಯೇ ಇದ್ದುವು.

ಸಿದ್ಧೇಶ್ವರಿಯ ಬಡ ತಾಯಿತಂದೆ ಇನ್ನೂ ಜೀವಂತರಾಗಿಯೇ ಇದ್ದರು. ಐದಾರು ವರ್ಷಗಳಿಂದ ಯತ್ನಿಸಿ ಯುಕ್ತಿಸಿ ಈ ಬಾರಿಮಾತ್ರ ತಮ್ಮ ಮಗ ಳನ್ನು ಪೂಜಾಪಬ್ಬಕ್ಕೆ ಕರೆದುಕೊಂಡು ಹೋಗಲು ಸಾಧ್ಯವಾಗಿತ್ತು ಅವರಿಗೆ.

ಆದರೆ ಸಿದ್ಧೇಶ್ವರಿ ತನ್ನ ಮನೆಯ ಕಾರುಬಾರು ಬಿಟ್ಟು ಅಲ್ಲಿ ಹೆಚ್ಚು ದಿನ ಇರಲಾಗದುದರಿಂದ, ಒಂದೇ ತಿಂಗಳಲ್ಲಿ ಹಿಂದಿರುಗಿ ಬಂದುಬಿಟ್ಟಳು. ಅಲ್ಲಿಂದ ಹಿಂದೆ ಬರುವಾಗ ಮಲೇರಿಯಾವನ್ನು ಜತೆಗೇ ತಂದಿದ್ದಳು. ಮನೆಗೆ ಹಿಂದಿರುಗಿದ ಮೇಲೂ ಅಪಥ್ಯ ನಿಲ್ಲಿಸಲಿಲ್ಲ. ಎಂದಿನಂತೆ ಬೆಳಗಿನಜಾವ ಸ್ನಾನ ಮಾಡುತ್ತಿದ್ದಳು. ಎಷ್ಟೇ ಹೇಳಿದರೂ ಕ್ವಿನೈನ್ ತೆಗೆದುಕೊಳ್ಳುತ್ತಿರಲಿಲ್ಲ, ಹಾಗೆಯೇ ಸಂಕಟ ಅನುಭವಿಸುತ್ತಿದ್ದಳು. ನಾಲ್ಕಾರು ದಿನಗಳಾದ ಮೇಲೆ ಜ್ವರ ತಾನಾಗಿಯೇ ತಗ್ಗುತ್ತಿತ್ತು. ಮತ್ತೆ ಕೆಲದಿನದ ನಂತರ ಹಾಸಿಗೆ ಹಿಡಿಸುತ್ತಿತ್ತು. ಇದರಿಂದ ಸಿದ್ಧೇಶ್ವರಿ ದಿನೇದಿನೇ ನಿಶ್ಯಕ್ತಳಾದಳು. ಇದೇ ಕಾಲಕ್ಕೆ ಸರಿಯಾಗಿ ಶೈಲಜಾ ತವರುಮನೆಯಿಂದ ಹಿಂದಿರುಗಿ ಔಷಧಿಯ ವಿಚಾರದಲ್ಲಿ ಆಸಕ್ತಿ ವಹಿಸಲಾರಂಭಿಸಿದಳು. ಶೈಲಜಾ ಚಿಕ್ಕಂದಿನಿಂದಲೂ ಹಿರಿಯ ಸೊಸೆಯ ಜತೆಯಲ್ಲಿಯೇ ಇದ್ದುದರಿಂದ, ನಡುಕಲ ಸೊಸೆಯಾಗಲೀ ಬೇರೆ ಯಾರೇ ಆಗಲಿ, ಅವಳಷ್ಟು ವತ್ತಾಯಮಾಡುತ್ತಿರಲಿಲ್ಲ. ಇದರ ಜತೆಗೆ ಇನ್ನೂ ಒಂದು ಕಾರಣವಿತ್ತು. ಸಿದ್ಧೇಶ್ವರಿಗೆ ಅವಳನ್ನು ಕಂಡರೆ ಒಳಗೊಳಗೇ ಒಂದು ಬಗೆಯ ಹೆದರಿಕೆ. ಶೈಲಜಾ ಶುದ್ಧ ಕೋಪಿ!–ಮತ್ತೆ ಎಂತಹ ಕಠೋರ ಉಪವಾಸ ಮಾಡುವಳೆಂದರೆ ಮೂರು ದಿನವಾದರೂ ನೀರು ಕೂಡ ಸೋಕಿಸುತ್ತಿರಲಿಲ್ಲ. ಇದೇ ಸಿದ್ಧೇಶ್ವರಿಯ ಹೆದರಿಕೆಗೆ ಮುಖ್ಯ ಕಾರಣ.

ಶೈಲಜೆಯ ಚಿಕ್ಕಮ್ಮನ ಮನೆ ಹತ್ತಿರದಲ್ಲೇ ಪಟಲ ಡಾಂಗಾ ಮೊಹಲ್ಲಾದಲ್ಲಿತ್ತು. ಶೈಲಜಾ ಈಬಾರಿ ಕೃಷ್ಣನಗರದಿಂದ ಹಿಂದಿರುಗಿದ ಮೇಲೆ ಚಿಕ್ಕಮ್ಮನನ್ನು ನೋಡಿಯೇ ಇರಲಿಲ್ಲ. ಅಂದು ಏಕಾದಶಿಯಾದುದರಿಂದ ಅತ್ತೆಗಾಗಿ ವಿಶೇಷ ಅಡಿಗೆ ಮಾಡುವ ಅವಶ್ಯಕತೆಯಿರಲಿಲ್ಲ. ಔಷಧಿ ಕೊಡುವ ಕೆಲಸವನ್ನು ಸಿದ್ಧೇಶ್ವರಿಯ ನಡುಕಲ ಮಗ ಹರಿಚರಣನಿಗೆ ಒಪ್ಪಿಸಿ ಬೆಳಿಗ್ಗೆಯೇ ಚಿಕ್ಕಮ್ಮನ ಮನೆಗೆ ಹೋಗಿದ್ದಳು.

ದಿನ ಬೇಗ ಕಳೆದು ಸಂಜೆಯಾಗಿಹೋಯಿತು. ಹಿಂದಿನ ದಿನ ಬೆಳಿಗ್ಗೆಯಿಂದ ಸಿದ್ಧೇಶ್ವರಿಯ ಜ್ವರ ಇಳಿದೇ ಇರಲಿಲ್ಲ. ಆಕೆ ಮಂಚದ ಒಂದು ಪಕ್ಕದಲ್ಲಿ ರಗ್ಗು ಹೊದ್ದುಕೊಂಡು ನಿರ್ಜೀವಿಯಂತೆ ಬಿದ್ದುಕೊಂಡು ನಿದ್ರೆ ಮಾಡುತ್ತಿದ್ದಳು. ಅದೇ ಮಂಚದ ಮೇಲೆ ನಾಲ್ಕಾರು ಹುಡುಗರು ಗಲಾಟೆ ಮಾಡುತ್ತಾ ಆಟವಾಡುತ್ತಿದ್ದರು. ಕೆಳಗೆ ಕನ್ನಯಲಾಲ ದೀಪದ ಬೆಳಕಿನಲ್ಲಿ ಭೂಗೋಳ ಉರುಹಾಕುತ್ತಿದ್ದ—ಅಂದರೆ ಪುಸ್ತಕ ತೆರೆದಿಟ್ಟುಕೊಂಡು ಬಾಯಿ

ಅಗಲಿಸಿ ಹುಡುಗರ ಆಟ ನೋಡುತ್ತಿದ್ದ. ಆಕಡೆ ಹರಿಚರಣ ಹಾಸಿಗೆಯ ಮೇಲೆ ಬೋರಲು ಮಲಗಿ, ತಲೆದಿಂಬಿನ ಪಕ್ಕದಲ್ಲಿ ದೀಪವನ್ನಿಟ್ಟುಕೊಂಡು ಬಹಳ ಏಕಾಗ್ರತೆಯಿಂದ ಪುಸ್ತಕ ನೋಡುತ್ತಿದ್ದ. ಸುಮಾರು ಪರೀಕ್ಷೆಗಾಗಿಯೇ ಓದುತ್ತಿರಬೇಕು—ಏಕೆಂದರೆ ಈ ದೊಂಬಿಯಲ್ಲಿ ಅವನು ಕೊಂಚವಾದರೂ ಅಳುಕಿದಂತೆ ತೋರಲಿಲ್ಲ. ಆಟವಾಡುತ್ತಾ ಗಲಾಟೆ ಮಾಡುತ್ತಿದ್ದ ಹುಡುಗರೆಲ್ಲ ಹರೀಶನ ಮಕ್ಕಳು.

ಇದ್ದಕ್ಕಿದ್ದಂತೆ ವಿಪಿನ ಸಿದ್ಧೇಶ್ವರಿಯ ಹತ್ತಿರ ಸರಿದು ಮುಖದ ಮೇಲೆ ಬಾಗಿ "ಇವತ್ತು ನಿಮ್ಮ ಬಲಮಗ್ಗುಲಲ್ಲಿ ಮಲಗಲು ನನ್ನ ಸರದಿಯಲ್ಲವೇ, ದೊಡ್ಡಮ್ಮ?" ಎಂದ. ದೊಡ್ಡಮ್ಮ ಉತ್ತರ ಕೊಡುವ ಮೊದಲೇ ಕೆಳಗಿನಿಂದ ಕನ್ಹಯ್ಯ ಜೋರಾಗಿ "ಇಲ್ಲ—ವಿಪಿನ!—ನಿನ್ನದಲ್ಲ—ದೊಡ್ಡಮ್ಮನ ಬಲಮಗ್ಗುಲಿಗೆ ನಾನು ಮಲಗುತ್ತೇನೆ" ಎಂದ.

ವಿಪಿನ ಪ್ರತ್ಯುತ್ತರವಾಗಿ "ನೀನು ನಿನ್ನೆ ಮಲಗಿರಲಿಲ್ಲವೇನೊ—" ಎಂದ.

"ನಿನ್ನೆ ಮಲಗಿದ್ದೆನೇ?—ಹಾಗಾದರೆ ಈವತ್ತು ಎಡಮಗ್ಗುಲು—"

ಅವನು ಹಾಗೆನ್ನುತಿದ್ದಂತೆಯೇ ರಗ್ಗಿನೊಳಗಿನಿಂದ ಪಟಲನ ಪುಟ್ಟತಲೆ ಹೊರತೋರಿತು. ಅವನು ಬಹಳ ಕಷ್ಟದಿಂದ ದೊಡ್ಡಮ್ಮನ ಎಡಪಕ್ಕಕ್ಕೆ ನುಸುಳಿಕೊಂಡು ಮಲಗಿದ್ದ. ಇನ್ನೆಲ್ಲಿ ತನ್ನ ಜಾಗದಿಂದ ಹೊರಬೀಳಬೇಕೋ ಎಂದು ಹೆದರಿ ಇದುವರೆಗೂ ಈ ಜಗಳದಲ್ಲಿ ಭಾಗವಹಿಸುವ ಧೈರ್ಯ ಮಾಡಿರಲಿಲ್ಲ. ಈಗ ಮಾತಾಡದೆ ವಿಧಿಯಿಲ್ಲ—

"ನಾನಿದುವರೆಗೂ ಸದ್ದಿಲ್ಲದೆ ಮಲಗಿದ್ದೇನೆ" ಎಂದ ಕ್ಷೀಣ ಧ್ವನಿಯಲ್ಲಿ.

ಕನ್ಹಯ್ಯ ಅಧಿಕಾರ ವಾಣಿಯಿಂದ "ಪಟಲ!—ಅಣ್ಣನೊಂದಿಗೆ ಜಗಳವಾಡುತ್ತೀಯಾ?—ಅಮ್ಮನಿಗೆ ಹೇಳುತ್ತೇನೆ ಎಂದು ಹೆದರಿಸಿದ.

ಪಾಪ ಪಟಲ ಬೇರೇನೂ ದಾರಿ ತೋಚದೆ ದೊಡ್ಡಮ್ಮನ ಕತ್ತನ್ನು ತೋಳಿನಿಂದ ತಬ್ಬಿಕೊಂಡು ಅಳುವ ದನಿಯಲ್ಲಿ "ದೊಡ್ಡಮ್ಮ—ನಾನೆಷ್ಟೋ ಹೊತ್ತಿನಿಂದ ಮಲಗಿದ್ದೇನಲ್ಲವೇ ದೊಡ್ಡಮ್ಮ—" ಎಂದು ದೂರಿಟ್ಟ.

ತಮ್ಮನ ಈ ಅಗೌರವ ನಡವಳಿಕೆಯಿಂದ ಕೋಪಗೊಂಡ ಕನ್ಹಯ್ಯ ಕೆಂಗಣ್ಣಿನಿಂದ ಅವನನ್ನೇ ದುರುಗುಟ್ಟಿ ನೋಡಿ "ಪಟಲ!" ಎಂದು ಗರ್ಜಿಸಿ ಇದ್ದಕ್ಕಿದ್ದಂತೆ ತೆಪ್ಪಗಾದ!

ಆ ಸಮಯಕ್ಕೆ ಸರಿಯಾಗಿ ಹೊರಗಿನ ಅಂಗಳದ ಒಂದು ಕಡೆಯಿಂದ ಶೈಲಜೆಯ ದನಿ ಕೇಳಿ ಬಂತು–"ಸರಿ ಹೋಯಿತು! ಅಕ್ಕನ ಕೋಣೆಗೇನು ಕಳ್ಳರು ನುಗ್ಗಿದಾರೇನು?" ದನಿ ಕೇಳಿದೊಡನೆಯೇ ಎಲ್ಲವೂ ಒಮ್ಮೆಗೇ ಬದಲಾಯಿತು. ಹಾಸಿಗೆಯ ಮೇಲಿದ್ದ ಹರಿಚರಣ ತಕ್ಷಣವೇ ತಾನೋದು ತ್ತಿದ್ದ "ಪಠ್ಯ" ಪುಸ್ತಕವನ್ನು ತಲೆದಿಂಬಿನಡಿ ಮುಚ್ಚಿಟ್ಟು—ಬೇರೆ ಯಾವುದೊ ಪುಸ್ತಕ—ಸುಮಾರು "ಅಪಠ್ಯ" [Non detailed] ಪುಸ್ತಕವಿರಬಹುದು - ತೆರೆದು ಅದನ್ನೇ ಒಂದೇ ಮನಸ್ಸಿನಿಂದ ಓದಲಾರಂಭಿಸಿದ. ಅವನ ಕಣ್ಣಿ ನಿಂದಲೇ ಅವನ ಏಕಾಗ್ರತೆ—ಪುಸ್ತಕ ಓದುವುದರಲ್ಲಿನ ಆಸಕ್ತಿ—ಗೊತ್ತಾಗು ತ್ತಿತ್ತು. ಕನ್ಹಯ್ಯ ಎಡಮಗ್ಗುಲೋ ಬಲಮಗ್ಗುಲೋ ಎಂಬ ಸಮಸ್ಯೆ ತೀರ್ಮಾನಿಸದೆಯೇ ಒಂದೇ ಸಮನಾಗಿ ಅರಚಿಕೊಳ್ಳಲಾರಂಭಿಸಿದ— "ವಿಸ್ತೀರ್ಣವಾದ ಜಲರಾಶಿಯ ನಡುವೆ—" ಎಲ್ಲಕ್ಕಿಂತ ವಿಚಿತ್ರವೆಂದರೆ ಮಂಚದ ಮೇಲೆ ಆಡುತ್ತಿದ್ದ ಹುಡುಗರ ಗುಂಪಿನದು! ಅವರೆಲ್ಲ ಇಂದ್ರಜಾಲ ದಂತೆ ಒಂದು ಕ್ಷಣದಲ್ಲೇ ಎಲ್ಲೋ ಮಾಯವಾದರು!—ಅವರ ಉರುವು ಕೂಡ ಉಳಿಯಲಿಲ್ಲ.

ಶೈಲಜಾ ಕಲ್ಕತ್ತೆಯಿಂದ ಆಗ ತಾನೇ ಬಂದವಳು ಹಿರಿಯ ಓರಗಿತ್ತಿ ಗಾಗಿ ಒಂದು ಲೋಟ ಬಿಸಿಹಾಲನ್ನೆತ್ತಿಕೊಂಡು ಕೋಣೆಯೊಳಕ್ಕೆ ಬಂದು ನಿಂತಳು. ಈಗ ಕನ್ಹಯ್ಯನಿಗೆ ವಿಪರೀತ ಕಷ್ಟಕ್ಕಿಟ್ಟುಕೊಂಡಿತು! ಅವನ "ವಿಸ್ತೀರ್ಣವಾದ ಜಲರಾಶಿಯ" ಅಲ್ಲೋಲಕಲ್ಲೋಲದ ಹೊರತು ಕೊಠಡಿ ಯಲ್ಲಿ ಸಂಪೂರ್ಣ ಸದ್ದಡಗಿತ್ತು! ಆಕಡೆ ಹರಿಚರಣ ತನ್ನ ಮೇಲೆ ಆಸೆ ಬಿಟ್ಟರೂ ಮನಸ್ಸಿನ ಏಕಾಗ್ರತೆ ಕದಲದವನಂತೆ ಓದುತ್ತಿದ್ದ. ಏಕೆಂದರೆ ಇದುವರೆಗೂ ಅವನು "ಆನಂದಮಠ" ಓದುವುದರಲ್ಲಿ ಮಗ್ನನಾಗಿದ್ದ. ಆನಂದ ಮಠದ ಭವಾನಂದ ಜೀವಾನಂದರು ಚಿಕ್ಕಮ್ಮನ ಆಕಸ್ಮಿಕ ಆಗಮನದಿಂದ ಮಾಯವಾಗಿದ್ದರು! ತನ್ನ ಕೈಚಳಕವನ್ನು ಚಿಕ್ಕಮ್ಮ ನೋಡಿಬಿಟ್ಟರೋ ಏನೋ ಎಂದು ಗಾಬರಿಗೊಂಡಿದ್ದ ಹರಿಚರಣ! ಅದು ಖಚಿತವಾಗುವ ವರೆಗೂ ಅವನೆದೆ ಡವಗುಟ್ಟುತ್ತಿತ್ತು.

ಶೈಲಜಾ ಕನ್ಹಯ್ಯನಕಡೆ ನೋಡಿ "ಏ—ವಿಸ್ತೀರ್ಣ ಜಲರಾಶಿ— ಇದುವರೆಗೂ ಏನೋ ಗಲಾಟೆ!" ಎಂದಳು.

ಕನ್ಹಯ್ಯ ತಲೆಯೆತ್ತಿ ದುರ್ದೆಸೆಯಲ್ಲಿರುವವನಂತೆ, "ನಾನಲ್ಲ—

ಅಮ್ಮ—ವಿಪಿನ ಮತ್ತು ಪಟಲರು!” ಎಂದು ಕ್ಷೀಣ ದನಿಯಲ್ಲಿ ಮೂಗಿನಲ್ಲಿ ಗೊಣಗಿದ.

ಕಾರಣ! ಅವರಿಬ್ಬರೇ ಅವನ ಜಾಗವನ್ನಾಕ್ರಮಿಸುತ್ತಿದ್ದ ಭಾರೀ ಸ್ಪರ್ಧಿಗಳು! ಆದರಿಂದ ಸಂಕೋಚವಿಲ್ಲದೆ ಆವರಿಬ್ಬರನ್ನೂ ಮಲತಾಯಿಯ ವಶಕ್ಕೊಪ್ಪಿಸಿಬಿಟ್ಟ!

“ಯಾರೂ ಕಾಣುವುದೇ ಇಲ್ಲ- ಎಲ್ಲಿ ಓಡಿಹೋದರೋ-” ಎಂದಳು ಶೈಲಜಾ.

ಈಗಂತೂ ಕನ್ಹಯ್ಯ ಬಹು ಉತ್ಸಾಹದಿಂದ ಎದ್ದು ಹಾಸಿಗೆಯನ್ನು ತೋರಿಸುತ್ತಾ “ಯಾರೂ ಓಡಿಲ್ಲ ಅಮ್ಮಾ—ಎಲ್ಲ ಈ ರಗ್ಗಿನೊಳಗೆ ಬಚ್ಚಿಟ್ಟುಕೊಂಡಿದ್ದಾರೆ” ಎಂದ.

ಅವನ ಮಾತು, ಮುಖಭಾವ ಕಂಡು ಶೈಲಜೆಗೆ ನಗು ಬಂತು. ಇದೂ ಅಲ್ಲದೆ ಹೊರಗಿದ್ದಾಗ ಅವಳಿಗೆ ಅವನ ದನಿ ಜೋರಾಗಿಯೇ ಕೇಳಿಸಿತ್ತು. ಓರಗಿತ್ತಿಯಕಡೆ ತಿರುಗಿದಳು ಶೈಲಜಾ—“ಅಕ್ಕ—ಇವರೆಲ್ಲ ನಿನ್ನನ್ನು ತಿಂದು ಬಿಡುತ್ತಾರೆ ಅಷ್ಟೇ! ಅಲ್ಲ—ಅವರ ಮೇಲೆ ಕೈಯೆತ್ತಲಾಗದಿದ್ದರೆ ಒಮ್ಮೆ ಗದರಿಕೊಳ್ಳಲೂ ಬಾರದೆ?—ಏ ಹುಡುಗರಾ—ನನ್ನ ಜತೆ ಬನ್ನಿ” ಎಂದಳು.

ಸಿದ್ಧೇಶ್ವರಿ ಇದುವರೆಗೂ ಸುಮ್ಮನಿದ್ದರು. ಈಗ ಮೃದು ಕಂಠದಿಂದ ಕೊಂಚ ಮುನಿಸಿನಿಂದ “ಮಕ್ಕಳು ತಮ್ಮಷ್ಟಕ್ಕೆ ಆಡಿಕೊಂಡಿದ್ದಾರೆ. ನನ್ನನ್ನು ಯಾಕೆ ತಿಂದು ಬಿಡುತ್ತಾರೆ? ನಿನ್ನೊಡನೆ ಯಾಕೆ ಹೊರಡ ಬೇಕು—ಉಹುಂ! ಉಹುಂ!—ನನ್ನೆದುರಿಗೆ ಯಾರನ್ನು ಹೊಡೆಯುವು ದಾಗಲಿ ಬಯ್ಯುವುದಾಗಲಿ ಬೇಡ. ನೀನಿಲ್ಲಿಂದ ಹೋಗು-ಪಾಪ-ಮಕ್ಕಳೆಲ್ಲ ರಗ್ಗಿನೊಳಗೆ ಥರಥರ ನಡುಗುತ್ತಿದ್ದಾರೆ” ಎಂದರು.

ಶೈಲಜಾ ನಸುನಕ್ಕು “ನಾನೇನು ಯಾವಾಗಲೂ ಹೊಡೆಯುತ್ತ ಬಯ್ಯುತ್ತಲೇ ಇರುವೆನೇ ಅಕ್ಕ?” ಎಂದಳು.

“ಇಲ್ಲ ಶೈಲ-ನೀನೆಲ್ಲವನ್ನು ದೊಡ್ಡದು ಮಾಡುತ್ತೀ!-”

ತಮ್ಮ ತಂಗಿಯೆಂಬಂತೆ ಸಿದ್ಧೇಶ್ವರಿ ಶೈಲಜೆಯನ್ನು ಹೆಸರು ಹಿಡಿದೇ ಕರೆಯುತ್ತಿದ್ದಳು.

“ನಿನ್ನನ್ನು ಕಂಡೊಡನೆಯೇ ಇವರ ಮುಖ ಕಪ್ಪಿಡುತ್ತದೆ—ಹೋಗಲಿ- ನೀನಿಲ್ಲಿಂದ ಹೊರಟುಹೋಗಮ್ಮಾ. ಹುಡುಗರು, ಪಾಪ, ಹೊರಗೆ ಬರಲಿ—”

"ನಾನಿವರನ್ನು ಕರೆದುಕೊಂಡು ಹೋಗುತ್ತೇನೆ. ಹಗಲೂ ರಾತ್ರಿ ಗಲಾಟೆ ಮಾಡುತ್ತಿದ್ದರೆ ನಿನಗೆ ಕೊಂಚವೂ ಆರಾಮ ಸಿಕ್ಕದು, ಪಟಲ ಉಳಿದವರಿಗಿಂತ ಸ್ವಲ್ಪ ಮೇಲು. ಅವನೇ ದೊಡ್ಡಮ್ಮನಬಳಿ ಮಲಗಲಿ— ಉಳಿದವರೆಲ್ಲ ಇವತ್ತಿನಿಂದ ನನ್ನ ಬಳಿ ಮಲಗಬೇಕು" ಎಂದು ತನ್ನ ತೀರ್ಪು ಕೊಟ್ಟು ಶೈಲಜಾ ಓರಗಿತ್ತಿಯಕಡೆ ತಿರುಗಿದಳು.

"ಎಲ್ಲಿ—ನೀನಿನ್ನು ಏಳು—ಕೊಂಚ ಹಾಲುಕುಡಿ—ಹಾಂ! ಲೋ ಹರಿ!—೭॥ ಘಂಟೆಗೆ ನಿಮ್ಮಮ್ಮನಿಗೆ ಔಷಧಿ ಕುಡಿಸಿದೆ ತಾನೆ?"

ಪ್ರಶ್ನೆ ಕೇಳಿ ಹರಿಚರಣ ಪೆಚ್ಚಾದ! ಇದುವರೆಗೂ "ಸಂತಾನ"ರೊಂದಿಗೆ ಕಾಡುಮೇಡು ಸುತ್ತುತ್ತಿದ್ದ—ದೇಶೋದ್ಧಾರ ಮಾಡುತ್ತಿದ್ದ—ತುಚ್ಛವಾದ ಔಷಧಿ, ಪಥ್ಯಗಳ ವಿಚಾರ ನೆನಪೇ ಇರಲಿಲ್ಲ, ಈಗಂತೂ ಬಾಯಿಂದ ಮಾತೇ ಹೊರಡಲಿಲ್ಲ.

"ಅವುಷಧಿ ಗಿವುಷಧಿ ನನ್ನಿಂದ ಕುಡಿಯಲು ಸಾಧ್ಯವಿಲ್ಲ ಶೈಲ" ಎಂದರು ಸಿದ್ಧೇಶ್ವರಿ ಸ್ಪಷ್ಟಸ್ವರದಲ್ಲಿ.

"ನಿನಗೆ ಹೇಳಲಿಲ್ಲ ಅಕ್ಕ—ನೀನು ಸುಮ್ಮನಿರು" ಎಂದು ಅಂದು ಶೈಲಜಾ ಹರಿಚರಣನ ಹಾಸಿಗೆಯ ಹತ್ತಿರಹೋಗಿ ಅವನನ್ನು ಮತ್ತೆ ಕೇಳಿದಳು—

"ನಿನ್ನನ್ನೇ ಕೇಳುತ್ತಿರುವುದು—ಔಷಧಿ ಕೊಟ್ಟೆಯೇನೋ?" ಅವಳು ಕೊಠಡಿಯೊಳಕ್ಕೆ ಕಾಲಿಡುವಮೊದಲೇ ಹರಿಚರಣ ಗಾಬರಿಯಿಂಥ ಗಡಿಬಿಡಿಯಲ್ಲಿ ಎದ್ದು ಕುಳಿತಿದ್ದ. ಈಗಂತೂ ಹೆದರಿದ ದನಿಯಲ್ಲಿ "ಚಿ[illegible]ರೆ ಅಮ್ಮ ಕುಡಿಯಲೊಪ್ಪುವುದಿಲ್ಲ!" ಎಂದ.

"ಮಾತು ಹಾರಿಸುತ್ತೀಯಾ? ನೀನು ಕೊಟ್ಟೆಯೋ ಇಲ್ಲವೋ ಅಷ್ಟು ಹೇಳು!" ಎಂದು ಗದರಿಕೊಂಡಳು ಶೈಲಜಾ

ಚಿಕ್ಕಮ್ಮನ ಈ ಕಠೋರ ಶಾಸನದಿಂದ ಮಗನನ್ನು ಬಿಡಿಸಲು ಉದ್ವಿಗ್ನರಾದರು ಸಿದ್ಧೇಶ್ವರಿ.

"ಶೈಲಾ—ಇಷ್ಟು ಹೊತ್ತಿನಲ್ಲಿ ಆವಾಂತರ ಏಕೆ? ಅವಾಂತರ ಮಾಡುವುದಕ್ಕೇ ಬಂದೆಯೇನು? ಲೋ ಹರಿ—ಅದೇ ಔಷಧಿಯೋ ಏನೋ ತೆಗೆದುಕೊಂಡು ಬಾರೋ!"

ಹರಿಚರಣನಿಗೆ ಕೊಂಚ ಧೈರ್ಯಬಂತು. ಏನೋ ಯೋಚಿಸುತ್ತಾ ಮಂಚದ ಒಂದು ಪಕ್ಕದಿಂದ ಕೆಳಗಿಳಿದು ಬೀರುವಿನಿಂದ ಒಂದು

ಸೀಸೆಯನ್ನೂ ಒಂದು ಸಣ್ಣ ಗಾಜಿನ ಲೋಟವನ್ನೂ ತೆಗೆದುಕೊಂಡು ತಾಯಿಯ ಹತ್ತಿರ ಬಂದು ನಿಂತ. ಇನ್ನೇನು ಸೀಸೆಯ ಮುಚ್ಚಳ ತೆರೆಯ ಬೇಕೆನ್ನುವಷ್ಟರಲ್ಲಿ ಶೈಲಜಾ ನಿಂತಲ್ಲಿಂದಲೇ—"ಏನೋ, ಹರಿ!—ಲೋಟಕ್ಕೆ ಔಷಧಿ ಹಾಕಿಬಿಟ್ಟರೇ ಆಗಿಹೋಯಿತೇನೋ-ನೀರು ಬೇಡವೇ! ಬಾಯಿಗೆ ಹಾಕಿಕೊಳ್ಳಲು ಇನ್ನೇನಾದರೂ ಬೇಡವೇ? ಹೀಗೆ ನೀವೆಲ್ಲ ನಿರಾಸಕ್ತರಾಗಿರುವಿರಲ್ಲ!—ನಾನು ಅದನ್ನು ಬಿಡಿಸುತ್ತೇನೆ! ಇರಲಿ!" ಎಂದಳು. ಔಷಧಿಯ ಸೀಸೆಯನ್ನು ಕೈಗೆತ್ತಿಕೊಂಡಾಗ—ಸದ್ಯ—ಈ ವತ್ತಿನ ಕಷ್ಟದಿಂದ ಪಾರಾದೆನೆನ್ನುವ ಭರವಸೆಯಿಂದಿದ್ದ ಹರಿಚರಣ. ಆದರೆ ಈ ಬಾಯಿಗೆ ಹಾಕಿಕೊಳ್ಳಲು ಇನ್ನೇನಾದರೂ ಬೇಕೆನ್ನುವ ಪ್ರಶ್ನೆಯಿಂದ ಅವನು ಮತ್ತೂ ಗಾಬರಿಗೊಂಡ. ಏನು ಮಾಡಲೂ ತೋರದೆ ಹಾಗೂ ಹೀಗೂ ನೋಡಿ ಕಣ್ಣುಕಣ್ಣು ಬಿಡುತ್ತಾ ಕರುಣಾ ಸ್ವರದಿಂದ "ಏನೂ ಇಲ್ಲವಲ್ಲ-ಚಿಕ್ಕಮ್ಮ!" ಎಂದ.

"ತರದೇ ನಿಂತಿದ್ದರೆ ಆಕಾಶದಿಂದ ಏನಾದರೂ ಬೀಳುತ್ತದೆಯೇನು?"

ಸಿದ್ಧೇಶ್ವರಿಗೆ ಶೈಲಜೆಯ ಈ ಮಾತಿನಿಂದ ನಿಜವಾಗಿ ಕೋಪ ಬಂದಿತು.

"ಕೊಡಲು ಅವನಿಗೇನು ತಾನೇ ಸಿಗುತ್ತದೆ ಶೈಲ? ಇದೆಲ್ಲಾ ಗಂಡಸರ ಕೆಲಸವೇನು? ನಿನ್ನ ದರ್ಬಾರೆಲ್ಲ ಹುಡುಗರ ಮೇಲೆಯೇ! ನೀಲಿಗೇಕೆ ಹೇಳಲಾಗದು? ಆ ಸುಟ್ಟ ಮೋರೆಯ ಹುಡುಗಿ ನೀನು ಹೋದಾಗಿನಿಂದ ಈ ಕೋಣೆಯ ಕಡೆಗೇ ಬಂದಿಲ್ಲ. ಅಮ್ಮ ಇದ್ದಾಳೆಯೇ ಸತ್ತಳೇ ಎಂದು ನೋಡಲು ಕೂಡ ಒಂದುಬಾರಿಯಾದರೂ ಈಕಡೆ ಬಂದಿಲ್ಲ!"

"ಅವಳೇನು ಇಲ್ಲಿದ್ದಳೇ ಅಕ್ಕ? ನನ್ನೊಂದಿಗೆ ಪಟಲಡಾಂಗಕ್ಕೆ ಬಂದಿದ್ದಳು!"

"ಯಾಕೆ ಬಂದಿದ್ದಳು? ಯಾತಕ್ಕೋಸ್ಕರ ನೀನು ಅವಳನ್ನು ಕರೆದುಕೊಂಡುಹೋದೆ?-ಲೋ ಹರಿ-ಕೊಡೋ ಇಲ್ಲಿ ಔಷಧಿಯನ್ನು ಹಾಗೆಯೇ ಕೊಡೊ-ನಾನು ಹಾಗೆಯೇ ಕುಡಿಯುತ್ತೇನೆ" ಎನ್ನುತ್ತಾ ಸಿದ್ಧೇಶ್ವರಿ ಅಲ್ಲಿಲ್ಲದ ಹುಡುಗಿಯ ಮೇಲೆ ತಪ್ಪೆಲ್ಲವನ್ನೂ ಹೊರಿಸಿ ಔಷಧಿಗಾಗಿ ಕೈನೀಡಿದರು.

"ಸ್ವಲ್ಪ ತಾಳು. ಹರಿ-ನಾನೇ ತರುತ್ತೇನೆ" ಎನ್ನುತ್ತಾ ಶೈಲಜಾ ಕೋಣೆಯಿಂದ ಹೊರಗೆ ಹೋದಳು!

೨

ಹರೀಶನ ಹೆಂಡತಿ ನಯನತಾರಾ ಹೊರದೇಶದಲ್ಲಿದ್ದು ಪಾಶ್ಚಾತ್ಯ ರೀತಿಯನ್ನು ಚೆನ್ನಾಗಿ ಕಲಿತಿದ್ದಳು. ತನ್ನ ಮಕ್ಕಳನ್ನು ಪಾಶ್ಚಾತ್ಯ ರೀತಿಯ ಬಟ್ಟೆಹಾಕದೆ ಹೊರಹೊರಡಲು ಬಿಡುತ್ತಿರಲೇ ಇಲ್ಲ. ಅದು ಬೆಳಿಗ್ಗೆ ಸಿದ್ಧೇಶ್ವರಿ ತಮ್ಮ ಪೂಜೆ ಪುನಸ್ಕಾರದಲ್ಲಿ ಮಗ್ನರಾಗಿದ್ದರು. ಹುಡುಗಿ ನೀಲಾಂಬರಿ ಔಷಧಿಯ ಸಾಮಾನುಗಳನ್ನಿಟ್ಟುಕೊಂಡು ಮುಂದೆ ಕುಳಿತಿದ್ದಳು. ಆಗ ಸರಿಯಾಗಿ ನಯನತಾರಾ ಕೋಣೆಯೊಳ ಬಂದು "ಅಕ್ಕ-ದರ್ಜಿಯವನು ಅತುಲನ ಅಂಗಿಹೊಲೆದು ತಂದಿದ್ದಾನೆ. ಅವನಿಗೆ ಇಪ್ಪತ್ತು ರೂಪಾಯಿ ಕೊಡಬೇಕು" ಎಂದಳು.

ಸಿದ್ಧೇಶ್ವರಿ ಜಪವನ್ನು ಪೂರ್ಣವಾಗಿ ಮರೆತು "ಒಂದು ಅಂಗಿ ಹೊಲೆಯಲು ಇಪ್ಪತ್ತು ರೂಪಾಯಿ ಕೂಲಿಯೇ?" ಎಂದರು.

ನಯನತಾರಾ ತುಸುನಕ್ಕು "ಇದೇನು ಹೆಚ್ಚೇನು ? ನನ್ನ ಅತುಲನಿಗೆ ಒಂದೊಂದು ಸೂಟು ಹೊಲಿಸಲು ೬೦-೭೦ ರೂಪಾಯಿಯ ವರೆಗೂ ಖರ್ಚಾಗಿದೆ" ಎಂದಳು.

"ಸೂಟು" ಶಬ್ದ ಸಿದ್ಧೇಶ್ವರಿಗೆ ಅರ್ಥವಾಗಲಿಲ್ಲ-ಅವರು ಸುಮ್ಮನೆ ನಿಂತಿದ್ದರು. ನಯನತಾರಾ ಅವರಿಗೆ ಅರ್ಥ ಹೇಳುವಂತೆ "ಅಂಗಿ, ಷರಾಯಿ, ನೆಕ್‌ಟೈ-ಇದೆಲ್ಲಾ ಸೇರಿಸಿ ನಾವು "ಸೂಟು" ಎನ್ನುತ್ತೇವೆ" ಎಂದಳು.

ಸಿದ್ಧೇಶ್ವರಿ ಕೊಂಚ ಕೋಪದ ದನಿಯಲ್ಲಿ ಹುಡುಗಿಯನ್ನು ಕೂಗಿ ಅವಳಿಗೆ ಹೇಳಿದರು-"ನೀಲೀ-ನಿಮ್ಮ ಚಿಕ್ಕಮ್ಮನನ್ನು ಕರೆದುಕೊಂಡುಬಾ, ದುಡ್ಡು ತೆಗೆದು ಕೊಡಲಿ"

"ನನ್ನ ಕೈಗೇ ಬೀಗದಕೈ ಕೊಟ್ಟುಬಿಟ್ಟರೆ ನಾನೇ ತೆಗೆದುಕೊಳ್ಳುತ್ತೇನೆ" ಎಂದಳು ನಯನತಾರಾ. ನೀಲಾ ಎದ್ದು ನಿಂತಿದ್ದವಳು "ಅಮ್ಮನ ಹತ್ತಿರ ಎಲ್ಲಿ ಬಂತು ಬೀಗದಕೈ-ಕಬ್ಬಿಣದ ಪೆಟ್ಟಿಗೆಯ ಬೀಗದಕೈ ಯಾವಾಗಲೂ ಚಿಕ್ಕಮ್ಮನ ಬಳಿಯೇ ಇರುತ್ತದೆ" ಎಂದು ಹೇಳಿ ಹೊರಟುಹೋದಳು. ಈ ಮಾತು ಕೇಳಿದೊಡನೆಯೇ ನಯನತಾರೆಯ ಮುಖ ಸಪ್ಪೆಯಾಯಿತು. ಕೂಡಲೇ-"ಚಿಕ್ಕಸೊಸೆ ಇದುವರೆಗೂ ಊರಿನಲ್ಲಿರಲಿಲ್ಲವಲ್ಲಾ-ಆದ್ದರಿಂದ ಕಬ್ಬಿಣದ ಪೆಟ್ಟಿಗೆ ನಿಮ್ಮ ಹತ್ತಿರವೇ ಇರಬಹುದು ಎಂದಿದ್ದೆ ಅಕ್ಕ" ಎಂದಳು.

ಸಿದ್ಧೇಶ್ವರಿ ಮತ್ತೆ ಜಪಮಾಲೆ ತಿರುಗಿಸಲಾರಂಭಿಸಿದ್ದರಾದುದರಿಂದ ಏನೂ ಉತ್ತರಕೊಡಲಿಲ್ಲ. ಏಳೆಂಟು ನಿಮಿಷದ ನಂತರ ಹಣತೆಗೆದುಕೊಡಲು ಶೈಲಜಾ ರೂಮಿನೊಳ ಬಂದಾಗ ಅಲ್ಲಿ ಅತುಲನ ಹೊಸ ಕೋಟಿನ ವಿಚಾರ ವಾಗಿ ಬೇಕಾದಷ್ಟು ಆಲೋಚನೆ ನಡೆಯುತ್ತಿತ್ತು. ಅತುಲ ಕೋಟುತೊಟ್ಟು ಅದರ ಅಂದಚಂದ ರೀತಿಗಳನ್ನೆಲ್ಲಾ ವರ್ಣಿಸುತ್ತಿದ್ದ. ಅವನ ತಾಯಿಯೂ ಹರಿಚರಣನೂ ಮುಗ್ಧರಾಗಿ ನೋಡುತ್ತಾ ಈಗಿನ ಫ್ಯಾಷನ್ನಿನ ವಿಚಾರ ತಿಳಿಯುತ್ತಿದ್ದರು. ಅತುಲ "ಚಿಕ್ಕಮ್ಮ ನೀನು ನೋಡು-ಎಷ್ಟೊಂದು ಚೆನ್ನಾಗಿದೆ" ಎಂದ.

ಶೈಲಜಾ ಸುಮ್ಮನೆ "ಒಳ್ಳೆಯದು" ಎಂದು ಪೆಟ್ಟಿಗೆಯಿಂದ ಇಪ್ಪತ್ತು ರೂಪಾಯಿ ತೆಗೆದು ಎಣಿಸಿ ಅವನ ಕೈಯಲ್ಲಿ ಕೊಟ್ಟಳು.

ನಯನತಾರಾ ಎಲ್ಲರಿಗೂ ಕೇಳುವಂತೆ ತನ್ನ ಮಗನಿಗೆ "ನಿನ್ನ ಹತ್ತಿರ ಪೆಟ್ಟಿಗೆ ತುಂಬ ಬಟ್ಟೆಗಳಿವೆ—ಆದರೂ ನಿನ್ನ ಹಸಿವೆ ಹಿಂಗಲಿಲ್ಲವೇನೋ?" ಎಂದಳು.

ಹುಡುಗ ಅಧೀರತೆಯಿಂದ, "ಎಷ್ಟು ಸಾರಿ ಹೇಳಲಮ್ಮಾ ನಿನಗೆ? ಈ ರೀತಿಯ ಕೋಟು ಇಂದಿನ ಫ್ಯಾಷನ್. ಈ ಮಾದರಿಯದು ಒಂದಾದರೂ ಕೋಟಿಲ್ಲದಿದ್ದರೆ ಜನ ನಗುತ್ತಾರೆ" ಎಂದು ದುಡ್ಡು ತೆಗೆದುಕೊಂಡು ಹೊರ ಹೋಗುತ್ತಿದ್ದವನು ಇದ್ದಕ್ಕಿದ್ದಂತೆ ನಿಂತು ಮತ್ತೆ ಹೇಳಿದ-"ಅಣ್ಣ ಹರಿ ಹಾಕಿ ಕೊಂಡು ಹೋಗುವ ಅಂಗಿಕಂಡರೆ ನನಗೇ ನಾಚಿಕೆಯಾಗುತ್ತದೆ. ಇಲ್ಲೊಂದು ತೂತು-ಅಲ್ಲೊಂದು ಜೋಕಾಲೆ-ಥೂ-ಥೂ ಅಸಹ್ಯ!"-ಕೊಂಚನಕ್ಕು ಒಮ್ಮೆ ಭುಜಕುಣಿಸಿ "ಒಳ್ಳೆ ಹಳ್ಳಿ ಗೌಡನ ಹಾಗೆ" ಎಂದ.

ಮಗನ ಮುಖದ ಭಾವಭಂಗಿ ಕಂಡು ನಯನತಾರಾ ಕಿಲಕಿಲ ನಕ್ಕಳು. ನೀಲಾ ಮುಖ ಮುಚ್ಚಿಕೊಂಡು ನಗೆ ತಡೆಯಲು ಯತ್ನಿಸುತ್ತಿದ್ದಳು.

ಹರಿಚರಣ ಕರುಣಾದೃಷ್ಟಿಯಿಂದ ಚಿಕ್ಕಮ್ಮನಕಡೆ ನೋಡಿ ಅವಮಾನ ದಿಂದ ತಲೆತಗ್ಗಿಸಿದ.

ಸಿದ್ಧೇಶ್ವರಿ ಹೆಸರಿಗೆ ಮಾತ್ರ ಜಪಮಾಡುತ್ತಿದ್ದರು. ತನ್ನ ಮಗನ ದುಃಖಕಂಡು ಅವರಿಗೂ ವ್ಯಥೆಯಾಯಿತು. ಕೂಡಲೇ ಕೋಪದಿಂದ "ಶೈಲ-ಅದು ನಿಜವೇ! ಇವರಿಗೇನು ಆಸೆಯೇ ಇಲ್ಲವೇ? ಪಾಪ! ಈ ಬಡಪಾಯಿ ಗಳಿಗೂ ಒಂದೆರಡು ಹೊಸ ಕೋಟು ಹೊಲಿಸಿಕೊಡು" ಎಂದರು.

ಅತುಲ ಕೂಡಲೇ ದೊಡ್ಡವನಂತೆ ಕೈನೀಡಿ "ನನ್ನ ಕೈಗೆ ರೂಪಾಯಿ ಕೊಡಿ, ದೊಡ್ಡಮ್ಮ ನಾನು ನಮ್ಮ ದರ್ಜಿಯವನಿಗೆ ಹೇಳಿ ಈಗಿನ ಫ್ಯಾಷನ್ನಿಗೆ ಸರಿಯಾಗಿ ಹೊಲಿಸಿಕೊಡುತ್ತೇನೆ-ನನಗೆ ಮೋಸಮಾಡಲು ಅವನಿಗೆಲ್ಲಿ ಧೈರ್ಯ-ಹಾಂ-ಮತ್ತೆ!" ಎಂದ.

ನಯನತಾರಾ ತನ್ನ ಮಗನ ಜಾಗರೂಕತೆಯ ವಿಷಯ ಏನೋ ಹೇಳ ಬೇಕೆಂದಿದ್ದಳು. ಅಷ್ಟರಲ್ಲೇ ಶೈಲಜಾ ಗಂಭೀರ ಮತ್ತು ದೃಢಸ್ವರದಲ್ಲಿ "ನೀನು ದೊಡ್ಡಸ್ತಿಕೆ ತೋರಬೇಕಿಲ್ಲ, ಮಗು-ನಿನ್ನ ಕೆಲಸ ನೀನು ನೋಡಿಕೊ. ಇವರಿಗೆ ಬಟ್ಟೆ ಹೊಲಿಸಲು ಬೇರೆಯವರಿದ್ದಾರೆ" ಎಂದು ಹೇಳಿ ಸೆರಗಿಗೆ ಕಟ್ಟಿದ್ದ ಬೀಗದ ಕೈಗೊಂಚಲನ್ನೆತ್ತಿ ಮಂಚದ ಮೇಲೆಸೆದು ಹೊರಟುಹೋದಳು.

ನಯನತಾರಾ ಬಹಳ ಕೋಪಗೊಂಡು "ಅಕ್ಕ-ಕೇಳಿದಿರಾ ಚಿಕ್ಕ ಸೊಸೆಯ ಮಾತು? ಏನು? ಅತುಲ ಈಗಂತಹ ಕೆಟ್ಟಮಾತೇನಂದ ನೀವೇ ಹೇಳಿ?" ಎಂದಳು.

ಸಿದ್ಧೇಶ್ವರಿ ಉತ್ತರ ಕೊಡಲಿಲ್ಲ. ಸುಮಾರು ಇಷ್ಟಮಂತ್ರ ಜಪ ಮಾಡುತ್ತಿದ್ದರೋ ಏನೋ ಕೇಳಿಸಲಿಲ್ಲ-ಆದರೆ ಶೈಲಜೆಗೆ ಕೇಳಿಸಿತ್ತು! ಎರಡು ಹೆಜ್ಜೆ ಹಿಂದಿಟ್ಟು ಕೋಣೆಯೊಳಕ್ಕೆ ಬಂದು ನಡುಕಲ ಸೊಸೆಯನ್ನುದ್ದೇಶಿಸಿ "ಚಿಕ್ಕಸೊಸೆಯ ಮಾತನ್ನು ಅಕ್ಕ ಬಹಳ ಕೇಳಿದಾರೆ-ನೀನೇ ಕೇಳಿಲ್ಲ ಅಷ್ಟೆ! ತಮ್ಮನಾದರೂ ಅತುಲ ಹರಿಯನ್ನು ಹೇಗೆ ಅವಮಾನಗೊಳಿಸಿದ-ಅದನ್ನು ಕಂಡು ನೀವು ನಗುತ್ತಿದ್ದಿರಿ-ಅವನೇನಾದರೂ ನನ್ನ ಮಗನಾಗಿದ್ದರೆ ತೋರಿಸು ತ್ತಿದ್ದೆ!" ಎಂದು ಅಂದು ತನ್ನ ಕೆಲಸಕ್ಕೆ ಹೊರಟುಹೋದಳು. ಕೋಣೆ ಯೆಲ್ಲ ನಿಶ್ಶಬ್ದ! ಕೊಂಚಕಾಲ ಕಳೆದನಂತರ ನಯನತಾರಾ ನೀಳವಾಗಿ ಉಸಿರೆಳೆದುಕೊಂಡು "ಅಕ್ಕ, ಇವತ್ತು ನನ್ನ ಅತುಲನ ಹುಟ್ಟಿದ ಹಬ್ಬ-ಚಿಕ್ಕ ಸೊಸೆ ಬಾಯಿಗೆ ಬಂದಂತೆ ಬೈದು ಹೊರಟುಹೋದಳು" ಎಂದಳು.

ಸಿದ್ಧೇಶ್ವರಿ ತಮ್ಮ ಇಬ್ಬರು ಚಿಕ್ಕ ಓರಗಿತ್ತಿಯರ ಜಗಳದ ಸೂಚನೆ ಕಂಡು ಹೆದರಿ ಜಪದಲ್ಲಿ ಮಗ್ನರಾದರು.

ಉತ್ತರ ಬಾರದಿರಲು ನಯನತಾರಾ ಮತ್ತೆ ಮಾತು ಮುಂದುವರಿಸಿ ದಳು. "ನೀವೇನಾದರೂ ಮಾಡದೇಹೋದರೆ ಹೇಗೋ ಏನೋ-ನಾವೇ ಬೇರೆ ದಾರಿ ಹುಡುಕಬೇಕಾಗುತ್ತದೆ-ಅಷ್ಟೆ!"

ಇಷ್ಟಾದರೂ ಸಿದ್ಧೇಶ್ವರಿ ಮಾತಾಡದಿರಲು ನಯನತಾರಾ ಮೆಲ್ಲನೆದ್ದು ಮಗನ ಜೊತೆಯಲ್ಲಿ ಕೋಣೆಯಿಂದ ಹೊರಟುಹೋದಳು.

ಐದಾರು ನಿಮಿಷಗಳಲ್ಲೇ ಜಪವುಗಿಸಿ ಸಿದ್ಧೇಶ್ವರಿ ಎದ್ದಾಗ ಬಾಗಿಲ ನ್ನೊರಗಿಕೊಂಡು ನಡುಕಲಸೊಸೆ ಕಾದು ನಿಂತಿದ್ದಳು. ಸಿದ್ಧೇಶ್ವರಿಗೆ ಅವಳನ್ನು ಕಂಡೊಡನೆಯೇ ಹೆದರಿಕೆಯಿಂದ ಮುಖ ಒಣಗಿತು. ಆದರೂ ಕಷ್ಟದಿಂದ " ಏನು ತಂಗಿ " ಎಂದು ಕೇಳಿದರು.

"ಏನೆಂದೇ ಕೇಳಲು ಬಂದೆ! ಅಲ್ಲ ನಾನು ಯಾರ ಅನ್ನವನ್ನಾದರೂ ತಿನ್ನುತ್ತಿಲ್ಲ-ಯಾರ ಬಟ್ಟೆಯನ್ನೂ ಉಡುತ್ತಿಲ್ಲ-ಯಾರ ದುಡಿಮೆಯಿಂದಲೂ ಬಾಳುತ್ತಿಲ್ಲ-ಅಂತಹುದರಲ್ಲಿ ನಾನೇಕೆ ತೆಪ್ಪಗೆ ಪೊರಕೆಯೇಟು ತಿನ್ನಬೇಕು ?"

ಸಿದ್ಧೇಶ್ವರಿ ಅವಳನ್ನು ಸಮಾಧಾನಗೊಳಿಸಬೇಕೆಂದು ವಿನೀತಭಾವ ದಿಂದ ಹೇಳಲಾರಂಭಿಸಿದರು—"ಪೊರಕೆಯೇಟು ತಿನ್ನುವುದು ?—ಇದೇನು ತಂಗಿ ಹೀಗನ್ನುತ್ತೀ-ಶೈಲಳ ಮಾತೇ ಹಾಗೆ! ಇದೂ ಅಲ್ಲದೆ ಅವಳು ನಿನ್ನ ನ್ನೇನೂ ಅನ್ನಲಿಲ್ಲವಲ್ಲ-ಎಲ್ಲಿ ಹೋದರೂ-"

"ಎಲ್ಲಿ ಹೋದರೂ ಅತುಲನನ್ನು ಜೀವಂತವಾಗಿ ಹೂಳಲಿಚ್ಛಿಸಿದಳು-ಅಷ್ಟೆ ! ನಾನು ಕಿಲಕಿಲ ನಗುತ್ತೇನೆ ಅಲ್ಲವೇ ! ಗಾಯಕ್ಕೇಕೆ ಉಪ್ಪುಮೆತ್ತ ವಿರಿ-ಅಕ್ಕ-ಪೊರಕೆಯೇಟಲ್ಲದಿದ್ದರೆ ಇನ್ನೇನಿದು ? ಹಿಡಿದುಕೊಂಡು ಹೊಡೆಯ ಲಿಲ್ಲವೆಂದು ನಿಮಗೆ ಅರ್ಥವಾಗಲಿಲ್ಲವೇನೋ-ಅಲ್ಲವೇ ?"

ಸಿದ್ಧೇಶ್ವರಿಗೆ ದಿಕ್ಕೇತೋಚದಾಯಿತು. ಮೆಲ್ಲನೆ "ಇದೆಂತಹ ಮಾತು ತಂಗಿ-ನಾನೇನು ಅವಳಿಗೆ ಓದುಬರಹ ಕಲಿಸಿದ್ದೇನೆಯೇ-" ಎಂದರು.

ನಡುಕಲಸೊಸೆ ಬೀಗದ ಕೈಗೊಂಚಲಿಗಾಗಿ ಒಳಗೊಳಗೇ ತಹತಹಿಸು ತ್ತಿದ್ದಳು. ಆದರಿಂದ ಉದ್ಧತವಾಗಿಯೇ ಉತ್ತರಕೊಟ್ಟಳು.

"ಅದು ನಿಮಗೇ ಗೊತ್ತು-ನನಗ್ಯಾಕೆ ಅದೆಲ್ಲ ! ನಾವೇನೊ ಹೊಸಬರು-ಪರದೇಶಿಗಳಂತೆ ನಿಮ್ಮ ನಡುವೆ ಬಂದು ಬಿದ್ದಿದ್ದೇವೆ. ನಾವು ಒಂದು ಪೀಡೆ-ಆತಂಕವೆಂದು ನಿಮಗೆ ತೋರಿದರೆ-ಸರಿ-ನೇರವಾಗಿ ನೀವೇ ಹೇಳಿದ್ದರೆ ಚೆನ್ನಾ ಗಿರುತ್ತಿತ್ತು. ಆದರೆ ಬೇರೆಯವರನ್ನೇಕೆ ಬೆನ್ನುಹತ್ತಲು ಬಿಟ್ಟಿರಿ ?"

ಈ ಆರೋಪಕ್ಕೇನೂ ಉತ್ತರ ಕೊಡಲಾರದೆ ತೆಪ್ಪಗೆ ಕಣ್ಣುಬಿಡುತ್ತಾ ಕುಳಿತಿದ್ದರು ಸಿದ್ಧೇಶ್ವರಿ! ನಡುಕಲಸೊಸೆ ಇದರಿಂದ ದನಿಯನ್ನು ಇನ್ನೂ ಕಠೋರಮಾಡಿದಳು—

"ನಾವೇನೂ ಹುಲ್ಲು ಮೇಯುವುದಿಲ್ಲ, ಅಕ್ಕ, ನಮಗೂ ಎಲ್ಲ ತಿಳಿಯುತ್ತದೆ! ಆದರೆ ಹೀಗೆ ಹೊರಹಾಕುವುದಕ್ಕಿಂತ ಒಳ್ಳೆಯ ಮಾತಿನಲ್ಲೇ ಕಳುಹಿಸಿಕೊಟ್ಟದ್ದರೆ ಚೆನ್ನಾಗಿ ಕಾಣುತ್ತಿತ್ತು. ನಾವೂ ವಿಶ್ವಾಸದಿಂದಲೇ, ಸಂತೋಷದಿಂದಲೇ ಹೋಗುತ್ತಿದ್ದೆವು. ಅಬ್ಬಾ! ಅವರೇನಾದರೂ ಕೇಳಿದರೆ ಪಾತಾಳಕ್ಕೇ ಇಳಿದುಬಿಡುತ್ತಾರೆ! ಈಗಂತೂ ಕಂಡಕಂಡವರೊಂದಿಗೆಲ್ಲಾ ಹೊಗಳುತ್ತಾರೆ–ನಮ್ಮ ಅತ್ತಿಗೆ ದೇವತೆ–ಸಾಕ್ಷಾತ್ ದೇವತೆ!–ಅಹಹಾ!"

ಸಿದ್ಧೇಶ್ವರಿ ಅಳಲಾರಂಭಿಸಿದರು.

"ನನ್ನ ಶತ್ರುಗಳು ಕೂಡ ನನ್ನ ಮೇಲೆ ಅಂತಹ ಅಪಾದನೆ ಮಾಡಲಾರರು, ತಂಗಿ–ಈ ಮಾತನ್ನು ನನ್ನ ಮೈದುನ ಕೇಳುವುದಕ್ಕಿಂತ ನಾನು ಸಾಯುವುದೇ ಮೇಲು!–ನೀವು ಬಂದುದು ನನಗೆಷ್ಟು ಸಂತೋಷ–ಅಷ್ಟು ಆನಂದ–ಕನ್ಹಯ್ಯ ಪಟಲರನ್ನು ಕರೆದುತಾ–ಅವರ ತಲೆಯಮೇಲೆ ಕೈಯಿಟ್ಟು ಆಣೆ—"

ದುಃಖದಿಂದ ಗದ್ಗದದನಿಯಲ್ಲಿ ಅನ್ನುತ್ತಿದ್ದ ಮಾತು ಅಲ್ಲಿಗೇ ನಿಂತಿತು. ಶೈಲ ಲೋಟದಲ್ಲಿ ಹಾಲು ಹಿಡಿದುಕೊಂಡು ಒಳಬಂದು "ಜಪ ಮುಗಿಯಿತೇನು?—ಕೊಂಚ ಹಾಲು ಕುಡಿದುಬಿಡು ಅಕ್ಕ" ಎಂದಳು.

ಸಿದ್ಧೇಶ್ವರಿ ಅಳುವುದನ್ನು ಮರೆತು–"ನನ್ನೆದುರಿಗೆ ನಿಲ್ಲಬೇಡ–ಇಲ್ಲಿಂದ ಹೋಗು–ತೊಲಗು! ಮುಖ ತೋರೀಯೆ ಮತ್ತೆ–ತೊಲಗಿಹೋಗು" ಎಂದು ಚೀತ್ಕರಿಸಲಾರಂಭಿಸಿದರು.

ಶೈಲಜಾ ಆಕಾಶ ಕಳಚಿಬಿದ್ದಂತೆ ಕಣ್ಣುಕಣ್ಣು ಬಿಡುತ್ತಾ ನಿಂತುಬಿಟ್ಟಳು.

ಸಿದ್ಧೇಶ್ವರಿ ಅಳುತ್ತಾ ಅಳುತ್ತಾ "ಬಾಯಿಗೆ ಬಂದಂತೆ ಎಲ್ಲರನ್ನೂ ಯಾತಕ್ಕೆ ಅನ್ನುತೀಯಾ, ಶೈಲ?" ಎಂದರು.

"ನಾನು ಯಾರನ್ನು ಏನಂದೆ ಈಗ?"

ಸಿದ್ಧೇಶ್ವರಿ ಈ ಪ್ರಶ್ನೆ ಕಿವಿಗೆ ಬೀಳುವ ಮೊದಲೇ ಮೊದಲಿನಂತೆಯೇ ಎತ್ತರದದನಿಯಲ್ಲಿ ಕಿರುಚಿಕೊಂಡರು–"ನನ್ನನ್ನು ಅಂದು ಅಂದು ನೀನು ಹೆಚ್ಚಿಹೋದೆ–ನಿನಗೆಷ್ಟೇ ಧೈರ್ಯ–ನಿನ್ನ ಮಾತನ್ನು ಯಾರೇ ಸಹಿಸುವವರು–ಎಲ್ಲರನ್ನೂ ನನ್ನಂತೆಯೇ ಅಂದುಕೊಂಡಿದ್ದೀಯೇನು?—ಹೋಗು ಇಲ್ಲಿಂದ–ತೊಲಗು–ತೊಲಗು–"

ಶೈಲಜಾ ಸಹಜವಾದ ದನಿಯಲ್ಲಿಯೇ-"ಸರಿ-ಈ ಹಾಲು ಕುಡಿದುಬಿಡು -ನಾನು ತೊಲಗುತ್ತೇನೆ-ನನಗೆ ಈ ಲೋಟ ಈಗಲೇ ಬೇಕು" ಎಂದಳು.

ಅವಳ ನಿರುದ್ವಿಗ್ನ ಮಾತು ಕೇಳಿ ಸಿದ್ಧೇಶ್ವರಿ ಕೆಂಡವಾದರು-

"ಇಲ್ಲ-ಇಲ್ಲ-ನಾನು ಕುಡಿಯುವುದಿಲ್ಲ-ನಾನೇನೂ ತಿನ್ನುವುದೂ ಇಲ್ಲ -ಕುಡಿಯುವುದೂ ಇಲ್ಲ-ನೀನು ಮನೆಬಿಟ್ಟು ತೊಲಗು-ಇಲ್ಲ ನಾನೇ ತೊಲ ತ್ತೇನೆ. ಇಬ್ಬರಲ್ಲಿ ಒಬ್ಬರು ಹೋಗದಿದ್ದರೆ ನಾನು ನೀರು ಕೂಡ ಮುಟ್ಟು ವುದಿಲ್ಲ."

ಶೈಲ ಸಹಜವಾದ ದನಿಯಲ್ಲಿಯೇ ಉತ್ತರಕೊಟ್ಟಳು-

"ಅಕ್ಕ, ನಾನಿನ್ನು ಮೊನ್ನೆ ತಾನೇ ವಾಪಸು ಬಂದಿದ್ದೇನೆ. ಈಗಲೇ ಮತ್ತೆ ಹೋಗಲು ಸಾಧ್ಯವಿಲ್ಲ. ಆದ್ದರಿಂದ ನೀನೇ ಕೊಂಚದಿನ ಕಟೋ ವಾಕ್ಕೆ ಹೋಗಿ ಇದ್ದುಬಂದರೆ ಕಾಶಿ ಪಕ್ಕದಲ್ಲೇ ಗಂಗಾನದಿ-ಇದೂ ಅಲ್ಲದೆ ನೀನೀಗ ಹೇಳಿದಂತೆ ಇಬ್ಬರಲ್ಲೊಬ್ಬರು ಹೋದಂತೆಯೂ ಆಗುತ್ತದೆ-ಸರಿ- ಚಿಕ್ಕಅಕ್ಕ-ಬೆಳಗಿನಿಂದಲೂ ಒಂದು ಸಣ್ಣ ಮಾತನ್ನೆ ಮುಂದುಮಾಡಿಕೊಂಡು ಒಂದೇ ಸಮನಾಗಿ ರಂಪಮಾಡುತ್ತಿದ್ದೀಯಲ್ಲಾ? ಅಕ್ಕ ಜ್ವರ ಜ್ವರ ಅಂತ ನರಳುತ್ತಿದ್ದರೆ ಅವಳಿಗೆ ಯಾಕೆ ಸುಮ್ಮನೆ ಹಿಂಸೆಕೊಡುತ್ತೀ? ನನ್ನಿಂದ ಏನೇ ಆಗಲಿ ತಪ್ಪಾಗಿದ್ದರೆ ನನಗೇ ಹೇಳಬಾರದೇ-ಹೋಗಲಿ, ಈಗೇನಾಯಿತು ಹೇಳು!"

ಸಿದ್ಧೇಶ್ವರಿ ಕಣ್ಣೊರೆಸಿಕೊಳ್ಳುತ್ತಾ "ಇವತ್ತು ಅತುಲನ ಹುಟ್ಟಿದ ಹಬ್ಬ-ಪಾಪ-ಆ ಮಗುವನ್ನು ಹಾಗೇಕೆ ಅಂದೆ, ಶೈಲ?" ಎಂದರು.

ಶೈಲಜಾ ನಕ್ಕು-"ಓಹೋ-ಹೀಗೋ ಸಮಾಚಾರ! ಚಿಕ್ಕಅಕ್ಕ- ಏನೂ ಹೆದರಿಕೊಳ್ಳಬೇಡ-ನಿನ್ನ ಹಾಗೆಯೇ ನಾನೂ ತಾಯಿಯಲ್ಲವೇ? ಹರಿ, ಕನ್ಹಯ್ಯ, ಪಟಲ ಹೇಗೋ ಹಾಗೆಯೇ ಅತುಲನೂ ನನಗೆ ಮಗುವೇ! ತಾಯಿಯ ಬೈಗಳು ಒಂದೂ ತಟ್ಟುವುದಿಲ್ಲ-ಅಕ್ಕ-ಒಳ್ಳೆಯದು-ಅವನನ್ನೀಗ ಕೂಗಿ ನಾನೇ ಆಶೀರ್ವಾದ ಮಾಡುತ್ತೇನೆ-ಎಲ್ಲಿ ಅಕ್ಕ, ನೀನೀಹಾಲು ಕುಡಿಮತ್ತೆ. ನಾನಲ್ಲಿ ಕಾವಲಿ ಒಲೆಮೇಲಿಟ್ಟು ಬಂದಿದ್ದೇನೆ" ಎಂದಳು.

ಸಿದ್ಧೇಶ್ವರಿಗೆ ಅಳುವಿನ ಜತೆಗೆ ನಗೆಯೂ ತುಂಬಿ ಬಂತು-

"ಸರಿ-ಸರಿ-ನೀನು ನಿನ್ನ ಚಿಕ್ಕಅಕ್ಕನನ್ನು ಅಪರಾಧಕ್ಕಾಗಿ ಕ್ಷಮೆ ಬೇಡು-ನೀನು ಅವಳನ್ನು ಏನೇನೋ ಅಂದಿದ್ದಿ-"

"ಆಗಲಿ ಬೇಡುತ್ತೇನೆ" ಎನ್ನುತ್ತಾ ಶೈಲ ತಕ್ಷಣವೇ ಬಾಗಿ ನಯನ ತಾರಳ ಕಾಲುಮುಟ್ಟಿ "ನನ್ನಿಂದೇನಾದರೂ ತಪ್ಪಾಗಿದ್ದರೆ ನನ್ನನ್ನು ಕ್ಷಮಿಸು, ಚಿಕ್ಕಕ್ಕ–ನಾನು ಕ್ಷಮೆಬೇಡುತ್ತಿದ್ದೇನೆ" ಎಂದಳು.

ನಯನತಾರಾ ಅವಳ ಗಲ್ಲಮುಟ್ಟಿ ಎಬ್ಬಿಸಿ, ಕೈಕಣ್ಣಿಗೊತ್ತಿಕೊಂಡು ಸೊಟ್ಟಮೋರೆ ಮಾಡಿಕೊಂಡು ಅಲ್ಲಿಯೇ ನಿಂತಿದ್ದಳು.

ಸಿದ್ದೇಶ್ವರಿಯ ತಲೆಯಿಂದ ಭಾರ ಇಳಿದಂತಾಯಿತು–ಆನಂದ ಪ್ರೇಮ ಗಳಿಂದ ಉದ್ವಿಗ್ನರಾಗಿ ಚಿಕ್ಕಸೊಸೆಯ ಗಲ್ಲಮುಟ್ಟಿ ಕೈಗೆ ಮುತ್ತಿಕ್ಕಿ ನಡುಕಲ ಸೊಸೆಯನ್ನು ಕುರಿತು–"ಈ ಹುಚ್ಚು ಹುಡುಗಿಯ ಮಾತಿಗೆ ರೇಗಬೇಡ, ತಂಗಿ–ನನ್ನನ್ನೇ ನೋಡು–ಎಷ್ಟು ರೇಗುತ್ತೇನೆ–ಹಾಗೆ ಹೀಗೆ ಅನ್ನುತ್ತೇನೆ. ಆದರೆ ಒಂದುಕ್ಷಣ ನೋಡದೇ ಹೋದರೆ ಎದೆಗೆ ಶೂಲ ತಿವಿದಂತಾಗುತ್ತೆ–ಇಲ್ಲ–ಶೈಲ–ನನ್ನಿಂದ ಇಷ್ಟೊಂದು ಹಾಲು ಕುಡಿಯಲು ಸಾಧ್ಯವಿಲ್ಲಮ್ಮ" ಎಂದರು.

"ಎಲ್ಲಾ ಸಾಧ್ಯ–ಕುಡಿದುಬಿಡು ಅಕ್ಕ"

ಸಿದ್ಧೇಶ್ವರಿ ಮತ್ತೇನೂ ಹೇಳದೆ ಹಾಲನ್ನೆಲ್ಲಾ ಕಷ್ಟದಿಂದ ಕುಡಿದು "ಶೈಲ, ಮಗುವನ್ನೀಗಲೇ ಕೂಗಿ ಆಶೀರ್ವದಿಸು" ಎಂದರು.

"ಇಗೋ ಅದೇ ಕೆಲಸ" ಎನ್ನುತ್ತಾ ಶೈಲ ನಸುನಗುತ್ತಾ ಖಾಲಿ ಲೋಟವನ್ನೆತ್ತಿಕೊಂಡು ಕೋಣೆಯಿಂದ ಹೊರಟುಹೊದಳು.

೩

ಆಹತ್ತಿನಷ್ಟು ಅವಮಾನ, ನಾಚಿಕೆ, ಆಶ್ಚರ್ಯಗಳು ಅತುಲನಿಗೆ ಮತ್ತೆಂದೂ ಆಗಿರಲಿಲ್ಲ. ಚಿಕ್ಕಂದಿನಿಂದಲೂ ಮುದ್ದಿನಿಂದ ಬೆಳೆದಿದ್ದ. ಅವನ ಇಷ್ಟದ ವಿರುದ್ಧ ತಾಯಿತಂದೆ ಏನೂ ಮಾಡುತ್ತಿರಲಿಲ್ಲ. ಇಂದು ಎಲ್ಲರೆದು ರಿಗೂ ಆದ ಅವಮಾನ ಅವನ ಮೈಯಲ್ಲೆಲ್ಲ ಬೆಂಕಿ ಹೊತ್ತಿಸಿತ್ತು ! ಹೊರಗೆ ಹೋದವನೇ ಹೊಸ ಅಂಗಿಯನ್ನು ನೆಲದ ಮೇಲೆಸೆದು ಗೂಬೆಯಂತೆ ಮುಖ ಮಾಡಿಕೊಂಡು ಕುಳಿತುಬಿಟ್ಟ

ಈವತ್ತು ಹರಿಚರಣನ ಸಹಾನುಭೂತಿಯೆಲ್ಲ ಅತುಲನ ಪರವಾಗಿ ! ಕಾರಣ, ತನ್ನ ಪರ ಮಾತಾಡುತ್ತಿದ್ದಾಗಲೇ ಅತುಲನಿಗೆ ಜೈಗಳು ದೊರಕಿದ್ದು –ಇದರಿಂದ ಅವನೂ ಅತುಲನ ಪಕ್ಕದಲ್ಲಿ ಹುಬ್ಬುಗಂಟಿಕ್ಕಿ ಕುಳಿತ. ಅವನನ್ನು

ಸಮಾಧಾನಗೊಳಿಸೋಣವೆಂದು ಮನಸ್ಸು-ಆದರೆ ಎಷ್ಟೇ ಹುಡುಕಿದರೂ ಸರಿಯಾದ ಮಾತೇ ಸಿಗದಿರಲು ಅವನೂ ತೆಪ್ಪಗೇ ಕುಳಿತಿದ್ದ. ಆದರೆ ಅತುಲನಿಗೆ ಇನ್ನು ಸುಮ್ಮನೆ ಕುಳಿತಿರಲು ಸಾಧ್ಯವಿರಲಿಲ್ಲ, ಕಾರಣ-ಅವನ ದುಃಖಕ್ಕೆ ಅಪಮಾನ ಮಾತ್ರವೇ ಅಲ್ಲ-ಹೊರದೇಶದಿಂದ ವಿವಿಧ ಫ್ಯಾಷನ್ನಿನ, ವಿವಿಧ ರೀತಿಯ ಅನೇಕ ಸೂಟುಗಳನ್ನು ಮನೆಗೆ ತಂದು ವಿವಿಧ ರೀತಿಯಲ್ಲಿ ತನ್ನ ಪ್ರತಿಷ್ಠೆ ಹೆಚ್ಚಿಸಿಕೊಂಡೂ ಇದ್ದಾನೆ; ಆದರೆ ಇಂದು ತನ್ನ ಚಿಕ್ಕಮ್ಮನ ತಿರಸ್ಕಾರದ ಒಂದು ಪೆಟ್ಟಿಗೆ ಆ ಗೌರವ, ಪ್ರತಿಷ್ಠೆಯೆಲ್ಲ ಉರುಳಿ ಮಣ್ಣಾದುದನ್ನು ಕಂಡು ಮನಸ್ಸು ಉದ್ವಿಗ್ನಗೊಂಡಿತ್ತು ! ಕೂಡಲೇ ಹರಿಯ ಕಡೆಗೆ ತಿರುಗಿ ರೋಷದಿಂದ "ನಾನು ಯಾರಿಗೂ ಬಗ್ಗುವುದಿಲ್ಲ, ಗೊತ್ತೋ-ಈ ಶ್ರೀಮಾನ್ ಅತುಲ ಚಂದ್ರವರ್ಮ ಕೋಪಬಂದರೆ ಈ ಚಿಕ್ಕಮ್ಮ ಪುಟ್ಟಮ್ಮಗಳಿಗೆಲ್ಲಾ "ಕೇರ್" ಮಾಡುವುದಿಲ್ಲ-ಗೊತ್ತೋ!" ಎಂದ. ಹರಿಚರಣ ಆಕಡೆ ಈಕಡೆ ನೋಡಿ ಹೆದರುತ್ತಾ ಹೆದರುತ್ತಾ "ನಾನೂ ಮಾಡುವುದಿಲ್ಲ-ಉಶ್-ಕನ್ಹಯ್ಯ ಬಂದ" ಎಂದ ಹೆದರಿಕೆಯಿಂದ ನಡುಗುತ್ತಾ ಇನ್ನೆಲ್ಲಿ ಹುಚ್ಚುಹುಚ್ಚಾಗಿ ಅತುಲ ರೇಗಿಬಿಡುವನೋ ಎಂದು ಎದ್ದು ನಿಂತ.

ಕನ್ಹಯ್ಯ ಬಾಗಿಲ ಹೊರಗೆ ನಿಂತು ಮೊಗಲ ಬಾದಶಹನ ಹೊಗಳು ಭಟ್ಟನಂತೆ ಜೋರಾಗಿ "ಅತುಲ, ಹರಿ, ಅಮ್ಮ ಕೂಗುತ್ತಿದ್ದಾರೆ-ಬೇಗ-" ಎಂದು ಕೂಗಿದ.

ಹರಿಚರಣನ ಮುಖ ಬಿಳಿಚಿಕೊಂಡಿತು—"ನನ್ನನ್ನೇ? ನಾನೇನು ಮಾಡಿದೆ? ನನ್ನನಲ್ಲ-ಅತುಲ, ಹೋಗು-ಚಿಕ್ಕಮ್ಮ ನಿನ್ನನ್ನು ಕೂಗುತ್ತಿದ್ದಾರೆ" ಎಂದ.

ಕನ್ಹಯ್ಯ ಅಧಿಕಾರದ ದನಿಯಲ್ಲಿ "ಇಬ್ಬರನ್ನೂ ಇಗಲೇ! ಇದೇನು ಅತುಲ! ನಿನ್ನ ಹೊಸ ಅಂಗಿಯನ್ನು ನೆಲದ ಮೇಲೆಸೆದವರು ಯಾರು?" ಎಂದ. ಇದಕ್ಕುತ್ತರವಾಗಿ ಅತುಲ ಹರಿಯ ಮುಖವನ್ನು ನೋಡಿದ. ಹರಿ ಅತುಲ ಮತ್ತು ಕನ್ಹಯರ ಮುಖ ನೋಡುತ್ತಾ ನಿಂತ. ಯಾರ ಬಾಯಿಂದಲೂ ಮಾತೇ ಹೊರಡಲಿಲ್ಲ. ಕನ್ಹಯ್ಯ ನೆಲದ ಮೇಲೆ ಬಿದ್ದಿದ್ದ ಕೋಟನ್ನೆತ್ತಿ ಕುರ್ಚಿಯ ಮೇಲೆ ಹಾಕಿ ಹೊರಟ.

ಹರಿಚರಣ ಒಣಗಿದ ದನಿಯಲ್ಲಿ "ನನಗಿನ್ನೇನು ಹೆದರಿಕೆ? ನಾನೇನೂ ಅನ್ನಲಿಲ್ಲ-ನೀನೇ ಹೇಳಿದ್ದು ನಾನು ಚಿಕ್ಕಮ್ಮನಿಗೆ "ಕೇರ್" ಮಾಡುವುದಿಲ್ಲ ಅಂತ-" ಎಂದ.

"ನಾನೊಬ್ಬನೇ ಅನ್ನಲಿಲ್ಲ-ನೀನೂ ಅಂದೆ-" ಎನ್ನುತ್ತಾ ಅತುಲ ಗರ್ವದಿಂದ ಮನೆಯೊಳಕ್ಕೆ ಹೊರಟುಹೋದ. ಅವಶ್ಯ ಬಿದ್ದಾಗ ನಿಜವಾದ ವಿಷಯ ತಿಳಿಸಿಬಿಡುವನೆಂಬುದಂತೂ ಖಚಿತವಾಗಿ ಹೋಯಿತು! ಹರಿಯ ಮುಖ ಮತ್ತೂ ಬಿಳುಪೇರಿತು. ಚಿಕ್ಕಮ್ಮ ಏಕೆ ಕೂಗಿದರೋ ಅದೂ ತಿಳಿಯದು-ಇದರ ಜತೆಗೆ ಇನ್ನು ಆ ಹುಚ್ಚ ಅತುಲ ಏನು ಹೇಳಿ ಬಿಡುವನೋ ಅದೂ ಹೇಳುವಂತಿಲ್ಲ. ತಾನೂ ಹಿಂದೆಯೇ ಹೋಗಿ ಅವನಂದು ದಕ್ಕೆಲ್ಲ ಪ್ರತಿವಾದ ಹೂಡಬೇಕು, ಉತ್ತರಕೊಡಬೇಕು ಎಂದುಕೊಂಡ ಒಮ್ಮೆ. ಆದರೆ ತನಗೆ ಮಾತಾಡಲು ಸಾಗದು ಎನ್ನಿಸಿತು!-ತನ್ನಿಂದ ಮಾತಾಡಲು ಸಾಧ್ಯವೆನ್ನುವ ವಿಶ್ವಾಸವಿರಲಿಲ್ಲ! ಇನ್ನು ಹೋಗಬೇಕಾದ ಸಮಯವೂ ಹತ್ತಿರವಾಯಿತು-ಕನ್ಹಯ್ಯ ಆಗಲೇ ಕರೆಕೊಟ್ಟು ಹೋಗಿ ದ್ದಾನೆ-ಇನ್ನೊಮ್ಮೆ ಖಂಡಿತವಾಗಿಯೂ ವಾರಂಟನ್ನೇ ತರುವನು! ಆತ್ಮ ರಕ್ಷಣೆಗೆ ಮತ್ತಾವ ಉಪಾಯವೂ ತೋರದೆ ಹರಿಚರಣ ಚೆಂಬನ್ನೆತ್ತಿಕೊಂಡು ಹಿತ್ತಿಲಕಡೆ ಹೊರಟುಹೋದ! ಮನೆಯವರೆಲ್ಲ ಚಿಕ್ಕಮ್ಮನೆಂದರೆ ಹುಲಿ ಕಂಡಂತೆ ಹೆದರುತ್ತಾರೆ.

ಅತುಲ ಒಳಹೋದೊಡನೆಯೇ ಚಿಕ್ಕಮ್ಮ ಅಡಿಗೆಮನೆಯಲ್ಲಿದ್ದಾರೆಂದು ಗೊತ್ತಾಯಿತು. ಕೋಪದಿಂದ ಅಲ್ಲಿಹೋಗಿ ಬಾಗಿಲಬಳಿ ನಿಂತ. ಈ ಮನೆಯ ಉಳಿದ ಹುಡುಗರಂತೆ ಚಿಕ್ಕಮ್ಮನ ಸ್ವಭಾವ ತಿಳಿಯಲು ಅವನಿಗೆ ಅವಕಾಶ ಸಿಕ್ಕಿರಲಿಲ್ಲ. ಹೆಂಗಸರೂ ಕಠಿನರಾಗಬಲ್ಲರೆಂಬುದು ಅವನಿಗೆ ತಿಳಿಯದು. ಯಾವಾಗಲೂ ಮೃದು ಮತ್ತು ದುರ್ಬಲ ಮನಸ್ಸಿನ ತಾಯಿ ತಂದೆಯರಿಂದ ಮೊದಲಿನಿಂದಲೂ ಕೇಳಿದುದು ಸಿಗುತ್ತಿದ್ದುದರಿಂದ ತಾಯಿಯೇ ಆಗಲಿ, ತಂದೆಯೇ ಆಗಲಿ, ಚಿಕ್ಕಮ್ಮನಾಗಲಿ ದೊಡ್ಡಮ್ಮ ನಾಗಲಿ ಅವರ ಮುಂದೆ ಜೋರಾಗಿ ಮಾತಾಡಿ ಬಿಟ್ಟರೇ ಸಾಕು, ತನಗೆ ಬೇಕಾದಂತಿರಬಹುದೆಂಬ ಒಂದು ತಾತ್ಸಾರ ಮೂಡಿತ್ತು ಅವನಲ್ಲಿ! ಎಂದರೆ ತನ್ನಿಚ್ಛೆಯನ್ನು ಕೊಂಚ ಗಡುಸಾಗಿ ತೋರಿದರೇ ಅದನ್ನು ಅವರು ನಡೆಸಿ ಕೊಡುವರು--ಇಲ್ಲದಿದ್ದರೆ ಇಲ್ಲವೆಂದು ತಿಳಿದಿದ್ದ! ಹಾಗೆ ಮಾಡಲಾಗದ ಹುಡುಗ ಯಾವಾಗಲೂ ಸಂಕಟಪಡಬೇಕು. ಇಲ್ಲಿ ಬಂದಾಗ ಹರಿಚರಣನ ಬಟ್ಟೆ ಅಷ್ಟಾಗಿ ಚೆನ್ನಾಗಿಲ್ಲದುದು ಕಂಡು ಅವನಿಗೂ ಇದನ್ನು ಕಲಿಸಿ ಕೊಟ್ಟಿದ್ದ. ಆದರೆ ಈಗ ತನ್ನ ವಿಷಯಕ್ಕೇ ತಕ್ಷಣ ಯಾವ ಉತ್ತರವೂ

ಅವನಿಗೆ ಹೊಳೆದಿರಲಿಲ್ಲ—ಚಿಕ್ಕಮ್ಮನಿಂದ ಬೈಸಿಕೊಂಡು ಜೋರಾಗಿ ಉತ್ತರ ಕೊಡುವುದು ಬಹುದೂರದ ಮಾತು-ಸಾಮಾನ್ಯವಾದ ಉತ್ತರ ಕೂಡ ಬಾಯಿಗೆ ಬಂದಿರಲಿಲ್ಲ-ತೋಚಲಿಲ್ಲ-ಇದರಿಂದ ತೆಪ್ಪಗೆ ಹೊರಗೆ ಬಂದಿದ್ದ. ಈಗ ಅದರಿಂದಲೇ ತನಗಾದ ಅಪಮಾನಕ್ಕೆ ಕೊಂಚವೂ ಬಿಡದೆ ಒಂದಕ್ಕೆರಡರಷ್ಟು ಸೇಡು ತೀರಿಸುವ ಸಂಕಲ್ಪದಿಂದ ಜೀವ ಕೈಯಲ್ಲಿಟ್ಟುಕೊಂಡು ಬಾಗಿಲ ಬಳಿ ಬಂದು ನಿಂತಿದ್ದ. ಅಲ್ಲಿಂದ ಶೈಲಜೆಯ ಮುಖ ಕೊಂಚಕೊಂಚ ಕಾಣುತ್ತಿತ್ತು. ತಲೆಯೆತ್ತಿದೊಡನೆಯೇ ಅತುಲ ಕಣ್ಣಿಗೆ ಬೀಳುವಂತೆ ನಿಂತಿದ್ದ. ಆದರೆ ಅಡಿಗೆಯಲ್ಲಿ ಮಗ್ನಳಾಗಿದ್ದುದರಿಂದ ಅವಳಿಗೆ ಅವನ ಕಾಲಸಪ್ಪಳವೂ ಕೇಳಲಿಲ್ಲ-ತಲೆಯೆತ್ತಿ ಅವನನ್ನು ಅವಳು ನೋಡಲೂ ಇಲ್ಲ. ಆದರೆ ಅತುಲ ಇಂದು ಚಿಕ್ಕಮ್ಮನನ್ನು ಚೆನ್ನಾಗಿ ನೋಡಿದ. ನೋಡಿದುದೇನೋ ಒಂದೆರಡೇ ಕ್ಷಣ-ಆದರೆ ಈಕೆ ತನ್ನ ತಾಯಿಯಂತೆಯೂ ಅಲ್ಲ-ದೊಡ್ಡಮ್ಮನಂತೆಯೂ ಅಲ್ಲ. ಆಕೆಯ ಮುಂದೆ ಮುಖಕ್ಕೆ ಮುಖಕೊಟ್ಟು ಜೋರಾಗಿ ಮಾತಾಡಲು ಯಾರಿಗಾದರೂ ಸಾಧ್ಯವಾದರೂ ತನ್ನಿಂದಂತೂ ಅಸಾಧ್ಯವೆನ್ನಿಸಿತು! ಜೋರೆಲ್ಲ ಇಳಿದು ತೆಪ್ಪಗೆ ನಿಂತಿದ್ದ! ಯಾವುದಾದರೂ ಸದ್ದುಮಾಡಿಯಾದರೂ ಚಿಕ್ಕಮ್ಮನಿಗೆ ತಾನು ಬಂದಿರುವುದನ್ನು ಸೂಚಿಸಲೂ ಅವನಿಗೆ ಧೈರ್ಯ ಸಾಲದೇ ಹೋಯಿತು!

ನೀಲಾ ಯಾವುದೋ ಕೆಲಸಮಾಡುತ್ತಾ ಈಕಡೆ ಬಂದಳು. ಅತುಲನ ಕಾಲಿನಕಡೆ ದೃಷ್ಟಿ ಬೀಳುತ್ತಲೇ ತುಟಿಕಚ್ಚಿ ಬೆಚ್ಚಿ ನಿಂತಳು-ಇದು ಎಕ್ಕಡ ಹಾಕಿಕೊಂಡು ನಿಲ್ಲುವ ಜಾಗವಲ್ಲವೆಂದು ಅವನಿಗೆ ಸಂಜ್ಞೆಮಾಡಲಾರಂಭಿಸಿದಳು.

ಬಾಗಿದ್ದ ಚಿಕ್ಕಮ್ಮನ ಮುಖವನ್ನೊಮ್ಮೆ ನೋಡುತ್ತಲೇ ಅತುಲನ ಮನಸ್ಸಿಗೆ ಮುಳ್ಳುಚುಚ್ಚಿದಂತಾಯಿತು. ಮೆಲ್ಲನೆ ಸದ್ದಿಲ್ಲದೆ ಅಲ್ಲಿಂದ ನುಸುಳಿಕೊಂಡು ಹೋಗೋಣವೆಂದುಕೊಂಡ ಒಮ್ಮೆ-ಇಲ್ಲಿಂದಲೇ ಚಪ್ಪಲಿಗಳನ್ನು ಬಿಚ್ಚಿ ಹೊರಗೆಸೆದು ಬಿಡುವುದು ಎಂದುಕೊಂಡ ಮರುನಿಮಿಷವೇ! ಆದರೆ ತಂಗಿಯೆದುರಿಗೆ ಹೆದರಿಕೊಳ್ಳುವುದು ಅತ್ಯಂತ ನಾಚಿಕೆಗೇಡೆನ್ನಿಸಿತು. ನಿಜವಾಗಿ ಅವನಿಗೆ ಹೀಗೆ ಬರಕೂಡದೆಂಬುದು ಗೊತ್ತಿರಲಿಲ್ಲ-ಅಥವಾ ತನ್ನ ಹಠದಿಂದಾಗಲೀ ಆ ಆಜ್ಞೆಯನ್ನು ಅವನು ಮೀರಿರಲಿಲ್ಲ-ತಾಯಿ ತಂದೆಯರ ಮುಂದೆ ತಾನು ಆಡಿದ್ದೇ ಆಟ, ಮಾಡಿದ್ದೇ ಮಾಟವಾಗಿ ಸ್ವೇಚ್ಛೆಯಿಂದಿದ್ದುದರಿಂದ ಒಮ್ಮೆ ನಡೆಸಿದುದರಿಂದ ಹಿಂದೆ ಬೀಳುವುದೆಂದರೆ ಅವಮಾನವೆನ್ನಿ

ವಷ್ಟು ಸೂಕ್ಷ್ಮವಾಗಿತ್ತು ಅವನ ಸ್ವಭಾವ! ಭಯದಿಂದ ಮುಖ ಒಣಗಿ ಹೋಗಿದ್ದರೂ, ಅಲ್ಲಿ ನಿಂತರೆ ತನಗೆ ಸರ್ವನಾಶವೆಂದು ತಿಳಿದರೂ ಅಭಿಮಾನಿ ದುರ್ಯೋಧನನಂತೆಯೇ ಒಂದು ಸೂಜಿಮೊನೆಯಷ್ಟು ಭೂಮಿ ಬಿಡಲೂ ಅವನು ಸಿದ್ಧನಾಗಿರಲಿಲ್ಲ.

ಶೈಲಜಾ ತಲೆಯೆತ್ತಿದಳು. ಪ್ರೇಮದಿಂದ ಮೃದುನಗೆ ನಕ್ಕು "ಅತುಲನೇ–ಬಂದೆಯಾ–ಬಾ ಮಗು–ಕೊಂಚ–ಇದೇನೋ ಇದು–ಚಪ್ಪಲಿ ಮೆಟ್ಟಿಕೊಂಡು?—ಇಳಿಕೆಳಗೆ–ಕೆಳಗಿಳಿ–" ಎಂದಳು.

ಇನ್ನಾರಾದರೂ ಹುಡುಗರು ಶೈಲಜೆಯಿಂದ ಇಷ್ಟು ಮಾತು ಕೇಳಿದ್ದರೆ ಕೂಡಲೇ ಓಡಿಹೋಗಿ ಜೀವ ಉಳಿಸಿಕೊಳ್ಳುತ್ತಿದ್ದರು. ಆದರೆ ಅತುಲ ತಲೆ ತಗ್ಗಿಸಿ ಅಲ್ಲಿಯೇ ಹಾಗೆಯೇ ನಿಂತಿದ್ದ!

ಶೈಲಜಾ ಎದ್ದುನಿಂತು "ಎಕ್ಕಡ ಹಾಕಿಕೊಂಡು ಇಲ್ಲಿಗೆ ಬರಕೂಡದು ಅತುಲ–ಕೆಳಗಿಳಿ" ಎಂದಳು.

"ಹೊಸಲಿನ ಹೊರಗೆ ನಿಂತಿದ್ದೇನೆ–ಅದರಲ್ಲೇನು ತಪ್ಪು?" ಎಂದ ಅತುಲ ಕ್ಷೀಣದನಿಯಲ್ಲಿ.

ಶೈಲಜಾ ಕೊಂಚ ಬಿರುಸಾಗಿಯೇ "ತಪ್ಪು–ಹೋಗು" ಎಂದಳು.

ಅತುಲ ಆದರೂ ಅಲುಗಾಡಲಿಲ್ಲ. ಹರಿಚರಣ, ವಿಪಿನ, ಕನ್ಹಯ್ಯ ಎಲ್ಲರೂ ಹಿಂದೆ ಅವಿತುಕೊಂಡು ತನ್ನ ಈ ದುಸ್ಥಿತಿ ಕಂಡು ನಗುತ್ತಿರಬಹುದೆಂದು ಮನಸ್ಸಿನಲ್ಲಿಯೇ ಚಿತ್ರಿಸಿಕೊಂಡ ಅತುಲ! ಇದರಿಂದ ಕಡಿವಾಣ ಹಾಕಿದ ಕುದುರೆಯಂತೆ ತಲೆ ಕುಣಿಸಿ "ನಾವು ಚುಂಚರಾದಲ್ಲಿ ಚಪ್ಪಲಿ ಹಾಕಿಕೊಂಡೇ ಅಡಿಗೆ ಮನೆಗೆ ಹೋಗುತ್ತಿದ್ದೆವು–ಆದುದರಿಂದ ಇಲ್ಲಿ ಹೊಸಲಿನ ಹೊರಗೆ ನಿಂತುದೇನೂ ತಪ್ಪಿಲ್ಲ!" ಎಂದ.

ಈ ಹಠಮಾರಿತನ ಕಂಡು ಶೈಲಜೆಗೆ ವಿಪರೀತ ಆಶ್ಚರ್ಯವಾಗಿ ಆಕೆ ಎದ್ದುನಿಂತಳು. ಅವಳ ಕಣ್ಣುಗಳಿಂದ ಬೆಂಕಿಯ ಕಿಡಿಗಳು ಹಾರುತ್ತಿದ್ದಂತೆ ತೋರುತ್ತಿತ್ತು!

ಆವೇಳೆಗೆ ಸರಿಯಾಗಿ ಹರಿಚರಣನ ಅಣ್ಣ ಮಣೀಂದ್ರ ವ್ಯಾಯಾಮ ಮಾಡುತ್ತಿದ್ದವನು ಡಂಬಲ್ಸ್ ಎತ್ತಿಕೊಂಡು ಪಕ್ಕದಲ್ಲಿ ಸರಸರನೆ ಹೋಗುತ್ತಿದ್ದವನು ಚಿಕ್ಕಮ್ಮನ ಕಣ್ಣುಗಳ ಕಡೆ ನೋಡಿ ಆಶ್ಚರ್ಯದಿಂದ–"ಏನಾಯಿತು, ಚಿಕ್ಕಮ್ಮ?" ಎಂದು ಕೇಳಿದ.

ವಿಪರೀತ ಕೋಪದಿಂದ ಶೈಲಜೆಯ ಬಾಯಲ್ಲಿ ಮಾತೇ ಹೊರಡಲಿಲ್ಲ. ಅಲ್ಲಿಯೇ ನಿಂತಿದ್ದ ನೀಲಾ ಅತುಲನಕಡೆ ಕೈ ತೋರಿಸಿ "ಅತುಲಣ್ಣ ಚಪ್ಪಲಿ ಮೆಟ್ಟಿಕೊಂಡೇ ಇಲ್ಲಿ ನಿಂತಿದ್ದಾನೆ-ಎಷ್ಟೇ ಹೇಳಿದರೂ ಅಲ್ಲಿಂದ ಇಳಿಯುವುದಿಲ್ಲ" ಎಂದಳು.

"ಏಯ್-ಇಳಿಯೋ ಕೆಳಕ್ಕೆ" ಎಂದ ಮಹೇಂದ್ರ ಬಿರುಸುದನಿಯಲ್ಲಿ.

"ಇಲ್ಲಿ ನಿಂತರೇನು ತಪ್ಪು-ಈ ಚಿಕ್ಕಮ್ಮನಿಗೆ ನನ್ನನ್ನು ಕಂಡರೆ ಆಗುವುದಿಲ್ಲ. ಅದಕ್ಕೋಸ್ಕರ ಸುಮ್ಮನೆ 'ಹೋಗು, ಹೋಗು' ಎನ್ನುತ್ತಾಳೆ" ಎಂದ ಅತುಲ ಮೊದಲ ಹಾಗೆಯೇ!

ಮಹೇಂದ್ರ ಮೆಟ್ಟಿಲೇರಿ ಬಂದು ಅತುಲನ ಬೆನ್ನಿನ ಮೇಲೊಂದು ಏಟುಬಿಗಿದ ಜೋರಾಗಿ-"'ಎನ್ನುತ್ತಾಳೆ' ಅಲ್ಲ 'ಎನ್ನುತ್ತಾರೆ' ಅನ್ನಬೇಕೋ-ನೀಚ" ಎಂದ.

ಮಹೇಂದ್ರ ವ್ಯಾಯಾಮ ನಡೆಸಿ ಗಟ್ಟಿಮುಟ್ಟಾಗಿದ್ದ ಆಳು. ಜತೆಗೆ ಏಟೂ ಜೋರು! ಇದರಿಂದ ಅತುಲನ ಕಣ್ಣಿಗೆ ಕತ್ತಲು ಕವಿದಂತಾಗಿ ಅಲ್ಲಿಯೇ ಹಾಗೆಯೇ ಕುಳಿತುಬಿಟ್ಟ!

ಮಹೇಂದ್ರ ಗಾಬರಿಗೊಂಡ. ಇಷ್ಟೊಂದು ಜೋರಾಗಿ ಹೊಡೆಯುವುದು ಅವನಿಚ್ಛೆಯೂ ಅಲ್ಲ-ಅದರ ಆವಶ್ಯಕತೆಯೂ ಇರಲಿಲ್ಲ. ವ್ಯಗ್ರತೆಯಿಂದ ಬಾಗಿ ಅತುಲನ ಎರಡು ಕೈಗಳನ್ನು ಹಿಡಿದು ಎತ್ತಿ ನಿಲ್ಲಿಸಿದೊಡನೆಯೇ ಅತುಲ ರೋಷದಿಂದ ಚಿರತೆಯಂತೆ ಅವನ ಮೇಲೆಬಿದ್ದು ಮೈಪರಚಿ ಕೈಕಚ್ಚಿ ಬಾಯಿಗೆ ಬಂದ ಮಾತುಗಳನ್ನೆಲ್ಲಾ ಅನ್ನಲಾರಂಭಿಸಿದ. ಹಿಂದೂ ಸಮಾಜದಲ್ಲಿ ಮನೆಯಲ್ಲಿ ಆಡಲಾಗದಂತಹ ಈ ಅವಾಚ್ಯ ಮಾತು ಕೇಳಿ ಮಹೇಂದ್ರ ಅವಾಕ್ಕಾದ!

ಅವನು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ. ವಯಸ್ಸಿನಲ್ಲಿ ಉಳಿದ ಹುಡುಗರಿಗಿಂತಲೂ ದೊಡ್ಡವನು. ಅವರೆಲ್ಲ ಅವನೆದುರಿಗೆ ತಲೆಯೆತ್ತಿ ಮಾತಾಡಲೂ ಹೆದರುತ್ತಿದ್ದರು. ಈ ಮನೆಯಲ್ಲಿ ಮೊದಲಿನಿಂದಲೂ ಅದೇ ಪದ್ಧತಿ. ಈ ರೀತಿಯ ಅಸಹ್ಯ, ಅಶ್ಲೀಲ, ಅವಾಚ್ಯ ಬೈಗಳನ್ನು ಯಾರಾದರೂ ಆಡಬಹುದೆಂಬುದೂ ಕಲ್ಪನೆಗೆ ಬಹುದೂರವಾಗಿತ್ತು. ಈಗಂತೂ ಅವನಿಗೆ ಮೈಮರೆತಂತಾಗಿ ಅತುಲನನ್ನು ಹಿಡಿದು ಕೆನ್ನೆಗೆ ಎರಡು ಬಿಗಿದು ಕೆಳಗೆ ನೂಕಿಬಿಟ್ಟ. ಕನ್ಹಯ್ಯ, ವಿಪಿನ, ಪಟಲ ಎಲ್ಲರೂ ಜೋರಾಗಿ ಚೀತ್ಕಾರ ಮಾಡಿದರು. ಮಹೇಂದ್ರನ ತಾಯಿ ಸಿದ್ಧೇಶ್ವರಿ ಸಂಧ್ಯಾಜಪವನ್ನು ಬಿಟ್ಟು

ಓಡಿಬಂದರು. ನಡುಕಲಸೊಸೆ ನಯನತಾರಾ ತನ್ನ ಕೋಣೆಯಲ್ಲಿ ತಿಂಡಿ ತಿನ್ನುತ್ತಿದ್ದವಳು, ನೀರು ಕುಡಿಯಲು ಲೋಟ ಕೈಗೆತ್ತಿಕೊಂಡಿದ್ದಳು. ಈ ಚೀತ್ಕಾರ ಕೇಳಿದೊಡನೆಯೇ ಲೋಟ ಹಾಗೆಯೇ ಬಿಟ್ಟು ಓಡಿಬಂದು ಮಗನ ಸ್ಥಿತಿ ಕಂಡೊಡನೆಯೇ ಅವರ ಮುಖ ಕಪ್ಪಿಟ್ಟಿತು! ಯಾರೋ ಸತ್ತರೋ ಏನೋ ಎನ್ನುವಂತೆ ಚೀತ್ಕರಿಸಿ ಮಗನ ಮೇಲೆ ಬಿದ್ದಳು. ಇದೆಲ್ಲಾ ಸೇರಿ ಆದ ಗಲಾಟೆಯಿಂದ ಹೊರಗಿನ ಗಂಡಸರೆಲ್ಲ ಕೆಲಸಕಾರ್ಯ ಬಿಟ್ಟು, ಒಳಕ್ಕೆ ಓಡಿಬಂದರು. ಶೈಲಜಾ ಅಡಿಗೆಮನೆಯಿಂದಲೇ "ಮಣಿ, ನೀನು ಹೋಗು" ಎಂದು ಹೇಳಿ ತನ್ನ ಕೆಲಸದಲ್ಲಿ ಮಗ್ನಳಾದಳು. ಮಣಿ ಸುಮ್ಮನೆ ಹೊರಟು ಹೋದ. ಅವನ ತಂದೆಕೂಡ ನಡುಕಲ ಸೊಸೆಯ ಉನ್ಮತ್ತ ರೀತಿ ಕಂಡು ನಾಚಿಕೆಯಿಂದ ಅಲ್ಲಿಂದ ಹೊರಟುಹೋದರು.

ಈ ಮಹಾಮಾರಿಯ ಗಲಾಟೆ ಮುಗಿಯಿತೆನ್ನುವಾಗ ಹರೀಶ ಹುಡುಗನನ್ನು ಕೇಳಿದ. ಅತುಲ ಎಲ್ಲ ತಪ್ಪನ್ನು ಚಿಕ್ಕಮ್ಮನ ಮೇಲೆಹಾಕಿ ಅಣ್ಣನಿಗೆ ತನ್ನನ್ನು ಹೊಡೆಯಲು ಹೇಳಿದಳು-ಹಾಗೆ-ಹೀಗೆ-ಎಂದು ಚಾಡಿಚುಚ್ಚಿದ. ಹರೀಶ ರೋಷದಿಂದ "ಚಿಕ್ಕತ್ತಿಗೆ-ಮಣಿಗೆ ಇವನನ್ನು ಕೊಂದು ಹಾಕೆಂದು ನೀಹೇಳಿಕೊಟ್ಟೆಯಲ್ಲ?" ಎಂದು ಕಿರುಚಿದ.

ನೀಲಾ ಅಡಿಗೆಮನೆಯೊಳಗಿಂದ ಚಿಕ್ಕಮ್ಮನ ಪರವಾಗಿ ಉತ್ತರ ಕೊಟ್ಟಳು-"ಅತುಲಣ್ಣ ಹೇಳಿದ ಮಾತು ಕೇಳಲಿಲ್ಲ. ದೊಡ್ಡಣ್ಣನನ್ನು ಸಿಕ್ಕಾಪಟ್ಟೆ ಬೈದ-ಅದಕ್ಕೋಸ್ಕರ-"

ನಯನತಾರಾ ಮಗನನ್ನು ವಹಿಸಿಕೊಂಡು "ನಾನೂ ಹೇಳಿಯೇ ತೀರುತ್ತೇನೆ-ನಿನ್ನ ಅಪ್ಪಣೆಯಂತೆ ಅವನಿಗೆ ಏಟು ಬೀಳುತ್ತಿತ್ತು-ಅದರಿಂದಲೇ ಅವನು ಬೈದಿರಬೇಕು. ಇಲ್ಲದಿದ್ದರೆ-ನನ್ನ ಮುದ್ದುಮಣಿ ಅತುಲ ಯಾರನ್ನಾದರೂ ಬೈಯುವನೇನು?-ಅವನಂತಹವನಲ್ಲವೇ ಅಲ್ಲ" ಎಂದಳು.

ಹರೀಶ ಅವಳ ಮಾತನ್ನು ಅನುಮೋದಿಸುತ್ತಾ ಇನ್ನೂ ಕೋಪದದನಿಯಲ್ಲಿ "ನೀಲಾ-ನಿಮ್ಮ ಚಿಕ್ಕಮ್ಮನನ್ನು ಕೇಳು-ಅತುಲನನ್ನು ಹೊಡೆಸಲು ಆಕೆ ಯಾರು? ಮಾತು ಕೇಳದಿದ್ದರೆ ನಮಗೇಕೆ ತಿಳಿಸಕೂಡದಾಗಿತ್ತು?-ನಾವಿನ್ನೂ ಇರುವಾಗ ಅವನನ್ನು ಶಿಕ್ಷಿಸಲು ಆಕೆಗೇನಧಿಕಾರ?" ಎಂದ.

ನೀಲಾ ಈ ಮೂರು ಪ್ರಶ್ನೆಗಳಲ್ಲಿ ಒಂದಕ್ಕೂ ಉತ್ತರಕೊಡಲಿಲ್ಲ. ಸಿದ್ಧೇಶ್ವರಿ ಇದುವರೆಗೂ ಮೂಲೆಯಲ್ಲಿ ಸುಸ್ತಾಗಿ ಕುಳಿತಿದ್ದರು. ಮೊದಲೇ ಮೈಚೆನ್ನಾಗಿರಲಿಲ್ಲ, ಜತೆಗೆ ಈ ಗಲಾಟೆ ಬೇರೆ! ಅವರು ಈ ಸಂಸಾರದಲ್ಲಿ

ಮಕ್ಕಳನ್ನು ಪಾಲಿಸಿ ಪೋಷಿಸಿ ನೋಡಿಕೊಳ್ಳುವುದಲ್ಲದೆ ಮತ್ತಾವುದಕ್ಕೂ ಪ್ರವೇಶಿಸುತ್ತಿರಲಿಲ್ಲ. ಕಾರಣವಿಷ್ಟೆ—ದೇವರು ಈ ಸಂಸಾರಕ್ಕೆ ವಿಪರೀತ ಅನ್ಯಾಯ ಮಾಡಿರುವನೆಂದು ಅವರ ದೃಢನಂಬಿಕೆ. ತಮ್ಮನ್ನು ದೊಡ್ಡ ಸೊಸೆಮಾಡಿ ಅದಕ್ಕೆ ಸರಿಯಾದ ಬುದ್ಧಿಶಕ್ತಿ ಕೊಡಲಿಲ್ಲ. ಶೈಲಜಾ ಚಿಕ್ಕ ಸೊಸೆಯಾದರೂ ಅವಳಿಗೆ ಅಪಾರ ಬುದ್ಧಿಶಕ್ತಿ ಕೊಟ್ಟಿದ್ದ! ಲೆಕ್ಕಾಚಾರದಲ್ಲಿ, ಕಾಗದಪತ್ರ ಬರೆಯುವುದರಲ್ಲಿ, ಮಾತುಕತೆಯಲ್ಲಿ, ರೋಗಿಗಳ ಉಪಚಾರ ದಲ್ಲಿ, ಎಲ್ಲರ ಮೇಲೆ ಆಡಳಿತ ನಡೆಸುವುದರಲ್ಲಿ, ಅಡಿಗೆ ಮಾಡುವುದರಲ್ಲಿ, ಮನೆಯ ಎಲ್ಲ ವಿಷಯದಲ್ಲಿಯೂ ಶೈಲಜೆಯನ್ನು ಸರಿಗಟ್ಟುವವರು ಒಬ್ಬರೂ ಇರಲಿಲ್ಲ. ಅವರು ಆಗಾಗ ಅನ್ನುತ್ತಿದ್ದುದೂ ಉಂಟು—ನಮ್ಮ ಶೈಲ ಗಂಡ ಸಾಗಿದ್ದಿದ್ದರೆ ಈವೇಳೆಗೆ ಜಡ್ಜಿಯಾಗಿರುತ್ತಿದ್ದಳು-ಎಂದು. ಅದೇ ಶೈಲಜೆ ಯನ್ನು ನಡುಕಲ ವೈದುನ ಛೀಮಾರಿ ಹಾಕಲಾರಂಭಿಸಲು, ಅವರಿಗೆ ವಿವೇಚನೆಯೆಲ್ಲ ಹಾರಿಹೋಯಿತು! ಕೂಡಲೇ ಕೊಂಚ ಕೋಪದ ದನಿ ಯಲ್ಲಿಯೇ—"ಅದು ಸರಿ, ಹಾಗಾದರೆ ನೀನು ನಮ್ಮಲ್ಲಿ ದೂರು ಹೇಳದೆ ನೀನೇ ಏಕೆ ಶೈಲಳನ್ನು ಬಯ್ಯುತ್ತಿದ್ದೀಯೆ? ಅಮ್ಮ ಇದ್ದಾರೆ, ನಾನಿದ್ದೇನೆ-ಸೊಸೆಯ ಮೇಲೆ ಅಧಿಕಾರ ನಡೆಸಬೇಕಾದರೆ ನಾವು ನಡೆಸುತ್ತೇವೆ-ಶಿಕ್ಷಿಸ ಬೇಕಾದರೂ ನಾವಿದ್ದೇವೆ. ನೀನು ಗಂಡಸು-ವಯಸ್ಸಾದವನು-ಇದೇನು ಇದು-ಈ ಮಾತೇ ಆಡುವುದು-ಹೋಗು, ಹೋಗು!-ಜನ ಕೇಳದರೆ ಏನಂದಾರು?" ಎಂದರು.

ಹರೀಶ ಕೊಂಚ ನಾಚಿಕೆಯಿಂದ "ನೀವು ಎಲ್ಲ ನೋಡಿಕೊಳ್ಳುವಂತಿ ದ್ದಿದ್ದರೆ-ಏನೂ ಯೋಚನೆಯೇ ಇರಲಿಲ್ಲ, ಅತ್ತಿಗೆ. ಆಗ ಯಾರನ್ನಾದರೂ ಸಾಯಹೊಡೆಯುತ್ತಿದ್ದರೇನು?" ಎಂದು ಅಂದು ಹೊರಹೊರಡುತ್ತಿ ದ್ದಂತೆಯೇ ಅವನ ಹೆಂಡತಿ ಅವನನ್ನು ತಡೆದು "ಸರಿ-ಅವರು ಸೊಸೆಯನ್ನು ಶಿಕ್ಷಿಸುವುದನ್ನು ನಿಂತು ನೋಡಿಯೇ ಬಿಡಿ" ಎಂದಳು.

ಹರೀಶ ಇದಕ್ಕೇನೂ ಉತ್ತರ ಕೊಡದೆ ಹೊರಗೆ ಹೊರಟುಹೋದ.

೪

ಆದಾದ ಐದಾರು ದಿನಗಳಾದ ಮೇಲೊಂದು ದಿನ ಬೆಳಿಗ್ಗೆಯಿಂದಲೇ ನಡುಕಲಸೊಸೆ ಸಾಮಾನೆಲ್ಲ ಕಟ್ಟಲಾರಂಭಿಸಿದಳು. ಸಿದ್ಧೇಶ್ವರಿಗೆ ಇದು

ತಿಳಿಯಲು ಬಾಗಿಲಬಳಿ ಬಂದು ನಿಂತರು. ಒಂದೆರಡು ನಿಮಿಷ ಸುಮ್ಮನೆ "ಇದೇನು ತಂಗಿ ?" ಎಂದು ಕೇಳಿದರು.

"ನೋಡುತ್ತಿರುವೆಯಲ್ಲಾ-" ಉದಾಸೀನದಿಂದ ರಾಗ ಎಳೆದಳು ನಯನತಾರಾ.

"ನೋಡುತ್ತಿದ್ದೇನೆ-ಸರಿ-ಈಗೆಲ್ಲಿ ಹೊರಡಬೇಕು ?"

"ಎಲ್ಲಾದರೂ ಸರಿಯೆ—"

"ಎಲ್ಲಿ ಅನ್ನುವುದಾದರೂ ಹೇಳು."

"ಹೇಗೆ ಹೇಳಲಿ–ಎಲ್ಲಿ ಹೋಗಬೇಕೋ–ಅವರು ಮನೆ ನೋಡಿಬರಲು ಹೋಗಿದ್ದಾರೆ. ಅವರು ಬರುವ ತನಕ ಏನೂ ಹೇಳಲಾರೆ."

"ನಿಮ್ಮ ಮೈದುನನಿಗೆ ತಿಳಿಸಿದೆಯೇನು ?"

"ಅವರಿಗೆ ತಿಳಿದೇನು ಪ್ರಯೋಜನ? ಯಾರಿಗೆ ತಿಳಿದೇ ತಿಳಿಯಬೇಕೋ ಆ ಕಿರಿಯ ಸೊಸೆಗೆಲ್ಲವೂ ಗೊತ್ತಿದೆ. ಒಂದು ಬಾರಿ ಬಂದು ನೋಡಿಕೊಂಡೂ ಹೋಗಿದ್ದಾಳೆ ಆಕೆ."

ನಯನತಾರೆಯ ಈ ಮಾತು ಶುದ್ಧ ಸುಳ್ಳು. ಶೈಲಜೆಗೆ ಬೆಳಗಿನಿಂದ ಉಸಿರಾಡುವುದಕ್ಕೂ ಪುರುಸೊತ್ತಿರಲಿಲ್ಲ. ಅವಳಿಗೆ ಇದು ತಿಳಿಯಲೇ ತಿಳಿಯದು.

ಸಿದ್ಧೇಶ್ವರಿ ಕ್ಷಣಮಾತ್ರ ಮೌನವಾಗಿದ್ದು, "ನೋಡು, ತಂಗಿ, ನೀವು ನಿಮ್ಮ ಮೈದುನನ ಮಾನಮರ್ಯಾದೆ ಗೌರವಗಳನ್ನು ಇನ್ನೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಆದರೆ ಹೊರಗಿನವರನ್ನು ಯಾರನ್ನಾದರೂ ಕೇಳಿ, ಹೇಳುತ್ತಾರೆ–ಜನ್ಮ ಜನ್ಮಗಳ ತಪಸ್ಸಿನಿಂದಲೇ ಇಂತಹ ಮೈದುನ ಸಿಗುವರು–ಇಲ್ಲದಿದ್ದರೆ ಎಲ್ಲಿ!" ಎಂದರು.

ನಯನತಾರಾ ಇದ್ದಕ್ಕಿದ್ದಂತೆಯೇ ಉದ್ದೀಪ್ತಳಾದಳು—

"ನಮಗೇನು ಅದು ತಿಳಿಯದೇ ಅಕ್ಕ ? ನಾವಿಬ್ಬರೂ ಹಗಲೂ ರಾತ್ರಿ ಇದೇ ಅಂದುಕೊಳ್ಳುತ್ತೇವೆ. ಮೈದುನ ಒಬ್ಬರೇ ಅಲ್ಲ–ನಿಮ್ಮಂತಹ ಓರಗಿತ್ತಿ ಸಿಗುವುದೂ ನಮ್ಮ ಪುಣ್ಯವೆಂದು–ನಿಮ್ಮ ಮನೆಯಲ್ಲಾದರೆ ನಾವು ಕಸಗುಡಿಸಿ ಮುಸುರೆತಿಕ್ಕುವ ಆಳುಗಳಾಗಿ ಬೇಕಾದರೂ ಇರುತ್ತೇವೆ. ಆದರೆ ಇಲ್ಲಿ ಇನ್ನೊಂದು ಘಳಿಗೆಕೂಡ ಇರುವುದಸಾಧ್ಯ !"

ಈವತ್ತು ನಯನತಾರೆಯ ದನಿಯಲ್ಲೇನೋ ಗಾಢತೆ ಕಂಡು

ಸಿದ್ಧೇಶ್ವರಿಯ ಮನ ಕರಗಿತು. "ಇದು ನನ್ನದಲ್ಲ ತಂಗಿ, ನಿಮ್ಮದೇ ಮನೆ. ನೀವು ಖಂಡಿತ ಇಲ್ಲಿಂದ ಹೋಗಲೇ ಕೂಡದು!"

ನಯನತಾರಾ ತಲೆಯಲ್ಲಾಡಿಸಿ ಕರುಣದನಿಯಲ್ಲಿ "ಅಂತಹ ದಿನವೇನಾದರೂ ದೇವರ ದಯೆಯಿಂದ ಬಂದರೆ ನಿಮ್ಮ ಬಳಿಯೇ ಇರುತ್ತೇನೆ ಅಕ್ಕ. ಆದರೆ ಈಗ ಇಲ್ಲಿರು ಎಂದು ನೀನು ಬಲವಂತ ಮಾಡಬೇಡ-ನನ್ನ ಅತುಲ ಎಲ್ಲರ ಕಣ್ಣಿಗೂ ಸುಣ್ಣವಾಗಿ ಹೋಗಿದ್ದಾನೆ. ನಾನು ಅವನನ್ನು ಕರೆದು ಕೊಂಡು ಎಲ್ಲಾದರೂ ಹೋಗುತ್ತೇನೆ, ಅಕ್ಕ-ನೀನು ಆಶೀರ್ವಾದ ಕೊಡು" ಎಂದಳು.

ಸಿದ್ಧೇಶ್ವರಿಗೆ ಬಹಳ ಕೋಪ ಬಂತು—

"ಇದೆಂತಹ ಮಾತು, ತಂಗಿ? ಆಕಸ್ಮಿಕವಾಗಿ ಏನೋ ಒಂದು ಹೆಚ್ಚು ಮಾತಂದರೆ ಅದನ್ನು ಯಾವಾಗಲೂ ನೆನಪಿನಲ್ಲಿಡಬೇಕೇನು? ಅತುಲನೂ ನಮ್ಮ ಮಗನೆ—"

ಅವರ ಮಾತು ಮುಗಿಯಲು ಬಿಡುವಷ್ಟು ನಯನತಾರೆಗೆ ಸಾವಧಾನ ವಿಲ್ಲ—

"ನಾನು ಯಾವುದನ್ನೂ ನೆನಪಿನಲ್ಲಿಟ್ಟಿಲ್ಲ-ಅದರಿಂದಲೇ ಅವಳ ಪೆಟ್ಟು ಗಳನ್ನು ತಿಂದು ತಿಂದು ಸಾಯುತ್ತಿದ್ದೇನೆ. ಏನಾದರೂ ಆದಾಗ 'ಅಯ್ಯೋ ಅಮ್ಮ' ಅಂತ ಅತ್ತುಬಿಟ್ಟರಾಯಿತು-ಮರುನಿಮಿಷವೇ ಆಕೆಯ ಮಾತೇ ಗಂಗಾಜಲ!-ನನಗೆ ಒಂದು ಮಾತೂ ಜ್ಞಾಪಕವೇ ಇರುವುದಿಲ್ಲ, ನಾನು ಎಲ್ಲವನ್ನೂ ಮರೆತಿದ್ದೆ. ಅಕ್ಕ-ಈ ಮಾತಂದೆ ನಾನು ಅಂತ ನೀನು ಕೋಪಿಸಿ ಕೊಳ್ಳಬೇಡ, ಅಕ್ಕ. ನೀನೇನಾದರೂ ಹೇಳು-ಕಿರಿಯಸೊಸೆ ಸಾಮಾನ್ಯ ವಾದ ಹೆಂಗಸಲ್ಲ-ಮನೆಯಲ್ಲಿ ಎಲ್ಲರಿಗೂ ಹೇಳಿಕೊಟ್ಟಿದ್ದಾಳೆ. ಇದರಿಂದ ಅತುಲನೊಂದಿಗೆ ಯಾರೂ ಮಾತನಾಡುವುದೇ ಇಲ್ಲ. ಹುಡುಗ ಪೆಚ್ಚು ಮೋರೆಯಿಂದ ಮುದುರಿಕೊಂಡಿರುವುದು ಕಂಡು ಏನೋ ಅಂತ ಕೇಳಿದೆ. ಆಗ ಗೊತ್ತಾಯಿತು ವಿಷಯ! ಇಲ್ಲ, ಅಕ್ಕ-ನಾವು ಇಲ್ಲಿದ್ದರೆ ಏನೂ ಪ್ರಯೋಜನವಿಲ್ಲ. ಒಂದೇ ಮನೆಯಲ್ಲಿದ್ದುಕೊಂಡು ನನ್ನ ಹುಡುಗ ಹೀಗೆ ಕೊರಗಿ ಕಂಗಾಲಾದರೆ-ಖಂಡಿತ ಕಾಯಿಲೆ ಬೀಳುತ್ತಾನೆ-ಇವಕ್ಕಿಂತ ನಾವು ಬೇರೆ ಹೋಗಿ ಇರುವುದೇ ಒಳ್ಳೆಯದು. ಅವಳ ಹೊಟ್ಟೆಯೂ ತಣ್ಣಗಾಗುತ್ತೆ-ನನಗೂ ಉಸಿರಾಡಲು ಸಾಧ್ಯ........"

ಹೂತಾಡುತ್ತಾ ಆಡುತ್ತಾ ಮಗನ ದುಃಖದಿಂದ ನಯನತಾರೆಯ ಕಣ್ಣಿನಿಂದ ಎರಡು ಹನಿ ನೀರು ಬಿದ್ದು ಸಿದ್ಧೇಶ್ವರಿಯನ್ನು ಮರುಳಾಗಿಸಿತ್ತು. ಮಕ್ಕಳ ಕೊರಗನ್ನು ಕಂಡು ಸಹಿಸುವುದು ಅವರಿಗೆ ಸಾಗದ ವಿಷಯ. ತಮ ಸೆರಗಿನಿಂದಲೇ ನಯನತಾರೆಯ ಕಣ್ಣನ್ನೊರೆಸಿ ಸಿದ್ಧೇಶ್ವರಿ ತಲೆತಗ್ಗಿಸಿ ಕುಳಿತಿದ್ದರು. ಮಾತನಾಡದೆಯೇ ಇಷ್ಟು ದೊಡ್ಡ ಶಿಕ್ಷೆ ಕೊಡಲು ಸಾಧ್ಯವೆಂಬುದೂ ಅವರ ಕಲ್ಪನೆಗೆ ಬಂದಿರಲಿಲ್ಲ. ನಿಟ್ಟುಸಿರು ಬಿಟ್ಟು—

"ಪಾಪ! ಮಗು! ಮನೆಯಲ್ಲಿ ಯಾರೂ ಅವನೊಂದಿಗೆ ಮಾತೇ ಆಡುವುದಿಲ್ಲವೇ?" ಎಂದರು.

ನಯನತಾರಾ ತಾನೂ ನಿಟ್ಟುಸಿರುಬಿಟ್ಟು "ನೀನೇ ಕೇಳಿ ನೋಡು, ಅಕ್ಕ" ಎಂದಳು.

ಕೂಡಲೇ ಹರಿಚರಣನನ್ನು ಕರೆದು ಕೇಳಿದರು ಸಿದ್ಧೇಶ್ವರಿ. ಹರಿ ಮಿಂಚಿನ ವೇಗದಲ್ಲಿ ಉತ್ತರಕೊಟ್ಟ—"ಆ ನೀಚನೊಂದಿಗೆ ಯಾರು ಮಾತನಾಡುತ್ತಾರಮ್ಮ?–ಬಾಯಿಗೆ ಬಂದಂತೆ ಅಣ್ಣನನ್ನು ಬೈದ, ಚಿಕ್ಕಮ್ಮನನ್ನು ಸಿಕ್ಕಿದಂತೆಲ್ಲಾ ಅಂದ–"

ಸಿದ್ಧೇಶ್ವರಿಗೆ ಕೂಡಲೇ ಉತ್ತರ ಕೊಡಲು ತೋಚಲಿಲ್ಲ. ಕೊಂಚ ಹೊತ್ತಿನ ನಂತರ ಮೆಲ್ಲನೆ "ಆದುದು ಆಗಿಹೋಯಿತು, ಹರಿ, ಅದಕ್ಕೆ ಈಗೇನು ಮಾಡಲಾದೀತು?–ಪಾಪ–ಈಗಲಾದರೂ ಹತ್ತಿರ ಕರೆದು ಮಾತನಾಡಿಸಿ ಎಲ್ಲರೂ" ಎಂದರು.

ಹರಿಚರಣ ತಲೆಯಲ್ಲಾಡಿಸಿದ—"ಅವನೊಂದಿಗೆ ಮಾತಾಡುವವರಿಗೇನು ತಾನೇ ಕಡಿಮೆ? ಈ ಮೊಹಲ್ಲದ ಹೊರಕೇರಿಯಲ್ಲಿ ಬೇಕಾದಷ್ಟು ಜನ ಗಾಡಿಹೊಡೆಯುವವರಿದ್ದಾರೆ. ಅಲ್ಲಿಗೆ ಹೋಗಲಿ–ಮನಬಂದಷ್ಟು ಪ್ರಿಯ ಸ್ನೇಹಿತರು ಸಿಗುತ್ತಾರೆ–"

ನಯನತಾರಾ ಬೆಂಕಿಯಾದಳು—"ನಿನ್ನ ನಾಲಿಗೆಯೂ ಏನೂ ಕಡಿಮೆಯಿಲ್ಲ, ಹರಿ–ನಮ್ಮ ವಿಷಯಕ್ಕೆ ಈ ಮಾತೇ ನೀನನ್ನುವುದು?–ಅದೂ ಒಳ್ಳೆಯದಕ್ಕೇ! ನಾವು ಗಾಡಿ ಹೊಡೆಯುವವರೊಂದಿಗೇ ಕೂಡಿಕೊಳ್ಳುತ್ತೇವೆ. ಏಳು ಅಕ್ಕ, ನಮ್ಮ ಸಾಮಾನುಗಳನ್ನೆಲ್ಲಾ ಕಟ್ಟಿಡುವಂತೆ ಆಳುಗಳಿಗೆ ಹೇಳು."

ಹರಿಚರಣ ತಾಯಿಯ ಕಡೆ ನೋಡುತ್ತಾ "ಅತುಲ ಎಲ್ಲರೆದುರಿಗೂ ನಿಂತು ಕಿವಿಹಿಡಿದು ಕ್ಷಮೆಬೇಡಿದರೆ ಮಾತ್ರ ನಾವು ಅವನೊಂದಿಗೆ ಮಾತ

ನಾಡುತ್ತೇವೆ. ಇಲ್ಲದಿದ್ದರೆ ಚಿಕ್ಕಮ್ಮ-ಇಲ್ಲ, ಅಮ್ಮಾ, ಇಂಥವರೊಂದಿಗೆ ಮಾತನಾಡಲು ನಮ್ಮಿಂದ ಸಾಧ್ಯವಿಲ್ಲಮ್ಮ" ಎಂದು ಮತ್ತಾವ ಮಾತಿಗೂ ಎಡೆಕೊಡದೆ ಅಲ್ಲಿಂದ ಹೊರಟೇಹೋದ!

ಸಿದ್ಧೇಶ್ವರಿ ಸುಸ್ತಾಗಿ ಕುಳಿತರು. ನಡುಕಲಸೊಸೆ ಮೃದು ಕಂಠದಿಂದ

"ಆದರೆ ಕಿರಿಸೊಸೆ ಒಂದುಬಾರಿ ಹುಡುಗರಿಗೆ ಹೇಳಿಬಿಟ್ಟರೆ ಎಲ್ಲಾ ಸರಿಹೋಗುತ್ತದೆ" ಎಂದಳು.

"ಹುಂ! ಎಲ್ಲ ಸರಿಹೋಗುತ್ತದೆ!" ಎಂದರು ಸಿದ್ಧೇಶ್ವರಿ ಹಾಗೆಯೇ ತಲೆದೂಗುತ್ತಾ.

"ನೀನೇ ನೋಡು, ಅಕ್ಕ, ಈ ಹುಡುಗರು ದೊಡ್ಡವರಾದ ಮೇಲೆ ನಿನ್ನ ಮಾತು ಕೇಳುವರೇನು? ಅಥವಾ ನಿನ್ನಲ್ಲಿ ವಿಶ್ವಾಸ ತೋರಿಸುವರೇನು? ನಾಳಿನ ವಿಷಯ ಏನೂ ಹೇಳಲು ಸಾಧ್ಯವಿಲ್ಲ. ಆದರೆ ಈಗಲೇ ನಿನ್ನ ಮಕ್ಕಳೆಲ್ಲ ನಿನಗೆ ಹೊರಗಿನವರಾಗಿದ್ದಾರೆ. ನನ್ನ ಅತುಲನನ್ನು ಉಳಿದವರು ಏನಾದರೂ ಅನ್ನಲಿ-ಅವನು ತಾಯಿಗಾಗಿ ಪ್ರಾಣಕೂಡ ತೆರಲು ಸಿದ್ಧ! ಹೀಗೆ ಮೂಗುಮುರಿದು ಹೋದನಲ್ಲಾ-ಅವನದೇನು ಸಿಗ್ಗು, ಅಕ್ಕ-ನಿಜವಾಗಿ ಈ ಜಂಭ ಒಳ್ಳೆಯದಲ್ಲ, ಅಕ್ಕ."

ಸಿದ್ಧೇಶ್ವರಿಗೆ ಈ ಮಾತಿನ ಮೇಲೆ ಗಮನವೇ ಇರಲಿಲ್ಲ. ಉದಾಸೀನ ವಾಗಿ ಉತ್ತರಕೊಟ್ಟರು—"ನಿಜ, ತಂಗಿ, ಈ ಮನೆಯಲ್ಲಿ ಮಣಿಯಿಂದ ಹಿಡಿದು ಪಟಲನವರೆಗೂ ಎಲ್ಲರೂ ಆ ಶೈಲಳ ಕೈಹಿಡಿತದಲ್ಲಿದ್ದಾರೆ. ಅವಳಂ ದುದು, ಅವಳು ಮಾಡಿದುದೇ ಆಗುವುದು-ನನ್ನನ್ನು ಯಾರೂ ಲೆಕ್ಕಕ್ಕೆ ಇಟ್ಟಿಲ್ಲ."

"ಇದೇನು ಒಳ್ಳೆಯದೇ ಅಕ್ಕ?"

ಸಿದ್ಧೇಶ್ವರಿ ತಲೆ ಮೇಲೆತ್ತಿದ್ದರು—"ಯಾವುದು?-ಓ ನೀಲಾ!-ನಿಮ್ಮ ಚಿಕ್ಕಮ್ಮನನ್ನು ಕರಿ ಮಗು."

ನೀಲಾ ಯಾವುದೋ ಕೆಲಸಕ್ಕಾಗಿ ಆ ಕಡೆ ಬರುತ್ತಿದ್ದವಳು ಹಿಂತಿರುಗಿ ದಳು. ನಯನತಾರಾ ಮತ್ತೇನೂ ಹೇಳಲೇ ಇಲ್ಲ. ಸಿದ್ಧೇಶ್ವರಿ ಉತ್ಸುಕತೆ ಯಿಂದ ಶೈಲಳ ದಾರಿ ಕಾಯುತ್ತಿದ್ದರು.

ಶೈಲಜಾ ಕೊಠಡಿಯೊಳಹೊಕ್ಕೊಡನೆಯೇ—"ಸಾಮಾನೆಲ್ಲಾ ಕಟ್ಟಿ ಇಟ್ಟಾಗಿದೆ. ಇವರೆಲ್ಲ ಹೊರಟು ಹೋಗಲೇನು?" ಎಂದು ಕೇಳಿದರು ಸಿದ್ಧೇಶ್ವರಿ.

ಶೈಲಜೆಗೇನೂ ತಿಳಿಯದು. ಕೊಂಚ ಬೆದರಿ "ಏಕೆ?" ಎಂದಳು.

"ಮತ್ತಿನ್ನೇನು? ಎಂತಹ ಕಲ್ಲುಹೃದಯ ನಿನ್ನದು, ಶೈಲ? ನಿನ್ನ ಅಪ್ಪಣೆಯಂತೆ ಅತುಲನೊಂದಿಗೆ ಯಾರೂ ಆಡುವುದಿಲ್ಲ, ಸೇರುವುದಿಲ್ಲ, ಹುಡುಗನ ಸಮಯವಾದರೂ ಹೇಗೆ ಕಳೆಯಬೇಕು, ಹೇಳು ಮತ್ತೆ-ತಮ್ಮ ಮಗ ಹಗಲೂ ರಾತ್ರಿ ಕೊರಗಿ ಕೊರಗಿ ಹುಲ್ಲುಕಡ್ಡಿಯಂತಾಗುವುದನ್ನು ಯಾವ ತಾಯಿ ತಂದೆ ತಾನೇ ನೋಡಿಕೊಂಡಿದ್ದಾರು-ಹಾಗಾದರೆ-ಇವರು ಇಲ್ಲಿರುವುದು ನಿನಗಿಷ್ಟವಿಲ್ಲವೇನು?"

ನಯನತಾರಾ ತಕ್ಷಣವೇ "ಆಗ ಕಿರಿಸೊಸೆಗೆ ಆರಾಮವೇ ಆರಾಮ" ಎಂದಳು.

ಶೈಲಜಾ ಅವಳ ಮಾತನ್ನು ಕಿವಿಯಮೇಲೆ ಹಾಕಿಕೊಳ್ಳಲೇ ಇಲ್ಲ. ಸಿದ್ಧೇಶ್ವರಿಯನ್ನುದ್ದೇಶಿಸಿ "ಇಂತಹ ಹುಡುಗನೊಂದಿಗೆ ನಮ್ಮ ಮನೆಯ ಯಾವ ಹುಡುಗನನ್ನು ಆಡಲು ಬಿಡಲಾರೆ ಅಕ್ಕ-ಅವನು ಎಷ್ಟೊಂದು ಕೆಟ್ಟು ಹೋಗಿರುವನೆಂದರೆ-ಹುಂ-ಹೇಳಲೇ ಸಾಧ್ಯವಿಲ್ಲ" ಎಂದಳು.

ನಯನತಾರೆಗೆ ಇನ್ನು ಸಹಿಸಲಾಗಲಿಲ್ಲ. ಹೆಡೆಮೆಟ್ಟಿದ ಹಾವಿನಂತೆ ಬುಸುಗುಟ್ಟಿದಳು—"ಅಭಾಗೀ-ತಾಯಿಯೆದುರಿಗೇ ಮಗನನ್ನು ಕೆಟ್ಟು ಹೋದವನೆನ್ನುವೆಯಲ್ಲಾ?-ನನ್ನ ಕೊಠಡಿಯಿಂದ ಹಾಳಾಗಿಹೋಗು-ತೊಲಗು-ನಿನ್ನುಸಿರು ಉಡುಗಿಹೋಗ!"

"ಚಿಕ್ಕಕ್ಕ-ನಾನಾಗಿಯೇ ನಿನ್ನ ಕೋಣೆಗೆ ಎಂದೂ ಬಂದಿಲ್ಲ-ಆದರೆ-ನೀನು ಈ ರೀತಿಯಲ್ಲೇ ನಿನ್ನ ಹುಡುಗನನ್ನು ಕೆಡಿಸಿದ್ದೀಯೆ-ಅಷ್ಟೆ" ಎನ್ನುತ್ತಾ ಶೈಲಜಾ ಶಾಂತವಾಗಿ ಕೋಣೆಯಿಂದ ಹೊರಟುಹೋದಳು.

ಸಿದ್ಧೇಶ್ವರಿ ಬಹುಕಾಲ ದಿಕ್ಕುಗಾಣದಂತೆ ಕುಳಿತ್ತಿದ್ದರು. ಏನು ಮಾಡುವುದು, ಏನೆನ್ನುವುದು - ಒಂದೂ ತೋಚಲೇ ಇಲ್ಲ - ಬವಳಿ ಬಂದಂತಾಗಿತ್ತು!

ನಯನತಾರಾ ಇದ್ದಕ್ಕಿದ್ದಂತೆ ಅಳಲಾರಂಭಿಸಿದಳು—"ನಮ್ಮ ಮೇಲಿನ ಮೋಹ, ಆಸೆ ಬಿಟ್ಟುಬಿಡು, ಅಕ್ಕ-ನಾವಿನ್ನು ಹೊರಟುಹೋಗುತ್ತೇವೆ. ಇವರಿಬ್ಬರೂ ಒಂದೇ ಹೊಟ್ಟೆಯಲ್ಲಿ ಹುಟ್ಟಿದವರು. ಆದ್ದರಿಂದಲೇ ನಮ್ಮನ್ನು ಬಿಡಲಾರದೆ ಒದ್ದಾಡುತ್ತಿದ್ದೀಯೆ. ಆದರೆ ಕಿರಿಸೊಸೆಗೆ ನಾವಿಲ್ಲಿರಬೇಕೆನ್ನುವ ಇಷ್ಟ ಕೊಂಚವೂ ಇಲ್ಲ!"

ಸಿದ್ಧೇಶ್ವರಿಗೆ ಈ ಮಾತಿಗೆ ಜವಾಬು ಕೊಡದೆ "ಆ ಹುಡುಗರು ಹೇಳುವ ಹಾಗೆಯೇ ಅತುಲ ಯಾಕಿರಬಾರದು? ಅವನು ಮಾಡಿದುದೂ ತಪ್ಪಲ್ಲವೇ ತಂಗಿ?" ಎಂದರು.

"ಅವನು ಮಾಡಿದುದೇ ಸರಿಯೆಂದೆನೇ, ಅಕ್ಕ? ತಿಳಿದು ತಿಳಿದೂ ಯಾರಾದರೂ ಅಣ್ಣನನ್ನು ಬೈದಾರೇನು? ಸರಿ, ಅಕ್ಕ–ನಾನು ಅವನ ಬದಲಿಗೆ ನಿಮ್ಮೆಲ್ಲರ ಮುಂದೆಯೂ ನೆಲಕ್ಕೆ ಮೂಗು ಮುಟ್ಟಿಸುತ್ತೇನೆ. ಸರಿಯೇನು?" ಎನ್ನುತ್ತಾ ನಯನ ತಾರಾ ನೆಲಕ್ಕೊಮ್ಮೆ ತನ್ನ ತಲೆ ಚಚ್ಚಿದಳು.

"ಅವನನ್ನು ನೀವೆಲ್ಲರೂ ಕ್ಷಮಿಸಿ, ಅಕ್ಕ–ಅವನ ಒಣಗಿದ ಬಾಡಿದ ಮುಖ ಕಂಡರೆ ನನಗೆ ಹೊಟ್ಟೆಯಲ್ಲಿ ಬೆಂಕಿ ಇಟ್ಟಂತಾಗುತ್ತದೆ" ಎಂದು ಇನ್ನೊಮ್ಮೆ ನೆಲಕ್ಕೆ ತಲೆಚಚ್ಚಲು ಯತ್ನಿಸಿದ ನಯನತಾರೆಯನ್ನು ಸಿದ್ಧೇಶ್ವರಿ ತಡೆದು ಉಕ್ಕಿಬರುತ್ತಿದ್ದ ಕಣ್ಣೀರನ್ನೊರೆಸಿಕೊಂಡರು.

ಮಧ್ಯಾಹ್ನ ಅಡಿಗೆಮನೆಯಲ್ಲಿ ಸಿದ್ಧೇಶ್ವರಿ ಎಷ್ಟೇ ಹೇಳಿದರೂ, ತರ್ಕ ವಿತರ್ಕ ನಡೆಸಿದರೂ ಶೈಲಜಾ ಒಗ್ಗದಿರಲು ಕೋಪದಿಂದ "ನಿನ್ನ ಇಷ್ಟವನ್ನೇಕೆ ಮುಚ್ಚುಮರೆಯಿಲ್ಲದೆ ತಿಳಿಸಬಾರದು ಶೈಲ? ಅವರಿಲ್ಲಿಂದ ಹೊರಡಲೆಂದೇನು?" ಎಂದರು.

ಪ್ರತ್ಯುತ್ತರವಾಗಿ ಶೈಲಜಾ ಒಮ್ಮೆ ತಲೆಯೆತ್ತಿ ಅವರ ಕಡೆಗೇ ದಿಟ್ಟಿಸಿ ನೋಡಿದಳು. ಇದರಿಂದ ಸಿದ್ಧೇಶ್ವರಿಯ ಕೋಪ ಇನ್ನೂ ವಿಪರೀತವಾಯಿತು—

"ತಮ್ಮ ಒಡಹುಟ್ಟಿದ ತಮ್ಮನನ್ನು ಓಡಿಸಿ ನಿಮ್ಮನ್ನುಳಿಸಿಕೊಂಡರೆ ಜನ ಏನೆಂದಾರು? ನಮ್ಮ ಮನೆಯಲ್ಲಿ ಎಲ್ಲರೊಂದಿಗೂ ಹೊಂದಿಕೊಂಡಿರುವುದಾದರೆ ಸರಿ, ಇಲ್ಲಿರಿ. ಇಲ್ಲದಿದ್ದರೆ ನಿಮಗೆಲ್ಲಿ ಇಷ್ಟವೋ ಅಲ್ಲಿಗೆ ಹೋಗಿ, ನನಗೆ ಇನ್ನು ಸಹಿಸಲು ಸಾಧ್ಯವಿಲ್ಲ! ಅವರಿಗಿಂತ ನೀವೇನೂ ನನಗೆ ಆಪ್ತರಲ್ಲ, ಹೆಚ್ಚಲ್ಲ!" ಎಂದು ಸಿದ್ಧೇಶ್ವರಿ ಎದ್ದು ನಿಂತರು. ಶೈಲಜಾ ತಮ್ಮ ಮಾತಿನಿಂದ ಹೆದರಿಕೊಳ್ಳುವಳೆಂದು ಅವರ ಒಳಆಸೆ. ಆದರೆ ಅವಳು ಎಂದಿನಂತೆಯೇ ಮಾತಿಲ್ಲದೆ ತನ್ನ ಕೆಲಸದಲ್ಲಿ ನಿರತಳಾಗಲು, ಅವರು ಮಹಾ ಕೋಪದಿಂದ ಹೊರಗೆ ಹೊರಟುಹೋದರು.

ಗಿರೀಶಬಾಬು ಊಟಕ್ಕೆ ಕುಳಿತಾಗ ಸಿದ್ಧೇಶ್ವರಿ ಗಾಳಿ ಹಾಕುತ್ತಾ ದುಃಖಾಭಿಮಾನಗಳಿಂದ ಈ ಮಾತು ತೆಗೆದರು—

"ನಡುಕಲಸೊಸೆ-ಅವರ ಮನೆಯವರು ಇನ್ನು ಮೇಲೆ ಇಲ್ಲಿರುವುದು ಕಷ್ಟವೆಂದು ಕಾಣುತ್ತದೆ. ಬೆಳಿಗ್ಗೆಯಿಂದಲೇ ಅವರ ಸಾಮಾನುಸರಂಜಾಮು ನ್ನೆಲ್ಲಾ ಕಟ್ಟಡುತ್ತಿದ್ದಾರೆ."

ಗಿರೀಶ ತಲೆಯೆತ್ತಿ "ಏಕೆ ?" ಎಂದರು.

"ಮತ್ತಿನ್ನೇನು! ಅವಳಿಗೂ ಕಿರಿಯಸೊಸೆಗೂ ಹೊಂದುವುದಿಲ್ಲ-ಮನೆಮಕ್ಕಳಿಗೆಲ್ಲಾ ಶೈಲ ಹೇಳಿಕೊಟ್ಟಿದ್ದಾಳೆ-ಅತುಲನೊಂದಿಗೆ ಯಾರೂ ಮಾತು ಕೂಡಾ ಆಡುವುದಿಲ್ಲ. ಆ ಹುಡುಗ! ಪಾಪ! ಈ ಎರಡು ಮೂರು ದಿನಗಳಲ್ಲೇ ಕೊರಗಿ ಕೊರಗಿ ಅರ್ಧವಾಗಿ ಹೋಗಿದ್ದಾನೆ"

ಈ ಸಮಯಕ್ಕೆ ಸರಿಯಾಗಿ ಶೈಲಜಾ ಹಾಲಿನ ಲೋಟ ಹಿಡಿದು ಕೊಂಡು ಬಾಗಿಲಬಳಿ ಬಂದು ನಿಂತಳು. ತನ್ನ ಸೀರೆಯ ಸೆರಗನ್ನು ಸರಿಪಡಿಸಿ ಕೊಂಡು ಒಳಬಂದು ತಟ್ಟೆಯ ಪಕ್ಕದಲ್ಲಿ ಲೋಟವನ್ನಿಟ್ಟು ಹೊರಕ್ಕೆ ಹೊರಟುಹೋದಳು.

ಸಿದ್ಧೇಶ್ವರಿ ಅವಳಿಗೆ ಕೇಳುವಂತೆ "ಈ ಕಿರಿಯ ಸೊಸೆ ಇದ್ದಾಳಲ್ಲಾ-" ಎನ್ನುತ್ತಾ ಆಕಡೆ ನೋಡಿದರು. ಶೈಲಜಾ ತನ್ನ ಹೆಸರು ಕೇಳಿದೊಡನೆಯೇ ಹೊಸಲಬಳಿ ನಿಂತಳು. ಅವರದೆಷ್ಟೇ ತಪ್ಪಿರಲಿ-ಅತುಲ ಮತ್ತು ಅವನ ತಾಯಿಯ ದುಃಖದಿಂದ ಸಿದ್ಧೇಶ್ವರಿಯ ತಾಯಕರುಳು ಮಿಡಿದಿತ್ತು. ಇದನ್ನು ಹೇಗಾದರೂ ತೀರ್ಮಾನಿಸಬೇಕೆಂದರೆ ಶೈಲಜಾ ಯಾವ ಮಾತನ್ನೂ ಕೇಳು ತ್ತಿರಲಿಲ್ಲ. ಇದರಿಂದ ಅವರ ಮೈಯೆಲ್ಲಾ ಉರಿಯುತ್ತಿತ್ತು. ಈವತ್ತು ಅವಳಿಗೆ ಶಿಕ್ಷೆ ಮಾಡಲೇಬೇಕೆನ್ನುವ ಸಂಕಲ್ಪ ಮಾಡಿಕೊಂಡಿದ್ದರು ಸಿದ್ಧೇಶ್ವರಿ.

"ಶೈಲ ಈಗಲೇ ಈ ಅಣ್ಣತಮ್ಮಂದಿರಲ್ಲಿ ಜಗಳ ತಂದೊಡ್ಡುತ್ತಿರುವ ಳಲ್ಲಾ-ಅವರು ದೊಡ್ಡವರಾದ ಮೇಲೆ ಹೊಡೆದಾಟಕ್ಕೇ ಇಳಿಯುತ್ತಾರೆ-ಅಷ್ಟೆ ಇದೇನು ಒಳ್ಳೆಯದೇನು ?"

ಗಿರೀಶ ಬಾಯಿಗೊಂದು ತುತ್ತು ಹಾಕಿಕೊಳ್ಳುತ್ತಾ "ಬಹಳ ಕೆಟ್ಟದು!" ಎಂದರು.

"ಅವಳಿಂದಲೇ ಮಣಿ ಅತುಲನನ್ನು ಹೊಡೆದುದು. ಅದೂ ಸರಿ-ಅವನೂ ಹೊಡೆದ-ಬೈದ-ಮುಯ್ಯಿ ತೀರಿದಂತಾಯಿತು. ಆದರೆ ಅವ ನೊಂದಿಗೆ ಹುಡುಗರೇಕೆ ಮಾತಾಡಕೂಡದು? ನೀವು ಈಗಲೇ ಮಣಿ, ಹರಿ, ಎಲ್ಲರನ್ನೂ ಕರೆದು ಅತುಲನೊಂದಿಗೆ ಮಾತಾಡುವಂತೆ ಹೇಳಿ. ಇಲ್ಲದಿದ್ದರೆ ಅವರು ಹೊರಟುಹೋದರೆ ಊರಿನವರೆಲ್ಲ ನಮ್ಮ ಮುಖಕ್ಕೆ ಮಸಿ ಬಳಿಯು

ತ್ತಾರೆ. ಇದೂ ಅಲ್ಲದೆ ಕಿರಿಯಸೊಸೆಗಾಗಿ ನೀವು ನಿಮ್ಮ ತಮ್ಮನನ್ನೂ, ಅತ್ತಿಗೆಯನ್ನೂ ಬಿಡಲು ಸಾಧ್ಯವೇನು?"

"ಸಾಧ್ಯವೇನು!" ಎನ್ನುತ್ತಾ ಗಿರೀಶ ಊಟ ಮುಂದುವರಿಸಿದರು.

"ಮತ್ತೆ–ಕಿರಿಯ ತಮ್ಮನೂ ಏನಾದರೂ ಕೆಲಸಗಿಲಸದ ಯೋಚನೆ ಮಾಡುವರೇ ಇಲ್ಲ ಹೀಗೆಯೇ ಕಾಲ ಕಳೆಯುವರೋ?"

ಗಂಡನ ಮಾತೆದ್ದೊಡನೆಯೇ ಶೈಲಜಾ ಕಿವಿಯಮೇಲೆ ಕೈಯಿಟ್ಟು ಅಲ್ಲಿಂದ ಹೊರಟುಹೋದಳು. ಗಿರೀಶ ಕೊಟ್ಟ ಉತ್ತರ ಕೇಳಲೂ ಅವಳು ಅಲ್ಲಿ ನಿಲ್ಲಲಿಲ್ಲ. ಎಂದೂ ಅವಳು ಕಿವಿಗೊಟ್ಟು ಅವರ ಮಾತು ಕೇಳಿರ ಲಿಲ್ಲ–ಕೇಳಲಿಚ್ಛಿಸುತ್ತಲೂ ಇರಲಿಲ್ಲ. ಕಾರಣವಿಷ್ಟೆ–ತನ್ನ ಗಂಡನ ವಿಚಾರ ವಾಗಿ ಆಗುವ ಮಾತುಕತೆಯೆಲ್ಲ ಅಪ್ರಿಯವೇ ಹೊರತು ಪ್ರಿಯವಲ್ಲವೆಂದು ಅವಳಿಗೊಂದು ಸಂಶಯ–ಆದರೂ ಸತ್ಯ ಕಟುವಾಗಿರಲಿ, ಮೃದುವಾಗಿರಲಿ, ನಿಷ್ಠುರವಾಗಿರಲಿ–ಸತ್ಯವನ್ನವಳು ಚಿಕ್ಕಂದಿನಿಂದ ಪ್ರೇಮಿಸುತ್ತ ಬಂದಿದ್ದಾಳೆ. ಸತ್ಯ ಹೇಳಲು, ಕೇಳಲು ಎಂದೂ ಹಿಂದೆಗೆದಿಲ್ಲ. ಆದರೆ ತನ್ನ ಪತಿಯ ವಿಷಯದಲ್ಲಿ ಮಾತ್ರ ಏಕೆ ಹೀಗಾದಳೋ ಹೇಳುವುದು ಕಷ್ಟ!

೫

ಸಿದ್ಧೇಶ್ವರಿ ಎಷ್ಟೇ ಕೋಪದಿಂದ ತಮ್ಮ ಗಂಡನಿಗೆ ದೂರು ಹೇಳಿದರೂ, ಶೈಲಜಾ ಹಾಗೆ ಅಲ್ಲಿಂದ ಹೊರಟುಹೋದುದನ್ನು ಕಂಡು ತಮ್ಮ ಮಾತಿನಲ್ಲಿ ಏನೋ ಹೆಚ್ಚಾಗಿರಬೇಕೆಂದು ತಕ್ಷಣವೇ ತಿಳಿದುಕೊಂಡರು. ಗಂಡನ ವಿಷಯ ದಲ್ಲಿ ಮಾತು ಕೇಳಿದರೆ ಶೈಲಳಿಗೆ ಎಣೆಯಿಲ್ಲದಷ್ಟು ದುಃಖವಾಗುವುದೆಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು!

ಹೆಂಡತಿ ಮಾತು ನಿಲ್ಲಿಸಿದುದನ್ನು ಕಂಡು ಗಿರೀಶ ತಲೆಯೆತ್ತಿ "ನಾನು ಅವನಿಗೆ ಚೆನ್ನಾಗಿ ಬುದ್ಧಿ ಕಲಿಸುತ್ತೇನೆ" ಎಂದರು ಊಟಮುಗಿಸಿ ವೀಳ್ಯ ದೆಲೆ ಹಾಕಿಕೊಳ್ಳುವ ವೇಳೆಗಾಗಲೇ ಇದೆಲ್ಲವನ್ನೂ ಮರೆತಿದ್ದರು.

ನಿಜವಾಗಿ ಗಿರೀಶಬಾಬುವಿನ ಸ್ವಭಾವ ಕೊಂಚ ವಿಚಿತ್ರರೀತಿಯದೇ! ನ್ಯಾಯಸ್ಥಾನ, ಮೊಕದ್ದಮೆಗಳ ಹೊರತು ಮತ್ತಾವುದಕ್ಕೂ ಅವರ ತಲೆ ಯಲ್ಲಿ ಜಾಗವಿರಲಿಲ್ಲ. ಮನೆಯಲ್ಲಿ ಏನಾಗುತ್ತಿದೆ, ಯಾರು ಬರುವರು, ಯಾರು ಹೋಗುವರು, ಖರ್ಚು ವೆಚ್ಚವೇನು, ಮಕ್ಕಳು ಹೇಗಿದ್ದಾರೆ–

ಇದೊಂದೂ ಅವರಿಗೆ ಬೇಕೇ ಇರಲಿಲ್ಲ. ಹಣ ಸಂಪಾದಿಸುತ್ತಿದ್ದರು-ಎಲ್ಲಾ ಮಾತಿಗೂ "ಹೂಂ-ಹಾಂ" ಎಂದು ಏನೋ ಅಂದು ಮನೆಯ ಯಜಮಾನನ ಕೆಲಸ ಮುಗಿಸಿ ಬಿಡುತ್ತಿದ್ದರು.

ನಿರ್ಯೋಚನೆಯಿಂದ "ಬುದ್ಧಿ ಕಲಿಸುತ್ತೇನೆ" ಎಂದು ತಮ್ಮ ಕೆಲಸ ಮುಗಿಸಿ ಗಿರೀಶ ಹೊರಟುಹೋದರು. ಯಾರಿಗೆ ಬುದ್ಧಿ ಕಲಿಸುವರು, ಯಾತಕ್ಕೆ-ಎಂಬೇನನ್ನೂ ಕೇಳಲಿಲ್ಲ ಸಿದ್ಧೇಶ್ವರಿ-ಮಾತುಕೂಡ ಆಡಲಿಲ್ಲ.

ನಯನತಾರಾ ಪಕ್ಕದ ಕೋಣೆಯಲ್ಲಿ ಅವಿತುಕೊಂಡು ಎಲ್ಲವನ್ನೂ ಕೇಳುತ್ತಿದ್ದಳು. ಮೈದುನ ಓರಗಿತ್ತಿಯರ ಮಾತು ಕೇಳಿ ಬಹಳ ಸಂತೋಷವಾಯಿತು ಅವಳಿಗೆ. ಕೆಲವು ನಿಮಿಷಗಳಾದ ಮೇಲೆ ಮೆಲ್ಲನೆ ಸಿದ್ಧೇಶ್ವರಿಯ ಕೋಣೆಗೆ ಬಂದಳು.

"ಇದೇನಕ್ಕ, ಸುಮ್ಮನೆ ಹೀಗೆ ಕುಳಿತಿದ್ದೀ?-ಹೊತ್ತಾಯಿತು-ಏನಡಿಗೆಯಾಗಿದೆಯೋ ಒಂದಿಷ್ಟು ಊಟ ಮುಗಿಸಿಬಿಡು."

ಸಿದ್ಧೇಶ್ವರಿ ಏನೂ ಬೇಡದವರಂತೆ "ಹೊತ್ತೆಲ್ಲಿ ಆಯಿತು? ಈಗಿನ್ನೂ ಹನ್ನೊಂದು ಗಂಟೆ–" ಎಂದರು.

"ಹನ್ನೊಂದು ಗಂಟೆಯೇನು ಕಡಿಮೆಯೇನು? ಅಲ್ಲ ಅಕ್ಕ-ನಿನ್ನ ಹಾಗೆ ಮೈಕೆಟ್ಟವರು ಒಂಭತ್ತು ಗಂಟೆಯೊಳಗೇ ಊಟ ಮುಗಿಸಿಬಿಡಬೇಕು."

ಸಿದ್ಧೇಶ್ವರಿಗೆ ಊಟದ ವಿಚಾರಬೇಕಿರಲಿಲ್ಲ. ಆದರಿಂದ "ಆಗಲಿ ಬಿಡು -ತಂಗಿ-ನಾನೆಂದೂ ಇಷ್ಟು ಬೇಗ ಊಟ ಮಾಡಿಲ್ಲ-ನನ್ನದಿನ್ನೂ ಹೊತ್ತಾಗುತ್ತದೆ" ಎಂದರು.

ನಯನತಾರಾ ಅಷ್ಟಕ್ಕೇ ಬಿಡಲಿಲ್ಲ. ಹತ್ತಿರಹೋಗಿ ಕೈಗಳನ್ನು ಹಿಡಿದುಕೊಂಡು ತನ್ನದನಿಗೆ ಕಾತರತೆಕೂಡಿಸಿ "ಇದಕ್ಕೇ ಅಕ್ಕ, ಪಿತ್ತ ಹೆಚ್ಚಿ ರೋಗ ವಿಷಮವಾಗುವುದು! ನನ್ನ ಆಡಳಿತದಲ್ಲೇನಾದರೂ ಅಡಿಗೆಮನೆಯಿದ್ದಿದ್ದರೆ- ಒಂಭತ್ತು ಹೊಡೆಯಲು ಬಿಡುತ್ತಿದ್ದೆನೇ? ನೀನಿಲ್ಲದಿದ್ದರೆ ಯಾರಿಗೆ ಏನೂ ನಷ್ಟವಿಲ್ಲದಿದ್ದರೂ ನಮಗೆ ನಿಜವಾಗಿ ಸರ್ವನಾಶ! ಏಳು, ಏಳು, ನಡಿ-ಇರುವುದನ್ನೇ ನಿನಗೆ ಬಡಿಸಿ ಮನಸ್ಸಿಗೆ ಸಮಾಧಾನಮಾಡಿಕೊಳ್ಳುತ್ತೇನೆ" ಎಂದಳು.

ನಯನತಾರಾ ಅಲ್ಲಿಗೆ ಬಂದು ಒಂದು ತಿಂಗಳಿಗೂ ಹೆಚ್ಚಾಗಿತ್ತು. ಇದುವರೆಗೂ ತನ್ನ ಓರಗಿತ್ತಿಗೋಸ್ಕರ ಅವಳು ದಾರುಣ ವ್ಯಥೆಪಟ್ಟರೂ ಇಂದಿನವರೆಗೂ ಮನಸ್ಸಿಗೇಕೆ ಸಮಾಧಾನಮಾಡಿಕೊಳ್ಳಲು ಯತ್ನಿಸಲಿಲ್ಲವೆಂಬುದರ

ಕಾರಣ ಸಿದ್ಧೇಶ್ವರಿಗೆ ಗೊತ್ತು. ಆದರೆ ಧೂರ್ತತೆಯ ಮಾಯೆ!–ಎಲ್ಲ ತಿಳಿದು ತಿಳಿದೂ ಸಿದ್ಧೇಶ್ವರಿ ಮನ ಹರಿಬಿಟ್ಟರು—

"ನೀನು ನನ್ನವಳು, ತಂಗಿ–ಅದಕ್ಕೇ ಈ ಮಾತಂದೆ! ನನ್ನವರಾಗಿ ಯಾರಿದ್ದಾರೆ ಹೇಳು?" ಎಂದರು.

ನಯನತಾರಾ ಸಿದ್ಧೇಶ್ವರಿಯನ್ನು ಕೈಹಿಡಿದು ಅಡಿಗೆ ಮನೆಗೆ ಕರೆದೊಯ್ದು ತಾನೇ ಜಾಗಮಾಡಿ, ಮಣೆಹಾಕಿ ತಟ್ಟೆಯನ್ನು ಹಾಕಿದಳು.

ಶೈಲಜಾ ಒಳಗೆ ಆಡಿಗೆಮಾಡುತ್ತಿದ್ದಳು. ನಯನತಾರಾ ನೀಲಳನ್ನು ಕೂಗಿ "ನಿಮ್ಮ ಚಿಕ್ಕಮ್ಮನಿಗೆ ಹೇಳು–ಅಡಿಗೆ ಏನಾಗಿದೆಯೋ ಅದನ್ನು ತಂದಿಡಲಿ" ಎಂದಳು.

ನಿಮಿಷ ಕಳೆಯುವುದರಲ್ಲೇ ಶೈಲಜಾ ಅಡಿಗೆಯನ್ನೆಲ್ಲಾ ತಂದು ಮುಂದಿಟ್ಟು ಮೌನವಾಗಿ ಹೊರಡುವುದರಲ್ಲಿದ್ದಳು. ಅಷ್ಟರಲ್ಲಿ ಸಿದ್ಧೇಶ್ವರಿ "ಎಲ್ಲರೂ ಜತೆಯಲ್ಲೇ ಕುಳಿತುಕೊಳ್ಳಬಾರದೇ?" ಎಂದು ಕ್ಷೀಣದನಿಯಲ್ಲಿ ನಯನತಾರೆಯನ್ನು ಕೇಳಿದರು.

"ಇಲ್ಲಕ್ಕ–ನಾವೇನು ನಿನ್ನಂತೆ ಕಾಯಿಲೆಯಿಂದ ಒದ್ದಾಡುತ್ತಿರುವೆವೇನು? ನೀನು ಊಟ ಮುಗಿಸಿದ ಮೇಲೆ ನಾನೂ ಹಾಗೆಯೇ ನಾಲ್ಕು ತುತ್ತು ತಿಂದರಾಯಿತು" ಎಂದಳು ನಯನತಾರಾ. ಹಾಗೆಯೇ ಒಮ್ಮೆ ಶೈಲಜೆಯ ಕಡೆಗೆ ಕಡೆಗಣ್ಣಿನಿಂದ ನೋಡಿ ಧ್ವನಿ ಏರಿಸಿದಳು—"ಇಲ್ಲಕ್ಕ–ನಾನು ಇರುವವರೆಗೂ ನೀನು ಹೀಗೆ ಮೋಸಮಾಡಿ ಮಾಯವಾಗಿ ಬಿಡಲು ಖಂಡಿತ ಬಿಡುವುದಿಲ್ಲ!"—

ಕೊಂಚಕಾಲ ಮೌನ! ಶೈಲಜಾ ಹತ್ತಿರದಲ್ಲೇ ಮಾತು ಕೇಳುತ್ತಿರುವಳೇ ಎಂದು ತಿರುಗಿನೋಡಿ ಮತ್ತೆ ದನಿ ಜೋರುಮಾಡಿದಳು—

"ಅವರಿಬ್ಬರೂ ಒಡಹುಟ್ಟಿದವರು ಹೇಗೋ ಹಾಗೆಯೇ ನಾವಿಬ್ಬರೂ ಅಕ್ಕತಂಗಿಯರು–ಎಷ್ಟೇ ದೂರವಾಗಿರಲಿ, ಎಲ್ಲೇ ಇರಲಿ, ರಕ್ತರಕ್ತವೇ?—ಆಪ್ತತೆಯ ಕರೆಯಿಂದ ನಿನಗಾಗಿ ನಾನೆಷ್ಟು ವ್ಯಥೆಪಟ್ಟಿದ್ದೇನೆ, ಗೊತ್ತೇನು?–ಉಳಿದವರು ನನ್ನಷ್ಟು ಸಂಕಟಪಡುವರೇ?–ಬೇರೆಯವರು ಮರುಗಿದರೂ ತಮ್ಮ ಉಪಕಾರಕ್ಕೋಸ್ಕರವೇ ಮರುಗುತ್ತಾರೆ. ಆದರೆ ನಾನು ನಿಜವಾದ ಪ್ರೇಮದಿಂದ ಮರುಗುತ್ತೇನೆ– ನೀನೀಗ ತಾನೆ ಹೇಳಿದೆಯಲ್ಲವೇ, ಅಕ್ಕ–ನನ್ನನ್ನು ಹೊರತು ನಿನ್ನವರು ನಿನಗೆ ಯಾರು ಹೇಳು? ಆ ಸತ್ಯದ ಮಾತನ್ನು ಎಂದಾದರೂ ಮರೆತೀಯೆ!"

"ಅದೇನು ಮರೆಯುವ ಮಾತೇ ತಂಗಿ" ಇದುವರೆಗೂ ನಾನು ನಿನ್ನನ್ನು ತಪ್ಪರ್ಥಮಾಡಿಕೊಂಡಿದ್ದೆ. ಆದಕ್ಕೇ ದೇವರು ಈಗ ಶಿಕ್ಷೆ ಕೊಟ್ಟಿದ್ದಾನೆ!" ಎಂದರು ಸಿದ್ಧೇಶ್ವರಿ ಗದ್ಗದದನಿಯಲ್ಲಿ.

ನಯನತಾರಾ ಸೀರೆಯ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತಾ "ಯಾವ ಶಿಕ್ಷೆಯಿದ್ದರೂ ದೇವರು ನನಗೇ ಕೊಡಬೇಕು ಅಕ್ಕ–ನಾನೇ ನಿನ್ನನ್ನು ಇದುವರೆಗೂ ಸರಿಯಾಗಿ ಅರ್ಥಮಾಡಿಕೊಂಡಿರಲಿಲ್ಲ—ನನ್ನದೇ ಎಲ್ಲ ತಪ್ಪೂ?" ಎಂದಳು. ಮತ್ತೆ ಕೊಂಚಕಾಲ ಸುಮ್ಮನಿದ್ದು "ನಾವು ನಿನ್ನ ಕಾಲಿನ ಧೂಳಿಗೂ ಸಮನಲ್ಲವೆಂದು ನನಗಿಂದು ತಿಳಿಯಿತು. ಅಕ್ಕ–ಆದರೆ ನಿನ್ನ ಬಳಿಯಿದ್ದು ಸೇವೆನಡೆಸುವ ಭಾಗ್ಯವನ್ನು ದೇವರು ನನಗೆ ಕೊಡಲಿಲ್ಲ. ನಾವಂತೂ ಕಿರಿಯಸೊಸೆಯ ಅಭಿಪ್ರಾಯದಲ್ಲಿ ಮುಳ್ಳಿನ ಕಂಟಿಗಳಾಗಿದ್ದೇವೆ!" ಎಂದಳು.

ಸಿದ್ಧೇಶ್ವರಿಗೆ ಕೋಪ ಉಕ್ಕಿಬಂತು—"ಹಾಗಾದರೆ ಅವಳೇ ತನ್ನ ಮಕ್ಕಳುಮರಿ ಕಟ್ಟಿಕೊಂಡು ಹಳ್ಳಿಮನೆಯಲ್ಲಿರಲಿ. ನಾನು ಅವಳಿಗೆ, ಅವಳ ಸಂಸಾರಕ್ಕೆಲ್ಲಾ ಹಾಲೆರೆಯುವುದು ನನಗೆ ಹಾವಾಗಲೆಂದೇ ಆಗಿದೆ! ಚಿಕ್ಕಪ್ಪನ ಮಗ, ಅವನ ಹೆಂಡತಿ, ಅವರ ಮಕ್ಕಳು, ಮರಿ—ಯಾವಾಗಲೂ ಇದ್ದೇ ಇದೆ! ನಾನೂ ಮಾಡಿದೆ–ಊಟ, ಉಳಿಸು, ಉಡಿಗೆ–ಮಾಡುವುದಕ್ಕೂ ಕೊನೆ ಮೊದಲಿಲ್ಲವೇ?—ಇನ್ನು ನನ್ನಿಂದಲೂ ಸಾಧ್ಯವಿಲ್ಲ—ಆಳು ಕಾಳಿನ ಹಾಗೆಯೇ ತೆಪ್ಪಗೆ ನಾನು ಹೇಳಿದಂತೆ ಕೇಳಿಕೊಂಡು ಬಿದ್ದಿದ್ದರೆ ಸರಿ, ಇರಲಿ, ಇಲ್ಲದಿದ್ದರೆ ತೊಲಗಲಿ!" ಎಂದರು.

ಪಕ್ಕದಲ್ಲಿಯೇ ಚೌಕಟ್ಟನ್ನೊರಗಿಕೊಂಡು ಶೈಲಜಾ ನಿಂತಿರುವಳೆಂಬುದನ್ನು ಸ್ವಪ್ನದಲ್ಲಿಯೂ ಕಾಣರು ಸಿದ್ಧೇಶ್ವರಿ. ಇದ್ದಕ್ಕಿದ್ದಂತೆ ಅವಳ ಸೀರೆಯ ಸೆರಗಿನ ಕೆಂಪು ಅಂಚು ಭುಗಿಲ್ಲನೆ ಬೆಂಕಿಯಜ್ವಾಲೆಯಂತೆ ಕಣ್ಣಿಗೆ ಬೀಳಲು ಸಿದ್ಧೇಶ್ವರಿ ತಲೆಯೆತ್ತಿನೋಡಿದರು. ಕೋಣೆಯ ಬಾಗಿಲನ್ನೊರಗಿಕೊಂಡು ಸ್ತಬ್ಧವಾಗಿ ತಮ್ಮ ಮಾತನ್ನೆಲ್ಲಾ ಕೇಳುತ್ತನಿಂತ ಶೈಲಜೆಯನ್ನು ಕಂಡೊಡನೆ ಯಾವುದೋ ಅಂತರ್ಭೀತಿಯಿಂದ ಹಸಿವೆಯೆಲ್ಲ ಉಡುಗಿಹೋಯಿತು–ಈ ನಡುಕಲಸೊಸೆಯನ್ನು ಬಿಟ್ಟು ಎಲ್ಲಿಯಾದರೂ ಓಡಿಹೋದರೆ ಮಾತ್ರ ಜೀವ ಉಳಿದೀತು ಎನಿಸಿ ಬಿಟ್ಟಿತು ಅವರಿಗೆ.

ನಯನತಾರಾ ಬಹಳ ಕಾತರದಿಂದ "ಇದೇನು ಅಕ್ಕ—ಏನೂ ತಿಂದೇ ಇಲ್ಲ–ಸುಮ್ಮನೆ ಕೈಯಾಡಿಸುತ್ತಿದ್ದೀಯ–ಅಷ್ಟೆ!" ಎಂದಳು.

ಸಿದ್ಧೇಶ್ವರಿ ಅಳುವ ದನಿಯಲ್ಲಿ "ಇನ್ನು ಬೇಡ" ಎಂದರು.

"ಇಲ್ಲ, ಅಕ್ಕ, ನನ್ನ ಮೇಲಾಣೆ-ಇನ್ನೊಂದೆರಡು ತುತ್ತು ತಿಂದು ಬಿಡು."

ಅವಳ ಮಾತು ಮುಗಿಯುವುದರಲ್ಲೇ ರೇಗಿಬಿದ್ದರು ಸಿದ್ಧೇಶ್ವರಿ- "ಸುಮ್ಮನೆ ಏಕೆ ಒರಲುತ್ತಿಯೆ ಹೇಳು-ನಾನಿನ್ನು ತಿನ್ನುವುದಿಲ್ಲ-ಇಲ್ಲಿಂದ ಹೋಗು ನೀನು"-ತಮ್ಮ ಮುಂದಿದ್ದ ತಟ್ಟೆಯನ್ನು ಆಕಡೆಗೆ ನೂಕಿ ಎದ್ದು ನಿಂತರು.

ನಯನತಾರಾ ಮರದಗೊಂಬೆಯಾಗಿ ಬಿಟ್ಟಳು. ಅವಳ ಬಾಯಿಂದ ಒಂದು ಮಾತೂ ಹೊರಡಲಿಲ್ಲ. ಆದರೆ ವಿಹ್ವಲತೆಯಿಂದ ತನ್ನೆಲ್ಲವನ್ನೂ ಕಳೆದುಕೊಳ್ಳುವ ಹೆಣ್ಣಲ್ಲ ಅವಳು-ಸಿದ್ಧೇಶ್ವರಿ ಕೈತೊಳೆಯುತ್ತಿದ್ದ ಜಾಗಕ್ಕೇ ಹೋಗಿ ಕೈಹಿಡಿದು ವಿನೀತಭಾವದಿಂದ ಬೇಡಿಕೊಳ್ಳಲಾರಂಭಿಸಿದಳು-"ತಿಳಿಯದೆ ಏನಾದರೂ ಅಂದಿದ್ದರೆ ಕ್ಷಮಿಸಿಬಿಡು, ಅಕ್ಕ-ನೀನೇನಾದರೂ ಇಷ್ಟು ನಿಶ್ಶಕ್ತಿಯಲ್ಲೂ ಉಪವಾಸವಿದ್ದರೆ ನಾನು ಹೇಗೆ ಸಹಿಸಿಕೊಂಡಿರಲಿ-ನಿಜವಾಗಿ ಹೇಳುತ್ತೇನೆ-ನೀನು ಊಟಮಾಡದಿದ್ದರೆ ನಿನ್ನ ಕಾಲಬಳಿ ತಲೆಚಚ್ಚಿಕೊಂಡು ಸತ್ತುಹೋಗುತ್ತೇನೆ"

ಸಿದ್ಧೇಶ್ವರಿಗೆ ತಾವು ಹಾಗೆ ಕೋಪದಿಂದ ಎದ್ದುಬಂದುದಕ್ಕೆ ನಾಚಿಕೆಯಾಯಿತು. ಹಿಂದಿರುಗಿ ಬಂದು ಒಂದೆರಡು ತುತ್ತು ಊಟ ಮುಗಿಸಿದರು.

ತಮ್ಮ ಕೋಣೆಯಲ್ಲಿ ಕುಳಿತು ತಾನೇಕೆ ಶೈಲಜೆಯನ್ನಷ್ಟು ಅವಮಾನಗೊಳಿಸಿದೆನೋ, ಅಷ್ಟು ಭಾರಿಯ ಪೆಟ್ಟು ಏಕೆ ಕೊಟ್ಟೆನೋ ಎಂದು ತಮ್ಮನ್ನು ತಾವೇ ಹಳಿದುಕೊಂಡರು. ಇದರ ಅನಿವಾರ್ಯ ಪರಿಣಾಮ-ಶೈಲಜಾ ಕೂಡಲೇ ಕಠೋರ ಉಪವಾಸ ಆರಂಭಿಸುವಳೆಂಬುದರಲ್ಲಿ ಏನೂ ಸಂದೇಹವಿಲ್ಲ-ನೀಲಳನ್ನು ಮಧ್ಯಾಹ್ನ ಕೂಗಿ ಕೇಳಿದರೆ ಶೈಲಜಾ ಊಟಮಾಡುತ್ತಿರುವಳೆಂದು ತಿಳಿಯಿತು. ಆಗ ಅವರ ಆಶ್ಚರ್ಯ, ಸಂತೋಷಗಳಿಗೆ ಕೊನೆಯೇ ಇಲ್ಲ! ಶೈಲಜಾ ಎಂದಿನಂತಿರದೆ ಇಂದಿಷ್ಟು ಸಹನೆಯಿಂದಿರುವುದೇಕೆಂಬುದು ಅವರಿಗೆ ಅರ್ಥವೇ ಆಗಲಿಲ್ಲ!

ಗಿರೀಶ, ಹರೀಶ ಇಬ್ಬರೂ ನ್ಯಾಯಾಲಯದಿಂದ ಜತೆಗೇ ಹಿಂದಿರುಗಿ ಸಂಜೆ ಒಟ್ಟಿಗೇ ತಿಂಡಿತಿನ್ನಲು ಕುಳಿತರು. ಸಿದ್ಧೇಶ್ವರಿ ಹತ್ತಿರದಲ್ಲಿ ಮುಖ ಜೋಲು ಹಾಕಿಕೊಂಡು ಕುಳಿತ್ತಿದ್ದರು-ಅವರ ಹುನಸ್ಸಿನಲ್ಲೊಂದು ಮಹಾ ಮಾರುತವೆದ್ದಿತ್ತು!

ಹೆಂಡತಿಯ ಕಡೆಗೊಮ್ಮೆ ನೋಡುತ್ತಲೇ ಗಿರೀಶನಿಗೆ ಬೆಳಗಿನ ಮಾತು ನೆನಪಾಯಿತು. ಉಳಿದ ಮಾತುಗಳೆಲ್ಲಾ ಮರೆತುಹೋಗಿದ್ದರೂ ರಮೇಶನಿಗೆ ಬುದ್ಧಿಕಲಿಸುವ ಮಾತು ನೆನಪಿಗೆ ಬಂತು-ಬಾಗಿಲಬಳಿ ನೀಲಾ ನಿಂತಿದ್ದುದು ಕಂಡರು.

"ನೀಲಾ-ನಿನ್ನ ಚಿಕ್ಕಪ್ಪನನ್ನು ಕೂಗು" ಎಂದರು ಗಿರೀಶ.

"ಈಗೇಕೆ ಕೂಗುವಿರಿ?" ಎಂದರು ಸಿದ್ಧೇಶ್ವರಿ.

"ಏಕೆಂದರೆ?-ಅವನಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕು-ಕೂತು ಕೂತು ಕೋಣನಾಗಿ ಹೋಗಿದ್ದಾನೆ ಅವನು!"

ಹರೀಶ ಇಂಗ್ಲಿಷಿನಲ್ಲಿ "ಕೆಲಸವಿಲ್ಲದ ತಲೆ ಕೆಡುಕಿನ ಕಾರ್ಖಾನೆ" ಎಂದು ಅತ್ತಿಗೆಯ ಕಡೆ ತಿರುಗಿ "ಅತ್ತಿಗೆ, ನೀವು ಅವನನ್ನು ತಲೆಯ ಮೇಲೆಯೇ ಕೂರಿಸಿಕೊಳ್ಳುವಿರಿ-ಅವನೇನೂ ಎಳೆಯ ಮಗುವಲ್ಲ!"

ಸಿದ್ಧೇಶ್ವರಿ ಏನೂ ಮಾತಾಡಲಿಲ್ಲ. ಕೋಪದಿಂದ ಅವರ ಮುಖ ಧುಮುಗುಟ್ಟುತ್ತಿತ್ತು.

ರಮೇಶ ಆಗ ಮನೆಯಲ್ಲೇ ಇದ್ದ. ಹಿರಿಯಣ್ಣ ಕೂಗಿದೊಡನೆಯೇ ಬಂದು ನಿಂತ. ಗಿರೀಶ ಅವನ ಕಡೆಗೇ ನೋಡುತ್ತಾ "ಅತುಲನ ಜೊತೆಯಲ್ಲಿ ಯಾಕೋ ಜಗಳ?" ಎಂದು ಗರ್ಜಿಸಿದರು.

"ನಾನು! ಜಗಳವಾಡಿದೆನೇ!" ಎಂದ ರಮೇಶ ಆಶ್ಚರ್ಯದಿಂದ.

ಗಿರೀಶ ಕೋಪದಿಂದ "ಹೌದು, ಹೌದು ಜಗಳವಾಡಿದೆ! ಬಾಯಿಗೆ ಬಂದಂತೆಲ್ಲಾ ಬೈದೆಯಂತೆ-ಹಿರಿಯತ್ತಿಗೆಯನ್ನು ಕೇಳು-ಅವಳೇ ನನಗೆ ಹೇಳಿದುದು. ನನ್ನೊಂದಿಗೆ ಸುಳ್ಳು ಹೇಳುವಳೇನು?" ಎಂದು ಗರ್ಜಿಸಿದರು.

ರಮೇಶ ಅವಾಕ್ಕಾಗಿ ಸಿದ್ಧೇಶ್ವರಿಯ ಕಡೆಗೇ ನೋಡುತ್ತಾ ನಿಂತುಬಿಟ್ಟ!

ಸಿದ್ಧೇಶ್ವರಿ ಕೂಡಲೇ ಜೋರಾಗಿ "ಇದೇನಿದು-ನಿಮಗೆ ತಲೆಕೆಟ್ಟು ಹೋಯಿತೇನು? ನಾನು ಯಾವಾಗ ಹೇಳಿದೆ ನಿಮ್ಮ ಕೈಲಿ?-ನಿಮ್ಮ ತಮ್ಮ ಅತುಲನನ್ನು ಬೈದೆನೆಂದು ಹೇಳಿದೆನೇ?" ಎಂದರು.

ಹರೀಶ ತಪ್ಪು ಒಪ್ಪಮಾಡುವನಂತೆ ಮೆಲ್ಲನೆ "ಇಲ್ಲ-ಇಲ್ಲ-ಕಿರಿಯ ಸೊಸೆ—" ಎಂದ.

"ಕಿರಿಯಸೊಸೆಯೇ ಆಗಲಿ, ಏಕೆ ಬಯ್ಯಬೇಕಾಗಿತ್ತು ಹೇಳು?" ಎಂದರು ಗಿರೀಶ.

ಸಿದ್ಧೇಶ್ವರಿ ಮೊದಲಿನಂತೆಯೇ ಕೋಪದಿಂದಲೇ ಉತ್ತರಕೊಟ್ಟರು—"ಅತುಲನನ್ನು ಅವಳೇಕೆ ಬಯ್ಯುತ್ತಾಳೆ?–ಅವಳೇನೂ ಬಯ್ಯಲೇ ಇಲ್ಲ. ಇಷ್ಟರಮೇಲೆ ಬೈದರೂ ನೀವು ಇವನನ್ನೇಕೆ ಕೇಳುವುದು ?"

"ಅದು ಸರಿ–ನೀನು ಶುದ್ಧ ಅಯೋಗ್ಯ–ಹುಲ್ಲುವ್ಯಾಪಾರಮಾಡಿ ನಾಲ್ಕು ಸಾವಿರ ರೂಪಾಯಿ ಹಾಳುಮಾಡಿದೆ–ಅಲ್ಲಿ–ಆ ಪಕ್ಕದ ಮೊಹಲ್ಲೆಯ ಆ ಖಾನರು ಈ ವ್ಯಾಪಾರದಲ್ಲೇ ಕೋಟ್ಯಾಧಿಪತಿಗಳಾಗಿದ್ದಾರೆ" ಎಂದರು ಗಿರೀಶ.

"ಹುಲ್ಲಿನ ವ್ಯಾಪಾರದಲ್ಲೇ !" ಎಂದು ಆಶ್ಚರ್ಯದಿಂದ ಕಣ್ಣು ಬಾಯಿ ಬಿಟ್ಟ ಹರೀಶ !

"ಇಲ್ಲಣ್ಣ–ಹುಲ್ಲಲ್ಲ–ರೇಶ್ಮೆಯ ವ್ಯಾಪಾರದಲ್ಲಿ" ಎಂದ ರಮೇಶ..

ಗಿರೀಶನಿಗೆ ಕೋಪ ಬಂತು—

"ಅವರು ನನ್ನ ಕಕ್ಷಿಗಾರರು–ಅವರ ವಿಷಯ ನನಗೆ ಗೊತ್ತಿಲ್ಲ–ನಿನಗೆ ಗೊತ್ತು ಅಲ್ಲವೇನೋ ?–ಹುಲ್ಲಿನ ವ್ಯಾಪಾರದಲ್ಲೇ ಅವರು ಹಣವಂತರಾದರು. ವಿಲಾಯಿತಿಗೆ ಹಡಗುಹಡಗಿನಲ್ಲಿ ತುಂಬಿ ರಫ್ತುಮಾಡುತ್ತಾರೆ."

ಹರೀಶ ಮತ್ತು ರಮೇಶ ಇಬ್ಬರೂ ಸುಮ್ಮಗಾದರು. ಗಿರೀಶ ಅವರ ಕಡೆಗೇ ನೋಡುತ್ತಾ—"ಹೋಗಲಿ–ರೇಶ್ಮೆಯೇ ಆಗಲಿ–ನೀನೂ ರೇಶ್ಮೆಯ ವ್ಯಾಪಾರಮಾಡಿ ತಿಂಗಳಿಗೆ ನೂರಿನ್ನೂರು ರೂಪಾಯಿ ಸಂಪಾದಿಸಕೂಡ ದೇನು ? ನಿಮ್ಮ ಹೊಟ್ಟೆಗೆ ಯಾವಾಗಲೂ ತಂದು ಹಾಕುತ್ತಾ ಇರಲು ನನ್ನಿಂದಲೂ ಸಾಧ್ಯವಿಲ್ಲ. ಮನುಷ್ಯ ಬಿದ್ದ ನೆಲದ ಸಹಾಯದಿಂದಲೇ ಮೇಲೇಳಬೇಕು. ಒಂದುಸಾರಿ ನಾಲ್ಕು ಸಾವಿರ ಹೋದರೆ ಪರವಾಗಿಲ್ಲ–ಇನ್ನು ನಾಲ್ಕು ಸಾವಿರ ತೆಗೆದುಕೊ. ಅದೂ ಸಾಲದಿದ್ದರೆ ಮತ್ತೂ ನಾಲ್ಕು ಸಾವಿರ ತೆಗೆದುಕೊ. ಆದರೆ ಇದು ಮಾತ್ರ ಇನ್ನು ಸಾಧ್ಯವಿಲ್ಲ–ನಾನು ಒಂದೇ ಸಮವಾಗಿ ದುಡಿದು ದುಡಿದು ಸಣ್ಣವಾಗುತ್ತಿರುವುದು–ನೀನು ಸುಖವಾಗಿ ಇಲ್ಲಿ ತಿನ್ನುತ್ತಿರುವುದು !–ಉಹುಂ ! ಉಹುಂ !"–ಎಂದರು ಒಂದೇ ಉಸುರಿನಲ್ಲಿ.

ಹರೀಶನಿಗೆ ಮನಸ್ಸಿನಲ್ಲಿ ಅಸಮಾಧಾನವಾದರೂ ಮೃದು ದನಿಯಲ್ಲೇ "ಕೆಲಸವನ್ನೆಲ್ಲಾ ಹೊಸದಾಗಿ ಕಲಿಯಬೇಕಾಗುತ್ತದೆ–ರೇಶ್ಮೆಯ ವ್ಯಾಪಾರ ವೇನೂ ಸುಲಭವಲ್ಲ !–ಮತ್ತೆ ಮತ್ತೆ ಇಷ್ಟು ರೂಪಾಯಿ ಹಾಳುಮಾಡು ವುದು ಸರಿಯಲ್ಲ" ಎಂದ.

ಗಿರೀಶ ಅವನ ಮಾತನ್ನೂ ಒಪ್ಪಿದರು—"ನಿಜ, ನಿಜ-ರೇಷ್ಮೆಗೀಷ್ಮೆ ವ್ಯಾಪಾರ ನನಗೆ ತಿಳಿಯದು. ನಾಳೆಯಿಂದಲೇ ನೀನು ಹುಲ್ಲಿನ ವ್ಯಾಪಾರ ಪ್ರಾರಂಭಿಸು-ನಾಳೆ ಬೆಳಿಗ್ಗೆ ನಾನು ಎಂಟುಸಾವಿರ ರೂಪಾಯಿಗೆ ಬ್ಯಾಂಕಿಗೆ ಚೆಕ್ ಕೊಡುತ್ತೇನೆ. ನಾಲ್ಕುಸಾವಿರ ರೂಪಾಯಿನ ಹುಲ್ಲು ಕೊಂಡುಕೊ-ಇನ್ನು ನಾಲ್ಕು ಸಾವಿರ ನಿನ್ನ ಲೆಕ್ಕದಲ್ಲಿರಲಿ. ಈ ನಾಲ್ಕುಸಾವಿರ ಮುಗಿದ ಮೇಲೆಯೇ ಅದನ್ನು ಮುಟ್ಟಬೇಕು. ಅದಕ್ಕೆ ಮುಂಚೆ ಕೂಡದು! ಗೊತ್ತಾಯಿತೇನೋ?-ನಾನು ನಿಮ್ಮನ್ನು ಕೂರಿಸಿ ದುಡಿದು ದುಡಿದು ತಂದುಹಾಕಲಾರೆ-ಹುಂ-ಹೋಗು!"

ರಮೇಶ ಮಾತಿಲ್ಲದೆ ಹೊರಟುಹೋದ. ಹರೀಶ ತಲೆಯಲ್ಲಾಡಿಸುತ್ತಾ "ಅಣ್ಣ-ಈ ಎಂಟು ಸಾವಿರವೂ ನೀರಿಗೆಸೆದ ಹಾಗೆಯೇ ಅಂತ ಇಟ್ಟುಕೊಳ್ಳಿ-ಅಲ್ಲವೇ ಅತ್ತಿಗೆ?" ಎಂದ.

ಸಿದ್ಧೇಶ್ವರಿ ಸುಮ್ಮನಿದ್ದರು. ಅವರಿಂದೇನೂ ಉತ್ತರ ಬಾರದಿರಲು ಹರೀಶ ಅಣ್ಣನನ್ನೆ ಕೇಳಿದ—

"ನಿಜವಾಗಿಯೂ ಅವನಿಗೆ ದುಡ್ಡು ಕೊಡುವಿರೇನು?"

ಗಿರೀಶ ಆಶ್ಚರ್ಯದಿಂದ "ನಿಜವಾಗಿಯೂ ಎಂದರೆ?" ಎಂದು ಕೇಳಿದರು.

"ಮೊನ್ನೆ ಮೊನ್ನೆ ತಾನೇ ನಾಲ್ಕು ಸಾವಿರ ಮಣ್ಣುಗೂಡಿಸಿಯಾಯಿತು. ಈಗ ಮತ್ತೆ ಎಂಟುಸಾವಿರ ಕೊಡುವಿರಲ್ಲಾ-ಇದನ್ನು ಕಲ್ಪನೆಮಾಡಲು ಸಾಧ್ಯವಿಲ್ಲ!"

"ಹಾಗಾದರೇನು ಮಾಡಲಿ-ನೀನೇ ಹೇಳು-"

"ರಮೇಶನಿಗೆ ವ್ಯಾಪಾರವೇನು ಗೊತ್ತಣ್ಣ? ಎಂಟು ಸಾವಿರ ಕೊಡಲಿ, ಎಂಟುಲಕ್ಷ ಕೊಡಲಿ-ಅವನು ಎಂಟುಕಾಸು ಕೂಡ ಉಳಿಸುವುದಿಲ್ಲ!—ಬೇಕಾದರೆ ನಾನು ಬರೆದುಕೊಡುತ್ತೇನೆ-ನೀವೇ ಯೋಚಿಸಿ-ಇಷ್ಟೊಂದು ಹಣ ಸಂಪಾದಿಸಬೇಕಾದರೆ ಎಷ್ಟು ದಿನ ಬೇಕಾದೀತು—"

ಗಿರೀಶ ಈ ಮಾತಿಗೂ ಒಪ್ಪಿದರು—"ನಿಜ, ನಿಜ-ನೀನು ಹೇಳುತ್ತಿರುವುದೇ ಸರಿ-ಅವನಿಗೆ ದುಡ್ಡುಕೊಡುವುದೂ ಒಂದೇ-ನದಿಗೆಸೆಯುವುದೂ ಒಂದೆ! ಅವನೊಂದು ಮನುಷ್ಯ ಎಂದು ಲೆಕ್ಕವೇ!"

ಹರೀಶ ಈ ಮಾತಿನಿಂದ ಉತ್ಸಾಹಗೊಂಡ. "ಇದಕ್ಕಿಂತ ಅವನಿಗೆ ಯಾವುದಾದರೂ ನೌಕರಿ ಹುಡುಕಿಕೊಟ್ಟರೇ ಒಳ್ಳೆಯದು-ಅದನ್ನು ಮಾಡಿ

ಕೊಂಡಿರಲಿ-ಯೋಗ್ಯತೆಗೆ ತಕ್ಕ ಕೆಲಸ! ಈಗ ನಮ್ಮ ಹುಡುಗರಿಗೆ ಪಾಠ ಹೇಳಿಕೊಡಲು ಉಪಾಧ್ಯಾಯರಿಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಕೊಡುವುದಿಲ್ಲವೇ? ಈ ಕೆಲಸ ಹಾಗೂ ಹೀಗೂ ಅವನೇ ಮಾಡಬಲ್ಲ! ಮನೆ ಖರ್ಚಿನಲ್ಲಿ ಅಷ್ಟಾದರೂ ಉಳಿಸಿದರೆ-ಅದೂ ಒಂದು ಸಹಾಯವೇ! ಅತ್ತಿಗೆ. ಅದೇ ಸರಿಯಲ್ಲವೇ ?"

ಅತ್ತಿಗೆಯ ಉತ್ತರ ಬರುವ ಮೊದಲೇ ಗಿರೀಶ ಬಹು ಸಂತೋಷದಿಂದ "ಸರಿ, ಸರಿ, ಹರೀಶ-ನೀನಾಡಿದ ಮಾತು ಮುತ್ತಿನಂತಹುದು!—ಅಳಿಲಿನ ಸಹಾಯದಿಂದಲೇ ಶ್ರೀರಾಮಚಂದ್ರ ಸೇತುವೆ ಕಟ್ಟಿದುದು-" ಎಂದರು. ಹೆಂಡತಿಯ ಕಡೆ ತಿರುಗಿ ಹರೀಶನ ಹರಿತವಾದ ಬುದ್ಧಿಯನ್ನು ಹೊಗಳ ಲಾರಂಭಿಸಿದರು—"ನೋಡಿದೆಯಾ-ಹರೀಶ ಎಷ್ಟು ಚೆನ್ನಾಗಿ ತಿಳಿದು ಕೊಂಡಿದ್ದಾನೆ ಇದನ್ನೆಲ್ಲಾ! ನಾನು ಮೊದಲಿಂದಲೂ ನೋಡುತ್ತಲೇ ಇದ್ದೇನೆ. ಹಣಕಾಸಿನ ವಿಷಯ ಅವನಿಗೆ ಮೊದಲಿನಿಂದಲೂ ಬುದ್ಧಿ ಮಹಾ ಚುರುಕು. ಅವನಿಗಿರುವಷ್ಟು ಮುಂದಾಲೋಚನೆ ಮತ್ತಾರಿಗೂ ಇಲ್ಲ. ಈಗ ಅವನು ಹೇಳದೇ ಇದ್ದರೆ ನಾನೂ ಅಷ್ಟೊಂದು ರೂಪಾಯಿ ಹಾಳು ಮಾಡಿಕೊಳ್ಳುತ್ತಿದ್ದೆ-ನಾಳೆಯಿಂದಲೇ ರಮೇಶ ಹುಡುಗರಿಗೆ ಪಾಠ ಹೇಳಿ ಕೊಡಲಿ-ವೃತ್ತಪತ್ರಿಕೆಗಳನ್ನೇ ಓದಿಓದಿ ತನ್ನ ಕಾಲಕಳೆಯಬೇಕಾಗಿಲ್ಲ!"

"ಹಾಗಾದರೆ ಅವರಿಗೆ ರೂಪಾಯಿ ಕೊಡುವುದಿಲ್ಲವೇ?" ಎಂದರು ಸಿದ್ಧೇಶ್ವರಿ.

"ಖಂಡಿತ ಇಲ್ಲ! ಅವನಿಗೆ ದುಡ್ಡು ಕೊಡಬೇಕೇ?"

"ಹಾಗಾದರೆ ಮೊದಲೇಕೆ ಹೇಳಿದ್ದು ಅವರಿಗೆ?"

ಈ ಮಾತಿಗೆ ಹರೀಶ ಉತ್ತರಕೊಟ್ಟ—"ಹೇಳಿದರೆ ಕೊಡಲೇಬೇಕೇನು? ಅವನಂತಹವರು ಪ್ರಪಂಚದಲ್ಲೇ ಯಾರೂ ಇಲ್ಲ-ಅತ್ತಿಗೆ-ನಾನೂ ಅಣ್ಣನ ಒಡ ಹುಟ್ಟಿದವನೇ-ನನ್ನ ಅಭಿಪ್ರಾಯವನ್ನು ಕೇಳಬೇಡವೇನು ಮನೆಯ ಖರ್ಚು ಹೆಚ್ಚಿದರೆ ನನಗೂ ನಷ್ಟವಲ್ಲವೇ!"

ಸಿದ್ಧೇಶ್ವರಿಯ ಉಪಚಾರ, ಸೇವೆಯ ಭಾರವನ್ನೆಲ್ಲಾ ನಯನತಾರಾ ತಾನೇ ವಹಿಸಿದ್ದಳು. ಆ ಉಪಚಾರದ ವೈಶಿಷ್ಟ ಪೂರ್ಣತೆಯೆಷ್ಟೆಂದರೆ ಅವಳಿಗೆ ಸುಳಿವು ಕೊಡದೆ ಯಾರೂ ಸಿದ್ಧೇಶ್ವರಿಯ ಹತ್ತಿರಕೂಡ ಹೋಗು ವಂತಿರಲಿಲ್ಲ. ಸಿದ್ಧೇಶ್ವರಿ ತಮ್ಮ ಬಾಳಿನಲ್ಲಿ ಈ ರೀತಿಯ ಉಪಚಾರವನ್ನೆಂದೂ ಕಂಡಿರಲಿಲ್ಲ-ಅನುಭವಿಸಿರಲಿಲ್ಲ. ಇಷ್ಟಾದರೂ ಅವರ ಮನಸ್ಸು ತಹತಹಿಸು

ತ್ತಿತ್ತು. ಯಾವುದಾದರೂ ಒಂದು ನೆವಹುಡುಕಿ ಜಗಳಕ್ಕೆ ಸಿದ್ಧವಾಗು ತ್ತಿತ್ತು ! ಇದಕ್ಕೆ ಕಾರಣ ದೇವರಿಗೇ ಗೊತ್ತು !

ಒಂದು ದಿನ ಬೆಳಿಗ್ಗೆ ಸಿದ್ಧೇಶ್ವರಿ ಆರೇಳು ತಿಂಗಳು ಕಾಯಿಲೆ ಬಿದ್ದವರಂತೆ ತೂಗಾಡುತ್ತಾ ಅಡಿಗೆಮನೆಯ ಕಡೆಹೋಗಿ ಬಾಗಿಲ ಬಳಿ ಧೊಪ್ಪನೆ ಕುಳಿತು ಬಿಟ್ಟರು. ದೀರ್ಘ ಉಸಿರೆಳೆಯುತ್ತಾ ಸುಸ್ತಾದ ದನಿಯಲ್ಲಿ ಒಂದೇ ಸಮನಾಗಿ ಮುಂದಿದ್ದ ಬಾಗಿಲನ್ನು ಕುರಿತೇ ಇರಬೇಕು–ಬಯ್ಯಲಾರಂಭಿಸಿದರು.

"ನನ್ನವರವಾಗಿ ಯಾರಾದರೂ ಇದ್ದರೆ ನಡುಕಲಸೊಸೆ ಮಾತ್ರ! ಅವಳಿಲ್ಲದಿದ್ದರೆ ಈವೇಳೆಗೆ ನಾನು ಸತ್ತೇ ಹೋಗುತ್ತಿದ್ದೆ. ಇಂತಹ ಒಳ್ಳೆಯ ಉಪಚಾರ, ಸೇವೆಯನ್ನು ನನ್ನ ತವರುಮನೆಯಲ್ಲೂ ಕಂಡಿರಲಿಲ್ಲ—"

ಅಡಿಗೆಮನೆಯೊಳಗೆ ಕೆಲಸಮಾಡುತ್ತಿದ್ದ ಶೈಲಜಾಗೆ ಎಲ್ಲವೂ ಕೇಳಿಸಿತು. ಈಗ ಕೆಲವು ದಿನಗಳಾಯಿತು–ಅವಳು ಸಿದ್ಧೇಶ್ವರಿಯ ಕೋಣೆಗೂ ಹೋಗು ತ್ತಿರಲಿಲ್ಲ–ಅವರೊಂದಿಗೆ ಮಾತೂ ಆಡುತ್ತಿರಲಿಲ್ಲ. ಈಗಲೂ ಸುಮ್ಮನೆ ತನ್ನ ಕೆಲಸ ಮಾಡುತ್ತಲೇ ಇದ್ದಳು.

ಸಿದ್ಧೇಶ್ವರಿ ಕೊಂಚಕಾಲ ಸುಧಾರಿಸಿಕೊಂಡು ಮತ್ತೆ ಆರಂಭಿಸಿದರು– "ಕಂಡಕಂಡ ಜನಕ್ಕೆಲ್ಲಾ ಕೂಳು ಸುರಿಯುವುದು ನನ್ನ ಪಾಪಶೇಷ! ಋಣ ತೀರಿಸಲೇಬೇಕು–ಎಷ್ಟು ದಿನವೋ ಏನೋ–ಆದರೆ ತೃಣಕ್ಕಾದರೂ ಉಪ ಯೋಗವಿಲ್ಲವೋ?–ನೀರಿನಲ್ಲಿ ಹೋಮಮಾಡಿದಂತೆ–ಸಮಯಕ್ಕೆ ಒಬ್ಬರೂ ಇಲ್ಲ–ಪಾಪ! ಅವಳೊಬ್ಬಳು – ಬಡಪಾಯಿ – ನಡುಕಲಸೊಸೆ! ನನ್ನ ಬಾಯಿಂದ ಮಾತು ಹೊರಬೀಳುವ ಮೊದಲೇ ಕಾದುನಿಂತಿರುತ್ತಾಳೆ–ನಾನು ಕೊಂಚ ನಡೆದರೆ ಅವಳಿಗೆ ಕರುಳು ಕೊಯ್ದಂತೆ! ನನ್ನ ದುರದೃಷ್ಟಕ್ಕೆ ಸರಿ ಯಾಗಿ–ಏನೋ ಅಂದಹಾಗೆ ಅಂತ ಇಂತಹ ಮುತ್ತಿನ ಚಿಪ್ಪನ್ನು ಕಪ್ಪೆಯ ಚಿಪ್ಪೆಂದುಕೊಂಡಿದ್ದೆನಲ್ಲಾ!"

ಶೈಲಜೆಯ ಬಳೆಗಳಸದ್ದು, ಸೌಟುಪಾತ್ರೆಗಳ ನಾದವೆಲ್ಲಾ ಅವರ ಕಿವಿಗೆ ಬೀಳುತ್ತಿತ್ತು. ಇಷ್ಟು ಹತ್ತಿರದಲ್ಲಿದ್ದೂ ತಮ್ಮ ಈ ಅಸಹನೀಯ ಸುಳ್ಳು ಅಪವಾದಕ್ಕಾದರೂ ಉತ್ತರಕೊಡದಿರಲು ಸಿದ್ಧೇಶ್ವರಿಯ ಕೋಪ ಕೊನೆಗಾಣ ದಂತಾಯಿತು. ಅವರ ಸಣ್ಣದನಿ ಇದ್ದಕ್ಕಿದ್ದಂತೆ ಜೋರಾಯಿತು.

"ಅಮ್ಮನ ಮನೆಯಿಂದ ಕಾಗದ ಬಂದಿದೆ–ಅದನ್ನು ಯಾರಾದರೂ ಓದಲಿ, ಯಾರ ಕೈಯಲ್ಲಾದರೂ ಓದಿಸಿ ಕೇಳೋಣವೆಂದರೆ ನನ್ನ

ದುರದೃಷ್ಟ-ಯಾರೂ ಇಲ್ಲ-ಈ ಕಂಡ ಕಂಡವರಿಗೆಲ್ಲಾ ಯಾತಕ್ಕೆ ಪಿಂಡ ಸುರಿಯಬೇಕೋ ಕಾಣೆ!”

ನೀಲಾ ಒಳಗೆ ಶೈಲಜೆಗೆ ನೆರವಾಗಿದ್ದಳು. ಅಲ್ಲಿಂದಲೇ ತಾಯಿಗೆ ಉತ್ತರಗೊಟ್ಟಳು—“ಈ ಕಾಗದವನ್ನು ಹಿರಿಯ ಚಿಕ್ಕಮ್ಮ ಎರಡು ಮೂರು ಸಾರಿ ಓದಿ ಹೇಳಿದರಲ್ಲವೇ ಅಮ್ಮ? ಬೇರೆ ಕಾಗದ ಬಂದಿದೆಯೇನು?”

“ಎಲ್ಲಾ ಮಾತಿಗೂ ಬಾಯಿಹಾಕಿಕೊಂಡು ಬರಬೇಡ, ನೀಲಾ,” ಎಂದು ಮಗಳನ್ನು ಗದರಿಸಿಕೊಂಡು ಸಿದ್ಧೇಶ್ವರಿ ಮಾತು ಮುಂದುವರಿಸಿದರು—“ಕಾಗದ ಓದಿಬಿಟ್ಟರಾಯಿತೇನು? ಅದಕ್ಕೆ ಉತ್ತರ ಬರೆಯಬೇಡವೇ? ಬೇರೆಯವರ ಬಳಿಹೋಗಿ ಉತ್ತರ ಬರೆಯಿರಿ ಅಂತ ನಾನು ಬೇಡಿಕೊಳ್ಳಬೇಕೇನು? ನಿಮ್ಮ ಚಿಕ್ಕಮ್ಮ ಸತ್ತುಹೋದಳೇನು?”

ನೀಲಳಿಗೂ ಕೋಪಬಂತು—“ಕಾಗದ ಬರೆಯಲು ಬೇರೆ ಯಾರೂ ಇಲ್ಲವೇನಮ್ಮ? ಈ ಸಂಕ್ರಾಂತಿಯ ದಿನ ಚಿಕ್ಕಮ್ಮನನ್ನು ಸತ್ತುಹೋದಳು ಎನ್ನುತ್ತೀಯಲ್ಲಾ”

ಇಂದು ಸಂಕ್ರಾಂತಿಯೆಂಬುದೂ ಸಿದ್ಧೇಶ್ವರಿಗೆ ತಿಳಿಯದು. ಇದ್ದಕ್ಕಿದ್ದಂತೆ ಅವರ ಮುಖ ಬಿಳಿಚಿಕೊಂಡಿತು—“ನೀಲಾ ಒಳ್ಳೆಯ ಕೋಪಕಣೇ ನಿನ್ನದು! —ಶತ್ರು ಬೇಕಾದರೆ ಸತ್ತು ಬೀಳಲಿ!-ಸಾಯುವ ಮಾತು ನಾನೆಲ್ಲಿ ಆಡಿದೆನೇ? ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳೇ ನನ್ನ ಬಾಯಿಗೆ ಬೀಗ ಹಾಕಲು ಬರುವಳಲ್ಲಾ!-ಮೊನ್ನೆ ಮೊನ್ನೆ ಮದುವೆಮಾಡಿ ಮನೆ ತುಂಬಿಸಿಕೊಂಡು ಲಾಲಿಸಿಪಾಲಿಸಿದ ಹುಡುಗಿಗೆ ನನ್ನ ನೆರಳೂ ಸೇರುವುದಿಲ್ಲ!-ಹಾಳಾದ್ದು ಕಾಯಿಲೆಯೋ-ಎಷ್ಟೇ ಜೋರಾದರೂ ಸಾವು ಬರುವುದಿಲ್ಲ-ಇವತ್ತಿನಿಂದ ನಾನೇನಾದರೂ ಒಂದು ತೊಟ್ಟು ಔಷಧಿ ಕುಡಿದರೂ ನನ್ನನ್ನು ದೊಡ್ಡ-ದೊಡ್ಡ-” ಮಾತನಾಡುತ್ತಾ ಆಡುತ್ತಾ ಅಳುವಿನಿಂದ ಕೊರಳು ಬಿಗಿದು ಬಂತು. ಕೂಡಲೇ ಸಿದ್ಧೇಶ್ವರಿ ಸೆರಗಿನಿಂದ ಕಣ್ಣೊರಸಿಕೊಳ್ಳುತ್ತಾ ತಮ್ಮ ಕೋಣೆಗೆಹೋಗಿ ಸತ್ತವರಂತೆ ಬಿದ್ದುಕೊಂಡರು.

ನಯನತಾರಾ ಪಕ್ಕದ ಕೋಣೆಯ ಕಿಟಕಿಯಿಂದ ಎಲ್ಲವನ್ನೂ ನೋಡುತ್ತಿದ್ದಳು. ಮೆಲ್ಲನೆ ಸಿದ್ಧೇಶ್ವರಿಯ ಕೊಠಡಿಯೊಳಕ್ಕೆ ಬಂದು ಅವರ ಕಾಲಬಳಿ ಕುಳಿತು ಮೆಲ್ಲನೆ “ಒಂದು ಕಾಗದಕ್ಕೆ ಉತ್ತರ ಬರೆಯಬೇಕಾದರೆ ಅವಳನ್ನೇಕೆ ಕಾಲುಕಟ್ಟಬೇಕು, ಅಕ್ಕ?-ನನಗೊಂದು ಬಾರಿ ಹೇಳಿದರೆ ಸಾಲದೆ?-ಒಂದೇಕೆ-ಹತ್ತು ಕಾಗದಕ್ಕಾದರೂ ಉತ್ತರ ಬರೆದೇನು-” ಎಂದಳು.

ಸಿದ್ದೇಶ್ವರಿ ಏನೂ ಹೇಳದೆ ಮಗ್ಗಲು ಬದಲಾಯಿಸಿ ಬಾಗಿಲಕಡೆಗೆ ಮುಖ ತಿರುವಿಕೊಂಡರು.

ನಯನತಾರಾ ಕೊಂಚಹೊತ್ತು ಸುಮ್ಮನಿದ್ದು, "ಹಾಗಾದರೆ ಈಗಲೇ ಕಾಗದ ಬರೆಯಲೇ ಅಕ್ಕ ?" ಎಂದಳು.

ಸಿದ್ದೇಶ್ವರಿ ಬೇಸರಿಕೆಯಿಂದ ಒಣದನಿಯಲ್ಲಿ "ಸುಮ್ಮನೆ ವಟಗುಟ್ಟು ತ್ತೀಯಲ್ಲ-ಕೊಂಚ ಸುಮ್ಮನಿರಬಾರದೆ? ಆಗಲೇ ಹೇಳಲಿಲ್ಲವೆ-ನಿನ್ನಿಂದ ಅದು ಸಾಧ್ಯವಾಗದೆಂದು-ಅದು ಬಿಟ್ಟು-" ಎಂದರು.

ನಯನತಾರಾ ಇದರಿಂದ ಕೋಪಗೊಳ್ಳಲಿಲ್ಲ, ಕೆಲಸವಾಗುವಕಡೆ ಕೋಪ ಅಭಿಮಾನ ತೋರಬಾರದೆಂಬುದು ತಿಳಿದ ಮಹಾ ಚತುರತೆ ಅವಳದು. ಮಾತಿಲ್ಲದೆ ಅಲ್ಲಿಂದ ಹೊರಟುಹೋದಳು.

ಎರಡು ಎರಡೂವರೆ ಗಂಟೆಯ ವೇಳೆಗೆ ಸಿದ್ಧೇಶ್ವರಿ ಮಗಳನ್ನು ಕರೆದು ಕೇಳಿದರು—"ಚಿಕ್ಕಮ್ಮ ಊಟಮಾಡಿದಳೇನೇ ನೀಲಾ ?"

ನೀಲಳಿಗೆ ಆಶ್ಚರ್ಯ! "ಊಟಮಾಡದೆ ಏನು? ಎಂದಿನಂತೆಯೇ ಊಟಮಾಡಿದರು." "ಹ್ಞೂಂ!" ಎಂದು ಸುಮ್ಮನಾದರು ಸಿದ್ಧೇಶ್ವರಿ.

ಶೈಲಜಾ ಮೊದಲಿನಿಂದಲೂ ಅತ್ಯಂತ ಅಭಿಮಾನಿನಿ. ಸಾಮಾನ್ಯವಾದ ಮಾತಿಗೇ ಉಪವಾಸ ಆರಂಭಮಾಡಿಬಿಡುತ್ತಿದ್ದಳು. ಇದರಿಂದ ಸಿದ್ಧೇಶ್ವರಿ ಸುಮ್ಮನೆ ಒದ್ದಾಡುತ್ತಿದ್ದರು. ಕೈಹಿಡಿದು ಬೇಡಿಕೊಂಡು, ಬೆನ್ನು, ತಲೆ ನೇವರಿಸಿ ನಾನಾರೀತಿಯಿಂದ ಅವಳನ್ನು ಸಮಾಧಾನಗೊಳಿಸಬೇಕಾಗು ತ್ತಿತ್ತು. ಅದೇ ಶೈಲಜಾ ಇಂದು-ಎಷ್ಟೇ ತಿರಸ್ಕಾರ, ಅವಮಾನಗಳಾದರೂ ಊಟತಿಂಡಿಯ ವಿಚಾರದಲ್ಲಿ ಕೊಂಚವೂ ಹಿಂದೇಟು ಹಾಕದೆ, ಕೋಪ ತೋರದುದರ ಅರ್ಥ ಅವರಿಗೆ ಆಗಲಿಲ್ಲ! ಅವಳ ಈ ಬಗೆಯ ನಡವಳಿಕೆ ಆಶ್ಚರ್ಯವಾಗಿ, ಅಸ್ವಾಭಾವಿಕವಾಗಿ ತೋರಿದಂತೆಯೇ ಮನಸ್ಸಿನಲ್ಲಿ ಹೆದರಿ ಕೆಯೂ ಅಯಿತು. ಹೇಗೋ ಒಂದುಬಾರಿ ಜಗಳವಾಗಿಬಿಟ್ಟರೆ ಹೋದ ಪ್ರಾಣಬಂದಂತೆ! ಆದರೆ ಬೆಳಗ್ಗೆಯಿಂದ ಸಂಜೆಯುವರೆಗೂ ಎಂದಿನಂತೆಯೇ ತನ್ನ ಕೆಲಸ ಕಾರ್ಯದಲ್ಲೇ ಶೈಲಜಾ ನಿರತಳಾಗಿದ್ದಳು-ಅವಳ ರೀತಿಯಿಂದ ಯಾರಿಗೂ ಏನೂ ತಿಳಿಯುತ್ತಲೇ ಇರಲಿಲ್ಲ. ಆದರೆ ಹತ್ತು ವರ್ಷಗಳಿಂದ ಅವಳನ್ನು ಬೆಳೆಸಿದವರಿಗೆ ಮಾತ್ರ ಗೊತ್ತು-ಉದಾಸೀನತೆಯ ಮಹಾಮಂಜಿನ ತೆರೆ ಅವಳ ಸುತ್ತ ಕವಿದು ಅವಳನ್ನು ಉಳಿದವರಿಂದ ಮುಸುಕುಗೊಳಿಸುತ್ತಿದೆ ಯೆಂಬುದು ಅವರ ಹೃದಯಕ್ಕೆ ಅನುಭವವಾಗುತ್ತಿತ್ತು !

"ಅಮ್ಮ, ನಾನು ಹೋಗಲೇ ?" ಎಂದಳು ನೀಲಾ.

"ಎಲ್ಲಿಗೆ ?"

ನೀಲಾ ಸುಮ್ಮನಿದ್ದಳು.

ಸಿದ್ಧೇಶ್ವರಿ ಕೋಪದಿಂದ ಎದ್ದು ಕುಳಿತು ಜೋರಾಗಿ ಕಿರಿಚಿಕೊಂಡರು- "ಎಲ್ಲಿಗೆ ಹೋಗಬೇಕೆಂದು ಹೇಳಿಬಿಡು. ನಿನಗೂ ನಿನ್ನ ಚಿಕ್ಕಮ್ಮನಿಗೂ ಅಂತಹುದೇನೇ ? ನನ್ನ ಜತೆಯಲ್ಲಿ ಒಂದು ಘಳಿಗೆಕೂಡ ಇರಲಾಗುವುದಿಲ್ಲ ವೇನೇ ನಿನಗೆ?-ಕುಕ್ಕರಿಸಿಕೊಳ್ಳೇ ಗಂಡುಬೀರಿ!-ತೆಪ್ಪಗಿಲ್ಲೇ ಬಿದ್ದಿರು!- ನೀನೆಲ್ಲಿಯೂ ಹೋಗಕೂಡದು!"—ಹೀಗೆಂದು ಹಾಸಿಗೆಯ ಮೇಲೆ ಧೊಪ್ಪನೆ ಬಿದ್ದುಕೊಂಡು ಬೇರೆಕಡೆಗೆ ಮುಖ ತಿರುವಿಕೊಂಡರು.

ನಯನತಾರಾ ಮೆಲುಹೆಜ್ಜೆಯಲ್ಲಿ ಸಪ್ಪಳವಾಗದಂತೆ ಕೊಠಡಿಗೆ ನುಸುಳಿ ದಳು. ಅತ್ಯಂತ ವಿಶ್ವಾಸದ ದನಿಯಲ್ಲಿ ನೀಲಳಿಗೆ ಬೋಧಿಸಲಾರಂಭಿಸಿದಳು- "ಹುಚ್ಚು ಹುಡುಗಿ!-ನೀನು ಚಿಕ್ಕವಳಲ್ಲ ಇನ್ನೇನು ಕೆಲವು ದಿನಗಳಲ್ಲೇ ಮಾವನಮನೆಯ ಬೆಳಕಾಗಿ ಹೋಗಬೇಕು. ಈಗಲೇ ಎಷ್ಟು ದಿನ ಸಾಧ್ಯವೋ ಅಷ್ಟು ದಿನ ತಂದೆತಾಯಿಯ ಸೇವೆನಡೆಸು. ತಾಯಿಯ ಹತ್ತಿರ ಕೂತುಕೋ. ಜತೆಗೇ ಇದ್ದು ಒಳ್ಳೆಯ ನಡತೆ ಕಲಿತುಕೋ-ಈ ವಯಸ್ಸಿನಲ್ಲಿ ಕಂಡಕಂಡವ ರೊಡನ ಕಾಲ ಕಳೆಯಬಾರದು. ಹೋಗಮ್ಮ ಅಮ್ಮನ ಬಳಿ ಕುಳಿತು ಒಂದೆರಡು ಗಂಟೆ ಕಾಲೊತ್ತು. ಅವರು ನಿದ್ರೆಹೋಗಲಿ. ಪಾಪ! ಮೈಚೆನ್ನಾ ಗಿಲ್ಲ-ಬಹಳ ಹೊತ್ತಿನಿಂದ ಎದ್ದಿದ್ದಾರೆ."

ನೀಲಳಿಗೆ ನಯನತಾರೆಯೆಂದರೆ ಅಷ್ಟಕ್ಕಷ್ಟೇ!-ಕೂಡಲೇ ತಲೆಯೆತ್ತಿ ಬಿರುಸಾಗಿಯೇ ಕೇಳಿದಳು, "ಮನೆಯಲ್ಲಿ ಕಂಡ ಕಂಡವರೊಡನೆ ಕಾಲಕಳೆ ಯುತ್ತೇನೋ ನಾನು ? ನೀವು ಚಿಕ್ಕಮ್ಮನ ವಿಷಯ ಹೇಳುತಿದ್ದೀರೇನು ?"

ಕೋಪದಿಂದ ಕೆಂಪಾದ ಮುಖಕಂಡು ಅಷ್ಟೇ ಕೋಪದಿಂದ ನಯನ ತಾರಾ "ನಾನು ಯಾರ ಮಾತನ್ನೂ ಹೇಳಲಿಲ್ಲ, ನೀಲಾ-ನಾನು ಹೇಳುತ್ತಿ ರುವುದಿಷ್ಟೇ-ನಿಮ್ಮ ತಾಯಿಯ ಸೇವೆ ಮಾಡು" ಎಂದಳು.

"ಪಾಪ! ಉಪಚಾರ! ನಾನು ಸತ್ತಹೊರತು ಅವಳಿಗೆಲ್ಲಿ ಸಮಾ ಧಾನ!" ಎಂದರು ಸಿದ್ಧೇಶ್ವರಿ.

"ಪಾಪ-ಇವಳೇನೋ ಇನ್ನೂ ಹುಡುಗಿ-ಏನೂ ತಿಳಿಯುವುದಿಲ್ಲ. ಆದರೆ ಆ ಕಿರಿಸೊಸೆಯೇನೂ ಎಳೆಮಗುವಲ್ಲ! ಅವಳಾದರೂ ಹೇಳಕೂಡದೇ? ಮಗು, ತಾಯಿಯ ಹತ್ತಿರ ಹೋಗಿ ಒಂದೆರಡು ಗಂಟೆ ಇರು ಎಂದು ಹೇಳಿದ

ರೇನು–ತಾನೂ ಬರುವುದಿಲ್ಲ–ಮಗಳನ್ನೂ ಬರಲು ಬಿಡುವುದಿಲ್ಲ! ಎಂತಹವಳು ಅವಳು" ಎಂದಳು.

ನೀಲಾ ಉತ್ತರ ಕೊಡಬೇಕೆಂದಿದ್ದವಳು ಬಹುಕಷ್ಟದಿಂದ ನಾಲಿಗೆ ಬಿಗಿ ಹಿಡಿದು ಮುಖಗಂಟಿಕ್ಕಿಕೊಂಡು ನಿಂತಳು.

ಸಿದ್ಧೇಶ್ವರಿ ಮತ್ತೆ ಈ ಮಗ್ಗಲಿಗೆ ತಿರುಗಿ "ನಿಜವಾಗಿ ಹೇಳುತ್ತೇನೆ, ತಂಗಿ–ಶೈಲಜೆಯ ಮುಖ ನೋಡಲೂ ನನಗಿಷ್ಟವಿಲ್ಲ–ಅವಳು ನನ್ನ ಕಣ್ಣಿಗೆ ವಿಷಸರ್ಪವಾಗಿ ಹೋಗಿದ್ದಾಳೆ" ಎಂದರು.

"ಹಾಗನ್ನಬೇಡ, ಅಕ್ಕ–ಸಾವಿರ ಅಂದರೂ ಎಷ್ಟಿದ್ದರೂ ಅವಳು ಎಲ್ಲರಿಗಿಂತ ಚಿಕ್ಕವಳು. ನೀನೇನಾದರೂ ಕೋಪಗೊಂಡರೆ ಅವಳಿಗೆ ನಿಲ್ಲುವುದಕ್ಕೂ ನೆಲೆಯಿಲ್ಲದೆ ಹೋಗುತ್ತದೆ–ಅದನ್ನು ಮರೆಯಬಾರದಕ್ಕ–ಹಾಂ! ನೋಡಿದೆಯಾ–ಈಗ ನೆನಪಾಯಿತು–ಈ ತಿಂಗಳು ಅವರಿಗೆ ೫೦೦ ರೂಪಾಯಿ ಬಂತು ಅಕ್ಕ. ಅದರಲ್ಲಿ ಕೊಂಚಹಣ ಖರ್ಚಿಗೆ ಇಟ್ಟುಕೊಂಡು ಉಳಿದುದನ್ನು ನಿನಗೆ ಕೊಡಲು ಹೇಳಿದರು–ತೆಗೆದುಕೋ ಅಕ್ಕ" ಎಂದು ನಯನತಾರಾ ಸೆರಗಿನ ತುದಿಯಲ್ಲಿ ಕಟ್ಟಿದ್ದ ಐದು ಹಸುರು ನೋಟುಗಳನ್ನು ತೆಗೆದು ಸಿದ್ಧೇಶ್ವರಿಯ ಕೈಗೆ ಕೊಟ್ಟಳು.

ನಿರಾಸಕ್ತಿಯಿಂದಲೇ ಆ ಹಣ ತೆಗೆದುಕೊಂಡರು ಸಿದ್ಧೇಶ್ವರಿ. "ನೀಲಾ, ಹೋಗಿ ನಿನ್ನ ಚಿಕ್ಕಮ್ಮನನ್ನು ಕೂಗು. ಬಂದು ಈ ಹಣವನ್ನು ಕಬ್ಬಿಣದ ಪೆಟ್ಟಿಗೆಯಲ್ಲಿಡಲಿ" ಎಂದರು.

ನಯನತಾರೆಯ ಮುಖ ಕಪ್ಪಿಟ್ಟಿತು. ಈ ಹಣ ಕೊಡುವ ಸಂದರ್ಭವನ್ನು ಮನಸ್ಸಿನಲ್ಲಿ ಉಜ್ವಲವಾಗಿ ಚಿತ್ರಿಸಿಕೊಂಡಿದ್ದಳು ಮೊದಲು. ಈಗ ಆ ದೃಶ್ಯ ಇದ್ದಕ್ಕಿದ್ದಂತೆ ಕಲಸುಮೇಲೋಗರವಾಯಿತು. ಸಿದ್ಧೇಶ್ವರಿಯ ಮುಖದಲ್ಲಿ ಸಂತೋಷದ ಸೂಚನೆಯೂ ಸುಳಿಯಲಿಲ್ಲ. ಇಷ್ಟೇ ಅಲ್ಲ–ಹಣ ತೆಗೆದಿಡಲು ಕೊನೆಗೆ ಕಿರಿಯುಸೊಸೆಯನ್ನೇ ಕರೆದರಲ್ಲಾ!–ಪೆಟ್ಟಿಗೆಯ ಬೀಗದಕೈ ಇನ್ನೂ ಅವಳ ಹತ್ತಿರವೇ ಇದೆ. ನಿಜವಾಗಿ ಈ ಹಣ ಕೊಡುವುದರಲ್ಲಿ ಒಂದು ಗುಟ್ಟು ಅಡಗಿತ್ತು. ಹರೀಶನಿಗೇನೋ ಹಣಕೊಡುವ ಇಷ್ಟ ಕೊಂಚವೂ ಇರಲಿಲ್ಲ. ಆದರೆ ನಯನತಾರೆಯೇ ಸಾಂಸಾರಿಕ ತಂತ್ರಹೂಡಲು ಗಂಡನನ್ನು ಬಲಾತ್ಕರಿಸಿ ಈ ಹಣ ತಂದಿದ್ದಳು. ಈಗ ಸಿದ್ಧೇಶ್ವರಿಯ ನಿರಾಸಕ್ತಿಯಿಂದ ಈ ಹಣ ನೀರು ಪಾಲಾದಂತೆಯೇ! ತಲೆಚಚ್ಚಿಕೊಂಡುಬಿಡಲೇ ಎನ್ನುವಷ್ಟು ಹೊಟ್ಟೆಯುರಿಯಿತು ನಯನತಾರೆಗೆ!

ಶೈಲಜಾ ಬಂದು ನಿಂತಳು. ಆರುದಿನಗಳ ನಂತರ ಮೊದಲಬಾರಿಗೆ ಸಿದ್ಧೇಶ್ವರಿಯ ಕಡೆಗೆ ತಿರುಗಿ ತನ್ನ ಸಹಜ ದನಿಯಲ್ಲೇ "ನನ್ನನ್ನು ಕೂಗಿದೆಯಾ, ಅಕ್ಕ?" ಎಂದಳು.

ಶೈಲಜೆಯ ಈ ನಾಲ್ಕೇ ನಾಲ್ಕು ಮಾತು ಕೇಳಿಯೇ ಸಿದ್ಧೇಶ್ವರಿಗೆ ಹಾಲೆರೆದಂತೆ 'ಹಾಯಿ' ಎನಿಸಿತು. ಆನಂದದಿಂದ ಉಯ್ಯಾಲೆಯಾಡುತ್ತಿದ್ದ ಮನಸ್ಸಿನಿಂದ ಎದ್ದುನಿಂತು "ಹೌದು ಶೈಲ, ಕೂಗಿದೆ–ತುಂಬ ಹಣ ಹೊರಗೇ ಬಿದ್ದಿದೆ. ಅದಕ್ಕೇ ನೀಲಳಿಗೆ ಹೇಳಿದೆ–ಹೋಗಿ ನಿಮ್ಮ ಚಿಕ್ಕಮ್ಮನನ್ನು ಕೂಗು, ಹಣ ಪೆಟ್ಟಿಗೆಗಿಡಲಿ, ಅಂತ—ತೆಗೆದುಕೊ" ಎಂದು ಶೈಲಜೆಯ ಕೈಯಲ್ಲಿ ಆ ನೋಟುಗಳನ್ನಿಟ್ಟರು. ಅದೆಲ್ಲಿಂದ ಬಂತೆಂದು ಹೇಳಲೂ ಅವರ ಮನಸ್ಸಿಗೆ ಸಾಕಷ್ಟು ಸಮಾಧಾನವಿಲ್ಲ!

ಶೈಲಜಾ ತನ್ನ ಸೆರಗಿನಲ್ಲಿ ಕಟ್ಟಿದ್ದ ಬೀಗದ ಕೈಯಿಂದ ಪೆಟ್ಟಿಗೆ ತೆಗೆದು ಹಣವಿಡಲು ಹೋದುದು ನಯನತಾರೆಗೆ ಅಸಹನೀಯವಾಯಿತು! ಆದರೂ ಒಳಉರಿಯನ್ನು ಮುಚ್ಚಿ ಹೊರಗೊಂದು ಒಣನಗೆ ನಕ್ಕು "ಇದಕ್ಕೆ ನಿನ್ನೆ ನಿನ್ನ ಮೈದುನ ಹೇಳುತ್ತಿದ್ದರು ಅಕ್ಕ–ನಾವೇನು ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳೇ, ಸವತಿಯ ಮಕ್ಕಳೇ–ಒಂದೇ ತಾಯಿಯ ಮಕ್ಕಳು! ಅವರದನ್ನೇ ತಿನ್ನಬೇಕು, ಉಡಬೇಕು. ಆದರೂ ತಿಂಗಳಿಗೆ ಒಂದು ನೂರೋ ಅರುನೂರೋ ಕೊಟ್ಟರೆ ಅಣ್ಣನಿಗೂ ಕೊಂಚ ಸಹಾಯವಾದೀತು ಎಂದರು–ನಿಜವಲ್ಲವೇ ಅಕ್ಕ?" ಎಂದಳು.

ಸಿದ್ಧೇಶ್ವರಿಯ ಮುಖ ಇದ್ದಕ್ಕಿದಂತೆ ಗಂಭೀರವಾಯಿತು. ಅವರೇನೂ ಉತ್ತರಕೊಡದೆ ಶೈಲಜೆಯ ಮುಖದಕಡೆಗೇ ನೋಡುತ್ತಿದ್ದರು–ನಯನತಾರಾ ಅವರ ಗಾಂಭೀರ್ಯದ ಕಾರಣ ಅರ್ಥಮಾಡಿಕೊಳ್ಳದೆ ತನ್ನ ಮಾತು ಮುಂದುವರಿಸಿದಳು—

"ಶ್ರೀರಾಮಚಂದ್ರ ಅಳಿಲಿನ ಸಹಾಯದಿಂದ ಸಮುದ್ರಕ್ಕೆ ಸೇತುವೆ ಕಟ್ಟಿದ. ಅದನ್ನೇ ಅವರು ಹೇಳುತ್ತಿರುತ್ತಾರೆ, ಅತ್ತಿಗೆ ಬಾಯಿಬಿಟ್ಟು ಕೇಳದೆ ಇದ್ದರೂ ನಾವೇ ಅರ್ಥಮಾಡಿಕೊಳ್ಳಕೂಡದೆ? ನಮ್ಮ ಕೈಲಾದಷ್ಟು ಸಹಾಯ ನಾವೂ ಮಾಡಬೇಕು–ಇಲ್ಲದೆ ಸುಮ್ಮನೆ ಕುಳಿತು ತಿನ್ನುವುದು, ಕುಡಿಯುವುದು, ಉಡುವುದು, ಮಲಗುವುದರಲ್ಲೇ ಜೀವನ ಮುಗಿಸಿದರೆ ಏನು ಮಾಡಿದಂತಾಯಿತು? ನೀನೂ ಹರಿ, ಮಣಿ ಇವರಿಗಾಗಿ ಒಂದಿಷ್ಟು

ಹಣ ಕೂಡಿಡಬೇಕು. ಅಕ್ಕ ನಮ್ಮೆಲ್ಲರಿಗಾಗಿ ಎಲ್ಲವನ್ನೂ ಖರ್ಚುಮಾಡಿ ಬಿಟ್ಟರೆ ಆಗಿಹೋಯಿತೇ? ನಾನು ಹೇಳುವುದು ಸುಳ್ಳೇ ? ನೀನೇ ಹೇಳಕ್ಕ"

ಸಿದ್ಧೇಶ್ವರಿ ಮುಖಗಂಟಿಕ್ಕಿ "ಸರಿ" ಎಂದರು.

ಶೈಲಜಾ ಪೆಟ್ಟಿಗೆಗೆ ಬೀಗಹಾಕಿ ಸಿದ್ಧೇಶ್ವರಿಯ ಬಳಿಬಂದು ಗೊಂಚಲಿನಿಂದ ಬೀಗದಕೈ ತೆಗೆದು ಹಾಸಿಗೆಯ ಮೇಲಿಟ್ಟು ಮಾತಿಲ್ಲದೆ ಹೊರಟಳು. ಸಿದ್ಧೇಶ್ವರಿ ಕೋಪದಿಂದ ಬೆಂಕಿಯಾದರು. ತಕ್ಷಣವೇ ಅದನ್ನಡಗಿಸಿಕೊಂಡು ತೀಕ್ಷ್ಣಧ್ವನಿಯಲ್ಲಿ "ಇದೇನಿದು, ಶೈಲ ?" ಎಂದರು.

"ಕೆಲವು ದಿನಗಳಿಂದ ಯೋಚಿಸುತ್ತಾ ಇದ್ದೆ. ಅಕ್ಕ ಇನ್ನು ಮೇಲೆ ಈ ಬೀಗದಕೈ ನನ್ನ ಬಳಿಯಿರುವುದು ಸರಿಯಲ್ಲ–ಅಭಾವದಿಂದಲೇ ಮನುಷ್ಯನ ಗುಣವೆಲ್ಲಾ ಹಾಳಾಗುವುದು! ನನ್ನ ಸುತ್ತ ನಾಲ್ಕು ಕಡೆಯೂ ಅಭಾವವೇ ಅಭಾವ! ತಲೆಕೆಡಲೇನೂ ಬಹುಕಾಲ ಹಿಡಿಯುವುದಿಲ್ಲ. ಅಲ್ಲವೇ ಕಿರಿಯಕ್ಕ ?" ಎಂದಳು.

ಕೂಡಲೇ ನಯನತಾರಾ "ನಾನು ನಿನ್ನ ಮಾತಿಗೇನೂ ಬಂದಿಲ್ಲ–ನನ್ನನ್ನೇಕೆ ಸುಳ್ಳುಸುಳ್ಳೇ ದೂರುತ್ತಿಯಾ ?" ಎಂದು ಗದರಿಕೊಂಡಳು.

"ಇನ್ನೂ ಏಕೆ ತಲೆಕೆಟ್ಟಿಲ್ಲ, ಕೇಳಬಹುದೋ ?" ಎಂದರು ಸಿದ್ಧೇಶ್ವರಿ

"ಇದುವರೆಗೆ ಯಾವುದೂ ಆಗಲಿಲ್ಲವೆಂದರೆ ಮುಂದೆಯೂ ಆಗುವುದಿಲ್ಲವೆಂದು ಯಾರು ತಾನೇ ಹೇಳಲಾದೀತು ? ಹಾಗೆಯೇ ನಾವು ನಿಮ್ಮ ಸಂಪಾದನೆಯನ್ನು ತಿನ್ನುತ್ತಿದ್ದೇವೆ–ಉಡುತ್ತಿದ್ದೇವೆ, ಹಣಸಹಾಯ ನಾವು ಮಾಡುವಂತಿಲ್ಲ. ದೈಹಿಕ ಸಹಾಯಮಾಡುತ್ತಿಲ್ಲ. ಆದರೆ ಯಾವಾಗಲೂ ಹೀಗೆಯೇ ಇರುವುದು ಸರಿಯೇನು ?" ಎಂದಳು ಶೈಲಜಾ.

ಸಿದ್ಧೇಶ್ವರಿಯ ಕಣ್ಣು ಕೆಂಡಕಾರುತ್ತಿತ್ತು—"ಇಷ್ಟು ಒಳ್ಳೆಯತನ ಯಾವಾಗಿನಿಂದಲೇ ? ಇದುವರೆಗೂ ಬುದ್ಧಿ ಎಲ್ಲಿ ಹೋಗಿತ್ತು ?"

ಶೈಲಜಾ ಸಹಜವಾಗಿಯೇ "ಸುಮ್ಮನೆ ಕೋಪಗೊಂಡು ಮೈ ಏಕೆ ಕೆಡಿಸಿಕೊಳ್ಳುತ್ತೀ ಅಕ್ಕ–ಈಗ ನಾವಿಲ್ಲಿರುವುದು ನಿನಗೂ ಸರಿದೋರುತ್ತಿಲ್ಲ–ನನಗೂ ಅಷ್ಟೆ" ಎಂದಳು.

ಅತಿಕೋಪದಿಂದ ಸಿದ್ಧೇಶ್ವರಿಯ ಬಾಯಿಂದ ಮಾತೇ ಹೊರಡಲಿಲ್ಲ.

ನಯನತಾರಾ ಅವರ ಪರವಾಗಿ ಕೇಳಿದಳು—"ಅಕ್ಕನಿಗೇನೋ ಸರಿ ತೋರುವುದಿಲ್ಲ ಆದರೆ ನಿನಗೇಕೆ ?—"

ಶೈಲಜಾ ಇದಕ್ಕುತ್ತರ ಕೊಡದೆಯೇ ಹೊರಡುವುದರಲ್ಲಿದ್ದಳು–ಅಷ್ಟರಲ್ಲಿ ಸಿದ್ಧೇಶ್ವರಿ ಜೋರಾಗಿ ಕಿರಿಚಿಕೊಂಡಿದ್ದರು. "ಯಾವಾಗ ಇಲ್ಲಿಂದ ತೊಲಗುತ್ತೀ–ಹೇಳು–ಸುಟ್ಟ ಮೋರೆಯ ಶನಿ!–ಆವತ್ತು ಬೀದಿಗೆಲ್ಲ ಸಕ್ಕರೆ ಹಂಚುತ್ತೇನೆ. ಭಂಗಾರದ ಮನೆಗೆ ಜಗಳ ತಂದಿಟ್ಟು ನುಚ್ಚುನೂರು ಮಾಡಿದುದೇ ಸಾಕು. ನನ್ನದೆಷ್ಟು ಹಣ ಕದ್ದಿದ್ದೀಯೋ ಲೆಕ್ಕಕೊಟ್ಟುಹೋಗು—"

ಶೈಲಜಾ ತಕ್ಷಣವೇ ತಿರುಗಿ ದಿಟ್ಟಿಸಿದಳು–ಅವಳ ಕಣ್ಣುಗಳು ಜ್ವಾಲಾಮುಖಿಗಳಾಗಿದ್ದುವು–ಮರುಕ್ಷಣವೇ ಮುಖ ತಿರುವಿ ಹೊರಟುಹೋದಳು.

ಮುರಿದ ಮರದ ಗೊಂಬೆಯಂತೆ ಸಿದ್ಧೇಶ್ವರಿ ಹಾಸಿಗೆಯ ಮೇಲೆ ಹೊರಳಾಡುತ್ತಾ ಬಿಕ್ಕಿಬಿಕ್ಕಿ ಅಳಲಾರಂಭಿಸಿದರು—"ಈ ಅಭಾಗ್ಯೆಯನ್ನು ಚಿಕ್ಕಂದಿನಿಂದ ನಾನೇ ಪೋಷಿಸಿ ಬೆಳೆಸಿದೆ. ಅವಳೇ ನನಗಿಂದು ಅವಮಾನಮಾಡಿ ಹೋದಳಲ್ಲಾ–ಬರಲಿ, ಅವರು ಮನೆಗೆ ಬರಲಿ, ಅವಳನ್ನು ಜೀವಂತ ಚರ್ಮ ಸುಲಿಸದಿದ್ದರೆ ನನ್ನ ಹೆಸರು ಸಿದ್ಧೇಶ್ವರಿ ಅಲ್ಲವೇ ಅಲ್ಲ!"

2

ಸಿದ್ಧೇಶ್ವರಿಯ ಸ್ವಭಾವದಲ್ಲೊಂದು ದೊಡ್ಡ ಕುಂದೆಂದರೆ ಅವರ ವಿಶ್ವಾಸದ ಚಂಚಲತೆ! ಇಂದಿನ ದೃಢವಿಶ್ವಾಸ, ನಂಬುಗೆ ಸಾಧಾರಣ ಕಾರಣದಿಂದ ನಾಳೆ ಇಲ್ಲವಾಗುತ್ತಿತ್ತು. ಶೈಲಜೆಯಲ್ಲಿ ಇದುವರೆಗೂ ಪೂರ್ಣ ನಂಬುಗೆಯಿತ್ತು. ಆದರೆ ಈಚೆಗೆ ಕೆಲವು ದಿನಗಳಿಂದ ನಯನತಾರಾ ಅವರ ಕಿವಿಯಲ್ಲಿ ವಿಷತುಂಬಿದ್ದುದರಿಂದ ಅವರಿಗೆ ಸಂದೇಹ. ಶೈಲಜಾ ಒಂದಿಷ್ಟು ಗಂಟು ಮಾಡಿಟ್ಟುಕೊಂಡಿರುವಳೆಂಬ ಅನುಮಾನ. ಆ ಗಂಟಿನ ಹಣ ಎಲ್ಲಿಯದೆಂಬುದನ್ನೂ ಸುಲಭವಾಗಿಯೇ ಊಹಿಸಿಬಿಟ್ಟರು. ಶೈಲಜಾ ಅದೇ ಊರಿನಲ್ಲೇ ಬೇರೆಯ ಮನೆ ಮಾಡುವುದು ಅಸಂಭವವೆಂಬುದೂ ಅವರಿಗೆ ಗೊತ್ತಿತ್ತು!

ರಾತ್ರಿ ಗಿರೀಶ ಹೊರಕೋಣೆಯಲ್ಲಿ ಕುಳಿತು ಎಣ್ಣೆಯ ದೀಪದ ಮುಸುಕು ಬೆಳಕಿನಲ್ಲಿ ಯಾವುದೋ ಮೊಕದ್ದಮೆಯ ಅವಶ್ಯ ಕಾಗದಗಳನ್ನು ಓದುತ್ತಿದ್ದರು–ಸಿದ್ಧೇಶ್ವರಿ ನಾಲಿಗೆಯ ತುದಿಯಲ್ಲೇ ಮಾತಿಟ್ಟುಕೊಂಡು ಒಳಬಂದವರೇ ಆರಂಭಿಸಿಬಿಟ್ಟರು—"ಇಷ್ಟೊಂದು ಒದ್ದಾಡುವಿರಲ್ಲಾ–ಏನಾದರೂ ಪ್ರಯೋಜನವಾದಂತಾಯಿತೇ? ನೀವಿಲ್ಲಿ ದುಡಿದು ದುಡಿದು ಸತ್ತು ಸುಣ್ಣವಾಗುತ್ತಿರಿ–ಅಲ್ಲಿ ದ್ರೋಹಿಗಳು ಉಂಡುತಿಂದು ನಲಿಯಲಿ!"

ಗಿರೀಶನ ಕಿವಿಗೆ ಬಿದ್ದ ಮಾತು—"ಉಂಡುತಿಂದು"–ಕೂಡಲೇ ಅವರು ತಲೆಕೂಡ ಎತ್ತದೆ ಹಾಗೆಯೇ "ಇನ್ನು ಹೊತ್ತು ಮಾಡುವುದಿಲ್ಲ. ಇದೊಂದು ಸ್ವಲ್ಪ ನೋಡಿ ಬಂದು ಬಿಡುತ್ತೇನೆ–ತಟ್ಟೆಹಾಕು ನಡಿ" ಎಂದರು.

ಸಿದ್ಧೇಶ್ವರಿಗೆ ಬಹಳ ಕೋಪ ಬಂತು—

"ಊಟದ ಮಾತನ್ನು ನಿಮಗೆ ಯಾರು ಹೇಳಿದರು ಈಗ? ನಾನು ಹೇಳೋದೇ ನಿಮಗೆ ಕೇಳೋದಿಲ್ಲಾಂತ ತೋರುತ್ತದೆ. ಕಿರಿಯಸೊಸೆಯೂ ಕಿರಿಮೈದುನನೂ ಮನೆಬಿಟ್ಟು ಹೊರಟಿದ್ದಾರೆ. ಇಷ್ಟು ದಿನ ಈ ಜನಕ್ಕೆ ಮಾಡಿದುದೆಲ್ಲಾ ಏನಾಯಿತು?–ನಿಮಗೆ ಅದಾದರೂ ಗೊತ್ತೇನು?"

ಗಿರೀಶ ಕೊಂಚ ತಿಳಿದವರಂತೆ "ಹೂಂ, ಗೊತ್ತಿಲ್ಲದೇ ಏನು? ಚೆನ್ನಾಗಿ ಸಿದ್ಧಮಾಡಿಕೊಳ್ಳಲು ಹೇಳು. ಹಾಗೆಯೇ ಅವರ ಜತೆಯಲ್ಲಿ ಯಾರು ಯಾರು ಹೋಗುತ್ತಾರೆ–ಮಣಿ–" ಎಂದು ಕಾಗದ ನೋಡುವ ಆತುರದಲ್ಲಿ ಮಾತನ್ನು ಮರೆತು ಅಲ್ಲಿಗೆ ನಿಲ್ಲಿಸಿದರು.

ಸಿದ್ಧೇಶ್ವರಿ ಕೋಪದಿಂದ ಕಿರಿಚಿಕೊಂಡರು—"ನನ್ನೊಂದು ಮಾತೂ ನಿಮ್ಮ ಕಿವಿಯಮೇಲೆ ಬೀಳುವುದೇ ಇಲ್ಲ! ನಾನು ಹೇಳುತ್ತಿರುವುದೇನು–ನಿಮ್ಮ ಉತ್ತರವೇನು? ಕಿರಿಯಸೊಸೆ ಮನೆಬಿಟ್ಟು ಹೊರಟಿದ್ದಾಳೆ!"

ಪೆಟ್ಟು ಬಿದ್ದಂತೆ ಗಿರೀಶ ಬೆಚ್ಚಿದರು—"ಎಲ್ಲಿಗೆ?"

ಮೊದಲಿನಂತೆಯೇ ಷಡ್ಜದಲ್ಲಿಯೇ, "ಎಲ್ಲಿಗೋ ನನಗೇನು ಗೊತ್ತು!" ಎಂದರು ಸಿದ್ಧೇಶ್ವರಿ.

"ಹಾಗಾದರೆ ಅವಳ ವಿಳಾಸ ಬರೆದಿಟ್ಟುಕೊ" ಎಂದರು ಗಿರೀಶ.

ಸಿದ್ಧೇಶ್ವರಿ ಹುಚ್ಚು ಹಿಡಿದವರಂತೆ ತಲೆ ತಲೆ ಚಚ್ಚಿಕೊಂಡರು. "ಹಾಳು ಹಣೆಬರೆಹ ನನ್ನದು–ಅವಳ ವಿಳಾಸ ಬರೆದುಕೊಳ್ಳಬೇಕಂತೆ ನಾನು! ನನ್ನ ಸೃಷ್ಟಿಯಾಗದಿದ್ದರೆ ನಿಮ್ಮನ್ನೆಲ್ಲಿ ಮದುವೆಯಾಗುತ್ತಿದ್ದೆ. ನಮ್ಮಪ್ಪ ಅಮ್ಮ ನನ್ನನ್ನು ಗಂಗಾನದಿಗೆಸೆದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎನ್ನುತ್ತಾ ಅಳಲಾರಂಭಿಸಿದರು. ತಮ್ಮ ಮದುವೆಯಾಗಿ ೩೩ ವರ್ಷವಾದ ಮೇಲೆ ತಮ್ಮ ಗಂಡ ತಮಗೆ ಸರಿಯುಲ್ಲದವರೆಂದು ತಿಳಿದ ಅವರ ದುಃಖಕ್ಕೆ, ಪಶ್ಚಾತ್ತಾಪಕ್ಕೆ ಎಣೆಯೇ ಇಲ್ಲ!– "ನೀವೇನಾದರೂ ಕಣ್ಣುಮುಚ್ಚಿದರೆ, ನಾನೇನೋ ಯಾವ ರೀತಿಯುಲ್ಲಾದರೂ ಎಲ್ಲಾದರೂ ದುಡಿದರೂ ಜೀವನ ನೀಗಿಕೊಳ್ಳುತ್ತೇನೆ–ನನ್ನ ಹಣೆಬರಹವೇ ಅಷ್ಟು. ಆದರೆ ಮಣಿ–ಹರಿ ಇವರ ಪಾಡೇನು?

ಅವರಿಗೆ-" ಇದುವರೆಗೂ ತಡೆದಿದ್ದ ಕಣ್ಣೀರಿನ ಕಟ್ಟೆ ಒಡೆದು ಆ ಪ್ರವಾಹದಲ್ಲಿ ಉಳಿದ ಮಾತು ಕೊಚ್ಚಿಕೊಂಡು ಹೋಯಿತು.

ಮೊಕದ್ದಮೆಯ ವಿಷಯ ಗಿರೀಶನಿಗೆ ಮರೆತೇಹೋಯಿತು. ಹೆಂಡತಿಯ ಅನಿರೀಕ್ಷಿತ, ಅಪಾರ ಅಳುವಿನಿಂದ ಮನಸ್ಸು ಕಲಕಿ ಜೋರಾಗಿ "ಹರಿ" ಎಂದು ಕೂಗಿದರು.

ಹರಿ ಪಕ್ಕದ ಕೋಣೆಯಲ್ಲಿ ಓದುತ್ತಿದ್ದವನು ಅವಸರವಸರವಾಗಿ ಓಡಿ ಬಂದ.

ಗಿರೀಶ ಅವನನ್ನು ಜೋರಾಗಿ ಗದರಿಕೊಂಡರು—"ಮತ್ತೆ ಯಾರೊಡನೆ ಯಾದರೂ ಜಗಳಗಿಗಳವಾಡಿದೆಯೋ ಚಾವಟಿಯಿಂದ ಚರ್ಮ ಸುಲಿದು ಬಿಡುತ್ತೇನೆ. ಗೊತ್ತೋ ಉಂಡಾಡಿಗ! ಓದಿಲ್ಲ ಬರಹವಿಲ್ಲ!-ಹಗಲೂ ರಾತ್ರಿ ತಿನ್ನುವುದು, ಕುಣಿಯುವುದು. ಮಣಿ ಎಲ್ಲೋ?"

ತಂದೆಯ ಗದರಿಕೆಯೆಂದರೇನೆಂಬುದೇ ಆ ಹುಡುಗರಿಗೆ ತಿಳಿಯದು. ಹರಿ ಹೆದರಿಕೆಯಿಂದ ಎಲ್ಲ ಮರೆತು ಹೋದವನಂತೆ "ನನಗೆ ಗೊತ್ತಿಲ್ಲ" ಎಂದ.

"ಗೊತ್ತಿಲ್ಲ!-ನಿಮ್ಮ ಗೊಂದಲವೆಲ್ಲಾ ನನಗೆ ಗೊತ್ತಿಲ್ಲವೆಂದಿದ್ದೀ ಯೇನೋ! ನನಗೆ ಎಲ್ಲಾ ನಿಗಾ ಇದೆ. ನಿಮಗೆ ಪಾಠ ಹೇಳಿಕೊಡುವವರು ಯಾರೋ? ಅವರನ್ನಿಲ್ಲಿ ಕೂಗೋ-"

ಹರಿ ಬಹಳ ಸಣ್ಣದನಿಯಲ್ಲಿ "ನಮ್ಮ ಶಾಲೆಯ ಮೂರನೆಯ ಮೇಷ್ಟರು-ಧೀರೇನ್ ಬಾಬು-ಬೆಳಿಗ್ಗೆ ಹೊತ್ತು ಬಂದು ಪಾಠಹೇಳಿ ಹೋಗುತ್ತಾರೆ" ಎಂದ.

"ಬೆಳಿಗ್ಗೆಯೇ?-ಬೆಳಿಗ್ಗೆ ಯಾಕೆ? ಸಂಜೆಯೂ ಯಾಕೆ ಬರುವುದಿಲ್ಲ? ಇಂತಹ ಮೇಷ್ಟರು ನನಗೊಪ್ಪಿಗೆಯಿಲ್ಲ. ನಾಳೆಯಿಂದ ಬೇರೆ ಮೇಷ್ಟರು ಬರುತ್ತಾರೆ. ಹೋಗು, ಮನಸ್ಸಿಟ್ಟು ಪಾಠಓದು-ಕೂಚಂಭಟ್ಟ!"

ಹರಿ ಸಪ್ಪೆಮುಖದಿಂದ ತಾಯಕಡೆಗೊಮ್ಮೆ ನೋಡಿ ಮೆಲ್ಲಮೆಲ್ಲನೆ ಹೊರಟುಹೋದ.

ಗಿರೀಶ ಹೆಂಡತಿಯ ಕಡೆಗೆ ತಿರುಗಿದರು—"ನೋಡಿದೆಯಾ ಈಗಿನ ಮೇಷ್ಟರುಗಳ ಕೆಲಸ! ಕಾಸು ತೆಗೆದುಕೊಂಡೂ ಬಿಡುತ್ತಾರೆ; ಮೋಸಮಾಡು ವುದೂ ಮಾಡುತ್ತಾರೆ! ರಮೇಶನಿಗೆ ಹೇಳಿಬಿಡು. ನಾಳೆಯೇ ಈ ಪ್ರಾಣ ಬಾಬುವನ್ನೂ ಕಳಿಸಿ ಬೇರೆ ಮೇಷ್ಟರನ್ನು ಗೊತ್ತುಮಾಡಲಿ, ನನ್ನ ಕಣ್ಣಿಗೆ ಮಣ್ಣೆರಚಿಬಿಡಬಹುದೆಂದುಕೊಂಡಿರಬಹುದು ಅವನು!"

ಸಿದ್ಧೇಶ್ವರಿ ಯಾವ ಮಾತೂ ಆಡದೆ, ಗಂಡನ ಮುಖವನ್ನು ಕೋಪ ದಿಂದ ನೋಡಿ ಮೌನವಾಗಿ ಹೊರಟುಹೋದರು.

ತಮ್ಮ ಕೆಲಸವನ್ನು ಸಮರ್ಪಕವಾಗಿ ಮಾಡಿದೆನೆನ್ನುವ ತೃಪ್ತಿಯಿಂದ ಗಿರೀಶ ಮತ್ತೆ ತಮ್ಮ ಕಾಗದ ಪತ್ರದಲ್ಲಿ ಮಗ್ನರಾದರು.

ಹಣವೆಂಬುವ ವಸ್ತುವಿನ ಅಪಾರ ಆವಶ್ಯಕತೆ ಸಿದ್ಧೇಶ್ವರಿಗೆ ಗೊತ್ತಿಲ್ಲ ವೆಂದಲ್ಲ. ಆದರೆ ಇದುವರೆಗೂ ಆಕಡೆ ಆವರ ಗಮನ ಬಿದ್ದಿರಲಿಲ್ಲ. ಆಸೆ ಯೆಂಬುದು ಅಂಟುರೋಗ. ನಯನತಾರೆಯ ಜತೆಯಾದಂದಿನಿಂದ ಸಿದ್ಧೇಶ್ವರಿಯ ಮನಸ್ಸನ್ನು ಈ ರೋಗ ಪೂರ್ಣವಾಗಿ ಆಕ್ರಮಿಸಿತ್ತು.

ಇಂದೇ ಊಟವಾದ ನಂತರ ಶೈಲಜಾ ಮನೆಬಿಟ್ಟು ಹೊರಟುಹೋಗುವ ಳೆಂದು ಸಿದ್ಧೇಶ್ವರಿಯ ಎದೆಸೀಳಿಕೊಂಡು ನಿಟ್ಟುಸಿರೊಂದು ಹೊರಬೀಳಲು ಸಿದ್ಧವಾಗುತ್ತಿತ್ತು. ಹಾಗೂ ಹೀಗೂ ಅದನ್ನಡಗಿಸಿ ಅವರು ಜ್ವರಬಂದಂತೆ ಹಾಸಿಗೆಯ ಮೇಲೆ ಬಿದ್ದುಕೊಂಡರು.

ನಯನತಾರಾ ಬಂದು ಅವರ ಪಕ್ಕದಲ್ಲಿ ಕುಳಿತಳು. ಹಣೆಯ ಮೇಲೆ ಕೈಯಿಟ್ಟು ನೋಡಿ ತನ್ನ ಆಶಂಕೆ ತೋರಿಸಿ "ವೈದ್ಯರನ್ನು ಕರೆಸಲೇ" ಎಂದು ಕೇಳಿದಳು.

ಸಿದ್ಧೇಶ್ವರಿ ಬೇರೆಕಡೆ ಮುಖಮಾಡಿ "ಬೇಡ" ಎಂದರು.

ನಯನತಾರಾ ಅವರ ಕೋಪದ ಕಾರಣ ಹುಡುಕಿ ಸರಿಯಾದ ಮದ್ದಿ ಟ್ಟಳು. ಕೊಂಚಕಾಲ ಸುಮ್ಮನಿದ್ದು ಮೆಲ್ಲನೆ–"ನಾನಿದನ್ನೇ ಯೋಚಿಸು ತ್ತಿದ್ದೇನೆ ಅಕ್ಕ, ಜನ ಇಷ್ಟೊಂದು ಹಣವನ್ನು ಹೇಗೆ ಗಂಟುಹಾಕುವರೋ ಕಾಣೆ–ಈ ಮೊಹಲ್ಲೆಯ ಯದುನಾಥಬಾಬು, ಗೋಪಾಲಬಾಬು–ಇವರು ಯಾರಿಗಾಗಲೀ ಹಿರಿವೈದುನನ ವರಮಾನದ ಅರ್ಧದಷ್ಟೂ ಸಂಪಾದನೆಯಿಲ್ಲ. ಆದರೆ ಪ್ರತಿಯೊಬ್ಬರೂ ಐದುಲಕ್ಷಕ್ಕೆ ಕಡಿಮೆಯಿಲ್ಲದಷ್ಟು ಹಣಕೂಡಿಸಿಟ್ಟಿ ದ್ದಾರೆ. ಅವರ ಹೆಂಗಸರ ಬಳಿಯೂ ಹತ್ತಿಪ್ಪತ್ತು ಸಾವಿರಕ್ಕೆ ಕಡಿಮೆಯಿಲ್ಲ ದಷ್ಟು ಹಣವಿದೆ" ಎಂದಳು.

ಸಿದ್ಧೇಶ್ವರಿ ಕೊಂಚ ಚಂಚಲಳಾಗಿ "ನಿನಗೆ ಹೇಗೆ ತಿಳಿಯಿತು, ತಂಗಿ?" ಎಂದರು.

"ಇವರು ಬ್ಯಾಂಕಿನ ಬಾಬುವನ್ನು ಕೇಳಿದರು. ಅವರೆಲ್ಲ ಇವರ ಸ್ನೇಹಿತರೇ ತಾನೆ! ನಿನ್ನೆ ಗೋಪಾಲಬಾಬುವಿನ ಹೆಂಡತಿ ನನ್ನ ಮಾತನ್ನು

ನಂಬಲೇ ಇಲ್ಲ. ಅದು ಹೇಗೆ ಸಾಧ್ಯ, ಅಕ್ಕನಬಳಿ ಕೊಂಚವೂ ಹಣವಿಲ್ಲವೆಂದರೆ ನಂಬುವುದೇ ಅಸಾಧ್ಯವೆಂಪಳು-ಏನಿಲ್ಲೆಂದರೂ-"

ಸಿದ್ಧೇಶ್ವರಿ ತಮ್ಮ ಜ್ವರವುರೆತು ಚಟ್ಟನೆದ್ದು ಕುಳಿತು ತಮ್ಮ ಬಳಿಯಿದ್ದ ಬೀಗದ ಕೈಗೊಂಚಲನ್ನು ನಯನತಾರೆಯ ಬಳಿಗೆ ಠಣ್ಣನೆಸೆದರು.

"ಬೀರು, ಪೆಟ್ಟಿಗೆ ಎಲ್ಲವನ್ನೂ ನೀನೇ ತೆಗೆದುನೋಡು. ತಂಗಿ-ಮನೆಯ ಖರ್ಚಿನ ಹೊರತು ಒಂದು ಕಾಸಾದರೂ ಇದೆಯೇ ನೀನೇ ನೋಡಿಕೊ. ಎಲ್ಲಾ ನೋಡುತ್ತಿದ್ದವಳು ಅವಳು, ಆ ಕಿರಿಯಸೊಸೆ. ನನಗೆ ಒಂದು ಮಾತಾಡುವುದಕ್ಕೂ ಅವಕಾಶವಿರಲಿಲ್ಲ! ಇಷ್ಟು ದಿನವಾಯಿತು ಇವರ ಮನೆಗೆ ಬಂದು ಒಂದು ಮಾತಾಡುವುದಕ್ಕೂ ಅವಕಾಶವಿರಲಿಲ್ಲ! ಒಂದು ಕುರುಡು ಕಾಸನ್ನಾದರೂ ಕಣ್ಣಿನಿಂದ ಕಂಡವಳಲ್ಲ. ಇದರ ಜತೆಗೆ ಶಿಕ್ಷೆಯೂ ನನಗೇ! ಅವಳಿಂದು ಎಲ್ಲವನ್ನೂ ದೋಚಿಕೊಂಡು ಹೋಗುತ್ತಿದ್ದಾಳೆ. ನಾನೇನು ತಾನೇ ಮಾಡಲು ಸಾಧ್ಯ? ನನ್ನ ಹತ್ತಿರವೇನಾದರೂ ದುಡ್ಡಿದ್ದರೆ ಹೀಗಾಗುತ್ತಿತ್ತೇ?-ಈಗೆಲ್ಲ ಹಾಳಾಯಿತು-ನೀನೇ ಹೇಳು ತಂಗಿ-"

"ನಿಜ, ಅಕ್ಕ" ಎಂದಳು ನಯನತಾರಾ ತಲೆದೂಗುತ್ತಾ.

ಸಿದ್ಧೇಶ್ವರಿಯ ಮನಸ್ಸು ಶೈಲಜೆಯ ವಿರುದ್ಧ ಮತ್ತೆ ಕಲ್ಲಾಯಿತು. ಇದುವರೆಗೂ ತಾವೇ ಶೈಲಜೆಯನ್ನು ಬೆಳೆಸಿದವರು-ತಮ್ಮ ಪೆಟ್ಟಿಗೆಯ ಬೀಗದಕೈ ಅವಳ ವಶಕ್ಕೆ ಕೊಟ್ಟು, ತಾವೇ ಅವಳನ್ನು ದೊಡ್ಡವಳನ್ನಾಗಿ ಮಾಡಿ ಕೂರಿಸಿದೆವೆಂಬುದನ್ನು ಸಿದ್ಧೇಶ್ವರಿ ಸಂಪೂರ್ಣವಾಗಿ ಮರೆತೇಬಿಟ್ಟರು.

"ನೋಡುತಂಗಿ ದುಡಿಯುವವರು ಒಬ್ಬರು; ಇಷ್ಟೊಂದು ದೊಡ್ಡ ಸಂಸಾರ ಅವರ ತಲೆಯಮೇಲೆ-ಅವರದೂ ತಪ್ಪಲ್ಲ" ಎಂದರು.

"ಅಯೋ!-ಗೊತ್ತಿಲ್ಲವೇ ಅಕ್ಕ, ಅದು-ಎಲ್ಲರಿಗೂ ಗೊತ್ತು" ಎಂದಳು ನಯನತಾರಾ. ಕೊಂಚಕಾಲ ಸುಮ್ಮನಿದ್ದು ನಯನತಾರಾ ಮತ್ತೆ ಮೆಲ್ಲನೆ ಮಾತಾಡಲಾರಂಭಿಸಿದಳು. "ನಾವಿದ್ದೆವಲ್ಲ-ಆ ಹಳ್ಳಿಯಲ್ಲಿ ನಂದಲಾಲ ಎನ್ನುವವರಿದ್ದರು. ಅವರು ಅಲ್ಲಿ ಕಚೇರಿಯಲ್ಲಿ ಗುಮಾಸ್ತೆಯ ಕೆಲಸ ಮಾಡುತ್ತಿದ್ದರು. ತಮ್ಮನನ್ನು ದೊಡ್ಡವನನ್ನಾಗಿ ಮಾಡಲು, ಗೌರವಸ್ಥನನ್ನಾಗಿಸಲು ಅವನನ್ನು ಓದಿಸಿದರು. ಹೀಗೆಯೇ ಅವನ ಮದುವೆ ಅವನ ಮಕ್ಕಳ ಮದುವೆ ಮುಂಜಿಯಲ್ಲಿ ತಮ್ಮ ಸರ್ವಸ್ವವನ್ನೂ ನೀಗಿ ಬಿಟ್ಟರು. ಕೈಯಲ್ಲೊಂದು ಬಿಡಿಕಾಸೂ ಉಳಿಸಿಕೊಳ್ಳಲಿಲ್ಲ. ಹೆಂಡತಿಯೇನಾದರೂ ಬುದ್ಧಿ ಹೇಳಿದರೆ ಅವಳ ಮೇಲೇ ರೇಗುತ್ತಿದ್ದರು-"

ಸಿದ್ಧೇಶ್ವರಿ ಮಧ್ಯದಲ್ಲೇ ಬಾಯಿಹಾಕಿದರು—"ನನ್ನ ಗತಿಯೇ! ಮತ್ತೇನು?"

ನಯನತಾರಾ ಮುಂದುವರಿಸಿದಳು—"ಹೂಂ! ಎಲ್ಲಾ ಹಾಗೆಯೇ! ಹೆಂಡತಿಯನ್ನು ಗದರಿಸುತ್ತಿದ್ದರು ನಂದಬಾಬು!–ನಿನಗೆ ಯಾಕೆ ಯೋಚನೆ? ನಿನ್ನ ನರೇನ್ ಇಲ್ಲವೆ? ಅವನನ್ನು ಓದಿಸಿ ವಕೀಲನನ್ನಾಗಿಸಿಲ್ಲವೆ? ನಮಗೆ ವಯಸ್ಸಾದಾಗ ಅವನೇ ನಮ್ಮನ್ನು ನೋಡಿಕೊಳ್ಳುತ್ತಾನೆ–ಅವನು ನಿನ್ನ ಮೈದುನನಲ್ಲ–ಮಗನೆಂದುಕೋ ಎನ್ನುತ್ತಿದ್ದರು. ಆದರೆ ಕಲಿಯುಗ ಅಕ್ಕ, ಕಲಿಕಾಲ–ಅದೇ ನಂದಲಾಲಬಾಬುವಿನ ಕಣ್ಣಿಗೆ ಪರೆಬಂದು ಕುರುಡಾಗಿ ಅವರ ಕೆಲಸಹೋಗಿ ಬಿಡಲು– ವಕೀಲ ನರೇನ್ ಸ್ವಂತ ಸಹೋದರನಾದರೂ ಅಣ್ಣನಿಗೆ ಸಾಲಕೊಟ್ಟು ಆ ನೆವದಲ್ಲೇ ಪಿತ್ರಾರ್ಜಿತ ಆಸ್ತಿಯನ್ನೆಲ್ಲಾ ನುಂಗಿದ. ಈಗ ಪಾಪ–ಅವರು ಬೀದಿಬೀದಿಯಲ್ಲಿ ಭಿಕ್ಷೆ ಬೇಡಿಕೊಂಡು ಬಾಳು ನೀಗುತ್ತಿದ್ದಾರೆ–ತನ್ನ ಹೆಂಡತಿಯ ಮಾತು ಕೇಳದೇ ಇದ್ದುದಕ್ಕೇ ಹೀಗಾಯಿತೆಂದು ಅಳುತ್ತಾರೆ. ಇಷ್ಟಾಗಿ ಅವನು ಚಿಕ್ಕಪ್ಪನ ಮಗನೂ ಅಲ್ಲ–ಸವತಿಗೆ ಹುಟ್ಟಿದವನೂ ಅಲ್ಲ. ಸ್ವಂತ ತಮ್ಮ–ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ತಮ್ಮ!"

ಸಿದ್ಧೇಶ್ವರಿಯ ಎದೆ ಜ್ವಾಲಾಮುಖಿಯಾಗುತ್ತಿತ್ತು. "ನೀನು ಹೇಳುತ್ತಿರುವುದು ನಿಜವೇ ತಂಗಿ?"–ಎಂದರು.

"ಸುಳ್ಳು ಹೇಳುವೆನೇ ಅಕ್ಕ?–ಈ ವಿಷಯ ಎಲ್ಲರಿಗೂ ಗೊತ್ತಿದೆ."

ಸಿದ್ಧೇಶ್ವರಿ ಏನೂ ಮಾತಾಡಲಿಲ್ಲ. ಇದಕ್ಕೆ ಮೊದಲೊಮ್ಮೆ ಶೈಲಜೆಯನ್ನು ಕೂಗಿ ಹೋಗಬೇಡವೆಂದು ಹೇಳಬೇಕೆಂದುಕೊಂಡಿದ್ದರು. ಅವಳನ್ನು ಮನೆಯಲ್ಲಿಯೇ ಉಳಿಸಿಕೊಳ್ಳುವುದು ಹೇಗೆಂದು ಬಹಳ ಯೋಚನೆ ಮಾಡಿದ್ದರು. ಆದರೆ ಈಗ ನಂದಲಾಲರ ದುರವಸ್ಥೆಯ ಕಥೆಕೇಳಿ ಅವರ ಮನಸ್ಸು ಒಮ್ಮೆಗೇ ಗಟ್ಟಿಯಾಯಿತು. ಶೈಲಜೆಯನ್ನು ತಡೆಯುವ ಮನಸ್ಸಾಗಲಿಲ್ಲ ಈಗ.

ಗಿರೀಶ ನ್ಯಾಯಾಲಯಕ್ಕೆ ಹೊರಡುತ್ತಿದ್ದಂತೆ ರಮೇಶ ಬಂದು "ನಾನು ಹಳ್ಳಿಯ ಮನೆಗೆ ಹೋಗಬೇಕೆಂದಿದ್ದೇನೆ" ಎಂದ.

"ಯಾಕೆ?"

"ಯಾರೂ ಇಲ್ಲದಿದ್ದರೆ ಮನೆಮಠವೆಲ್ಲಾ ನೆಲಸಮವಾಗಬಹುದು,

ಹೊಲಗದ್ದೆಯೆಲ್ಲಾ ಪಾಳು ಬೀಳಬಹುದು. ನನಗೂ ಇಲ್ಲಿ ಕೆಲಸವೇನೂ ಇಲ್ಲ, ಅದಕ್ಕೇ—"

"ಸರಿ, ಸರಿ !" ಎನ್ನುತ್ತಾ ಗಿರೀಶ ಸಂತೋಷದಿಂದ ಒಪ್ಪಿದರು.

ತಮ್ಮನ ಈ ಹೊರಡುವಿಕೆಯ ಹಿಂದೆ ಎಷ್ಟೊಂದು ಮನೆಮುರುಕತನ, ಮನಸ್ಸಿನ ಮಲಿನತೆಯಿದೆಯೆಂಬುದು ಬೆಣ್ಣೆ ಮನಸ್ಸಿನ ಗಿರೀಶನಿಗೆ ತಿಳಿಯಲಿಲ್ಲ. ಅವರು ನ್ಯಾಯಾಲಯಕ್ಕೆ ಹೋದ ನಂತರ ಶೈಲಜಾ ಸಿದ್ಧೇಶ್ವರಿಯ ಕೋಣೆಯ ಹೊಸಲಬಳಿ ನಿಂತು ನಮಸ್ಕರಿಸಿ ಸಾಮಾನ್ಯವಾದೊಂದು ಪೆಟ್ಟಿಗೆಯನ್ನೆತ್ತಿಕೊಂಡು ತನ್ನೆರಡು ಮಕ್ಕಳನ್ನೂ ಕರೆದುಕೊಂಡು ಅಲ್ಲಿಂದ ಹೊರಬಿದ್ದಳು.

ಸಿದ್ಧೇಶ್ವರಿ ಹಾಸಿಗೆಯ ಮೇಲೆ ಹೆಣದ ಹಾಗೆ ಬಿದ್ದುಕೊಂಡಿದ್ದರು. ನಯನತಾರಾ ಮಹಡಿಯ ಮೇಲಿನ ಕೋಣೆಯ ಕಿಟಕಿಯಿಂದ ಶೈಲಜೆ ಹೋಗುವುದನ್ನೇ ನೋಡುತ್ತಿದ್ದಳು.

೮

ಎರಡು ದೊಡ್ಡ ದೊಡ್ಡ ಮಂಚಗಳನ್ನು ಕೂಡಿಸಿ ಸಿದ್ಧೇಶ್ವರಿಯ ಹಾಸಿಗೆ ಹಾಸುತ್ತಿದ್ದರು. ಇಷ್ಟೊಂದು ದೊಡ್ಡ ಹಾಸಿಗೆಯಿದ್ದರೂ ಜಾಗ ಸಾಲದೆ ಅವರು ಬಹಳ ಕಷ್ಟದಿಂದ ಮುದುರಿಕೊಂಡು ಮಲಗಬೇಕಾಗುತ್ತಿತ್ತು. ಈ ವಿಷಯವಾಗಿ ಅವರು ಆಗಾಗ ಕೋಪಗೊಳ್ಳುವುದನ್ನೂ ಮರೆತಿರಲಿಲ್ಲ. ಆದರೆ ಮನೆಯ ಮಕ್ಕಳನ್ನೆಲ್ಲಾ ಒಂದುಕಡೆ ಸೇರಿಸಿ ತಮ್ಮ ಬಳಿ ಮಲಗಿಸಿಕೊಂಡ ಹೊರತು ಆವರಿಗೆ ಸಮಾಧಾನವಿಲ್ಲ. ರಾತ್ರಿಯೆಲ್ಲಾ ಎಚ್ಚರವಾಗಿರಬೇಕಾಗುತ್ತಿತ್ತು – ಆಗಾಗ ಏಳಬೇಕಾಗುತ್ತಿತ್ತು. ಎಂದೂ ನಿಶ್ಚಿಂತೆಯಿಂದ ನಿದ್ರೆಮಾಡುವಂತಿರಲಿಲ್ಲ. ಆದರೂ ಈ ತೊಂದರೆಯಿಂದ ತಪ್ಪಿಸಿಕೊಳ್ಳಲೂ ಅವರೊಪ್ಪುತ್ತಿರಲಿಲ್ಲ. ಅವರಿಗೆಷ್ಟೇ ಕಾಯಿಲೆಯೇ ಆದರೂ ಮಕ್ಕಳಿಗೆ ಅವರ ಹಾಸಿಗೆಯಲ್ಲದೆ ಬೇರೆ ಮಲಗುವ ಜಾಗದ ಯೋಚನೆಯೂ ಬರುತ್ತಿರಲಿಲ್ಲ. ಕನ್ಹಯ್ಯನಿಗೆ ಸರಿಯಾಗಿ ನಿದ್ರೆ ಬರುವುದಿಲ್ಲ–ಆದ್ದರಿಂದ ಅವನಿಗೆ ಹೊರಳಾಡಲು ಇಷ್ಟು ಜಾಗ. ಪುಟ್ಟನು ಒಮ್ಮೊಮ್ಮೆ ಹಾಸಿಗೆಯಲ್ಲಿ ಉಚ್ಚೆಹೊಯ್ದುಕೊಳ್ಳುತ್ತಾನೆ, ಅವನಿಗೆ ರಬ್ಬರ್ ಹಾಸಬೇಕು. ವಿಪಿನ ನಿದ್ರಿಸುವಾಗ ಚಕ್ರದಂತೆ ಗಿರಕಿಹೊಡೆಯುತ್ತಾನೆ. ಆದುದ

ರಿಂದ ಅವನಿಗೆ ಬೇರೆ ಏರ್ಪಾಡು. ಪಟಲನಿಗೆ ರಾತ್ರಿ ಎರಡುಮೂರು ಗಂಟೆ ಯವೇಳೆಗೆ ಹಸಿವೆಯಾಗಿ ಬಿಡುತ್ತದೆ. ಅವನಿಗೆ ತಲೆದಿಂಬಿನ ಬಳಿ ತಿಂಡಿಯಿಟ್ಟಿರಬೇಕು. ಹೀಗೆಯೇ ಇದೆಲ್ಲಾ ನೋಡುವುದರಲ್ಲೇ ರಾತ್ರಿ ಕಳೆದುಹೋಗುತ್ತಿತ್ತು. ಇಂದುರಾತ್ರಿ ನಿದ್ರೆಹೋಗುವಾಗ ಹಾಸಿಗೆಯಲ್ಲೆಷ್ಟು ಜಾಗ ಖಾಲಿಯಾಗುತ್ತದೆಂಬುದನ್ನು ಶೈಲಜಾ ಹೋಗುವಾಗ ಸಿದ್ಧೇಶ್ವರಿ ಯೋಚಿಸಿರಲಿಲ್ಲ.

ನಯನತಾರೆಯ ಒತ್ತಾಯದಿಂದ ಇಂದು ಅವರು ಕೆಳಗಿನ ಕೋಣೆಯಲ್ಲೇ ಊಟಮುಗಿಸಿ ಮೇಲೆ ಬರುತ್ತಿದ್ದಂತೆ ಶೈಲಜೆಯ ಕೊಠಡಿಯಬಳಿ ಬಂದರು. ಇದ್ದಕ್ಕಿದ್ದಂತೆ ನೂರಾರು ಚೂರಿಗಳಿಂದ ಎದೆ ಇರಿದಂತಾಯಿತು. ಕೋಣೆಯೊಳಗೆ ದೀಪವಿರಲಿಲ್ಲ. ಬಾಗಿಲೆರೆಡೂ ದೊಡ್ಡದಾಗಿ ತೆರದಿತ್ತು. ಸಿದ್ಧೇಶ್ವರಿ ಗಡಿಬಿಡಿಯಿಂದ ಅಲ್ಲಿಂದ ಮುನ್ನಡೆದು ತಮ್ಮ ಕೋಣೆಗೆ ಬಂದು ಹಾಸಿಗೆಯಕಡೆ ನೋಡಿದರು. ಅಲ್ಲಿ ಕೊಂಚ ಜಾಗದಲ್ಲಿ ವಿಪಿನ ಪುಟ್ಟ ಇಬ್ಬರೂ ಮಲಗಿದ್ದರು. ಉಳಿದ ಜಾಗವೆಲ್ಲಾ ಬಾಯಾರಿದ ಬಯಲು ಭೂಮಿಯಂತೆ ಬಾಯಿಬಿಡುತ್ತಿತ್ತು. ತಮ್ಮ ಸ್ಥಳದಲ್ಲಿ ಎಂದಿನಂತೆಯೇ ಮುದುರಿಕೊಂಡು ಮಲಗಿದರು ಸಿದ್ಧೇಶ್ವರಿ. ಅವರ ಕಣ್ಣಿನಿಂದ ಉರುಳಿದ ಬಿಸಿ ಹನಿಗಳಿಂದ ತಲೆದಿಂಬು ಒದ್ದೆಯಾಗಿ ಹೋಗಿತ್ತು. ಮನೆ ಮಕ್ಕಳ ಊಟ ಉಪಚಾರವನ್ನು ಯಾವಾಗಲೂ ಅವರೇ ನೋಡಿಕೊಳ್ಳುತ್ತಿದ್ದರು. ಈ ವಿಷಯದಲ್ಲಿ ಮತ್ತೆ ಯಾರನ್ನೂ ನಂಬುತ್ತಿರಲಿಲ್ಲ. ಹುಡುಗರು ನೂರು ನೆವಹೇಳಿ ಕಡಿಮೆ ಊಟಮಾಡುವರು. ತಮಗಲ್ಲದೆ ಮತ್ತಾರಿಗೂ ಅದು ತಿಳಿಯುವುದಿಲ್ಲೆಂದು ಅವರ ದೃಢ ನಂಬಿಕೆ. ಅವರಿಲ್ಲದಿದ್ದಾಗ ಯಾರಾದರೂ ಅಕಸ್ಮಾತ್ ಊಟ ಮಾಡಿಬಿಟ್ಟರೆ, ಅವರನ್ನು ಕೂಗಿ, ಹೊಟ್ಟೆಯಮೇಲೆ ಕೈಯಾಡಿಸಿ ಅವರು ಸರಿಯಾಗಿ ಊಟಮಾಡಿಲ್ಲವೆಂದು ನೂರು ರೀತಿಯಿಂದ ತಿಳಿಯಹೇಳಿ, ಒಂದು ಲೋಟ ಹಾಲನ್ನು ಕುಡಿಸುತ್ತಿದ್ದರು. ಶೈಲಜಾ ಹುಡುಗರ ವಿರೋಧವಾಗಿ ಒಂದೊಂದು ಬಾರಿ ವಾದ ಹೂಡುತ್ತಿದ್ದಳು. ಒತ್ತಾಯದಿಂದ ಹೆಚ್ಚು ತಿನ್ನಿಸಿದರೆ ಮೈಗೆ ಕೆಡುಕೆನ್ನುತ್ತಿದ್ದಳು. ಆದರೆ ಅದೆಲ್ಲ ಏನೂ ಪ್ರಯೋಜನವಾಗುತ್ತಿರಲಿಲ್ಲ. ಸಿದ್ಧೇಶ್ವರಿಯ ಕಣ್ಣಿಗೆ ಹುಡುಗರೆಲ್ಲ ದಿನೇ ದಿನೇ ಬಾಡಿ ಹೋಗುತ್ತಿರುವರು ಎನಿಸುತ್ತಿತ್ತು. ಇದರಿಂದ ಅವರ ಮನಸ್ಸಿನ ಗಾಬರಿ, ಗಡಿಬಿಡಿಗೆ ಕೊನೆಯೇ ಇಲ್ಲ! ಸಿದ್ಧೇಶ್ವರಿಗೆ ಇದೆಲ್ಲ ನೆನಪಾಯಿತು. ಹಳ್ಳಿಯಲ್ಲಿ ಕನ್ಹಯ್ಯ ಸರಿಯಾಗಿ ಊಟಮಾಡದೆಯೇ ಮಲಗಿದ್ದಾನೆ–ಪಟಲ ಹೊಟ್ಟೆಗಿಲ್ಲದೆಯೇ ನಿದ್ರೆಹೋಗಿದ್ದಾನೆಂದು ಅವರ ದೃಢನಂಬಿಕೆ–ಪಾಪ! ಅವನನ್ನು

ಮಧ್ಯೆ ಎಚ್ಚರಿಸಿ ಅವನಿಗೆ ತಿಂಡಿ ತಿನ್ನಿಸುವವರೂ ಇಲ್ಲ-ರಾತ್ರಿಯೆಲ್ಲಾ ಒದ್ದಾಡುತ್ತಿರುತ್ತಾನೆ. ಕಲ್ಪನೆಯಲ್ಲಿ ಇದೆಲ್ಲಾ ಸ್ಪಷ್ಟವಾಗಿ ತೋರಿದಂತೆ ಹೃದಯ ಕೋಪ, ದುಃಖ ನೋವುಗಳಿಂದ ತುಂಬಿ ಬಂತು. ಪಕ್ಕದ ಕೋಣೆಯಲ್ಲಿ ಗಿರೀಶ ಸುಖವಾಗಿ ನಿದ್ರೆ ಹೋಗುತ್ತಿದ್ದರು. ರಾತ್ರಿ ಬಹಳ ವೇಳೆ ಕಳೆದುಹೋಗಿತ್ತು. ಸಿದ್ಧೇಶ್ವರಿಗೆ ತಡೆಯಲಾಗದೆ ಗಂಡನ ಕೋಣೆಗೆ ನಡೆದು ಬಂದರು; ಗಂಡನನ್ನು ಮೆಲ್ಲನೆ ಎಚ್ಚರಿಸಿ—"ಸರಿ-ಪಟಲನನ್ನೇನೋ ಶೈಲ ಕರೆದುಕೊಂಡು ಹೋಗುವುದು ಸರಿ-ಆದರೆ ಕನ್ಹಯ್ಯ ಅವಳ ಹೊಟ್ಟೆಯಲ್ಲಿ ಹುಟ್ಟಿದ ಮಗನಲ್ಲವಲ್ಲಾ-ಅವನ ಮೇಲೆ ಅವಳದೇನು ಹಕ್ಕು?" ಎಂದು ಕೇಳಿದರು.

"ಏನೂ ಇಲ್ಲ" ಎಂದರು ಗಿರೀಶ ನಿದ್ರೆಯ ಗುಂಗಿನಲ್ಲೇ.

ಸಿದ್ಧೇಶ್ವರಿ ಕೊಂಚ ಧೈರ್ಯ ಬಂದು ಮಂಚದ ಒಂದು ಪಕ್ಕಕ್ಕೆ ಕುಳಿತರು—"ನಾವೀಗ ಅವಳ ಮೇಲೆ ಮೊಕದ್ದಮೆ ಹೂಡಿದರೆ ಅವಳಿಗೆ ಶಿಕ್ಷೆಯಾಗುತ್ತಲ್ಲವೇ? ಶಿಕ್ಷೆಯಾಗುತ್ತದೋ ಇಲ್ಲವೋ ಹೇಳಿಬಿಡಿ"

ಗಿರೀಶ ಯಾವ ಅನುಮಾನವೂ ಇಲ್ಲದೆ "ಖಂಡಿತ ಆಗಿಯೇ ತೀರುತ್ತದೆ" ಎಂದರು.

ಸಿದ್ಧೇಶ್ವರಿಗೆ ಭರವಸೆ ಆನಂದಗಳಿಂದ ಕೊಂಚ ಉತ್ಸಾಹ ಬಂತು. ಮತ್ತೆ ಮಾತು ಮುಂದುವರಿಸಿದರು—"ಅದೇನೋ ಸರಿ-ಮತ್ತೆ ಪಟಲನ ವಿಚಾರ ಯೋಚಿಸಿ ನೋಡಿ. ನಾನೇ ಅವನನ್ನು ಲಾಲಿಸಿ ಪಾಲಿಸಿ ಬೆಳೆಸಿದ್ದು. ನಾನಿಲ್ಲದಿದ್ದರೆ ಅವನಿಗೆ ಇರುವುದೇ ಅಸಾಧ್ಯ - ನನ್ನನ್ನು ನೆನೆದು ನೆನೆದು ಕಾಯಿಲೆ ಬಂದುಬಿಡಬಹುದು ಅವನಿಗೆ ಎಂದು ವೈದ್ಯರನ್ನೊಪ್ಪಿಸಿದರೆ, ಹುಡುಗ ನನ್ನ ಬಳಿಯೇ ಇರಬೇಕೆಂದು ಅವರು ಹೇಳಲಾರರೇ? ಸರಿಹೋಯ್ತು! ಆಗಲೇ ಗೊರಕೆ ಹೊಡೆಯುತ್ತಿದ್ದೀರಲ್ಲಾ! ನನ್ನ ಮಾತು ಕೇಳಿಸಿತೋ ಇಲ್ಲವೋ?" ಎನ್ನುತ್ತಾ ಗಂಡನ ಕಾಲು ತಟ್ಟಿ ಎಚ್ಚರಿಸಿದರು.

"ಖಂಡಿತ ಇಲ್ಲ! ಖಂಡಿತ ಇಲ್ಲ!" ಎನ್ನುತ್ತಾ ಗಿರೀಶ ಎಚ್ಚರಗೊಂಡರು.

ಸಿದ್ಧೇಶ್ವರಿಗೆ ಕೋಪ ಬಂತು—"ಯಾಕಿಲ್ಲ? ತಾಯಿಯಾದಾಕ್ಷಣ ಮಗನನ್ನು ಕೊಂದುಬಿಡಬೇಕೇನು? ಮಹಾರಾಣಿ ವಿಕ್ಟೋರಿಯಳ ಆಜ್ಞೆ ಅಂತಹುದೇನೂ ಇಲ್ಲವಲ್ಲ! ನಾಳೆಯೇ ನಿಮ್ಮ ತಮ್ಮನ ಕೈಯಲ್ಲೊಂದು

ಲಾಯರ್ ನೋಟೀಸ್ ಕಳಿಸಿಬಿಡಲೇನು?" ಎಂದರು. ಗಂಡನ ಉತ್ತರಕ್ಕಾಗಿ ಕೊಂಚಕಾಲ ಕಾದು ನಿಂತರು. ಗೊರಕೆಯ ಸದ್ದಿನ ಹೊರತು ಯಾವ ಉತ್ತರವೂ ಸಿಗದಿರಲು ಬೆಂಕಿಯಾಗಿ ಅಲ್ಲಿಂದ ಹೊರಟು ಹೋದರು.

ರಾತ್ರಿಯೆಲ್ಲಾ ಅವರಿಗೆ ಕೊಂಚವೂ ನಿದ್ರೆಯಿಲ್ಲ. ಯಾವಾಗ ಬೆಳಗಾದೀತು, ಹರೀಶನಿಂದ ಯಾವಾಗ ಕಾಗದ ಬರೆಸಿ ಕಳಿಸಿಯೇನೋ–ಕಾಗದ ಕಂಡೊಡನೆ ಅವರಿಬ್ಬರೂ ಬೆದರಿ, ತತ್ತರಿಸಿ ಕನ್ಹಯ್ಯ, ಪಟಲರಿಬ್ಬರನ್ನೂ ಇಲ್ಲಿಗೆ ಕರೆತಂದು ಒಪ್ಪಿಸಿಬಿಡುವರೆಂಬ ಆಸೆಯ ಮುಗಿಲ ಹೂಗಳನ್ನಾರಿಸುತ್ತಾ ರಾತ್ರಿಯೆಲ್ಲಾ ಎಚ್ಚರಿದಿಂದಿದ್ದರು.

ಇನ್ನೂ ಬೆಳಕು ಹರಿಯುವುದರಲ್ಲೇ ಹರೀಶನ ಕೋಣೆಯ ಬಾಗಿಲನ್ನು ತಟ್ಟಿ ಅವನನ್ನೆಬ್ಬಿಸಿದರು. ಹರೀಶ ಗಾಬರಿಯಿಂದ ಬಾಗಿಲು ತೆಗೆದು ಆಶ್ಚರ್ಯದಿಂದ ಅವರ ಕಡೆಗೇ ನೋಡುತ್ತಾ ನಿಂತ.

"ಸುಮ್ಮನೆ ಕಾಲಕಳೆದು ಹೋದರೆ ಪ್ರಯೋಜನವಿಲ್ಲ. ಈಗಲೇ ರಮೇಶನಿಗೊಂದು ಲಾಯರ್ ನೋಟೀಸ್ ಬರೆದು ಆಳಿನೊಂದಿಗೆ ಕಳಿಸಿ ಬಿಡಬೇಕು. ಚೆನ್ನಾಗಿ ಜೋರಾಗಿ ಬರೆಯಬೇಕು–ಇನ್ನು ಇಪ್ಪತ್ತನಾಲ್ಕು ಗಂಟೆಯೊಳಗಾಗಿ ಉತ್ತರ ಕೊಡದಿದ್ದರೆ ದಾವಾ ಹಾಕುತ್ತೇವೆಂದು–ಹಾಂ–ಗೊತ್ತಾಯಿತೋ?" ಎಂದರು ಸಿದ್ಧೇಶ್ವರಿ ಒಂದೇ ಒಸಿರಿನಲ್ಲಿ.

ಹರೀಶನಿಗೆ ಒತ್ತಾಯಪಡಿಸಬೇಕಾದ ಆವಶ್ಯಕತೆಯೇ ಇಲ್ಲ, ಕೂಡಲೇ ಒಪ್ಪಿಬಿಟ್ಟ. "ಏನು ಸಮಾಚಾರ, ಅತ್ತಿಗೆ? ಕೂತುಕೊಳ್ಳಿ – ಏನೇನು ಹೊತ್ತುಕೊಂಡು ಹೋಗಿದ್ದಾರೆ. ದಾವಾ ಕೊಂಚ ದೊಡ್ಡದಾಗಿರಬೇಕು."

ಸಿದ್ಧೇಶ್ವರಿ ಕುರ್ಚಿಯ ಮೇಲೆ ಕುಳಿತು ತಮ್ಮ ದಾವೆಯನ್ನು ಪೂರ್ಣವಾಗಿ ವಿವರಿಸಿದರು. ಆದುವರೆಗೂ ಆನಂದದಿಂದ ಅರಳಿದ್ದ ಹರೀಶನ ಮುಖ ಮತ್ತೆ ಬಾಡಿತು.

"ಅತ್ತಿಗೆ, ನಿಮಗೇನು ಹುಚ್ಚು ಹಿಡಿಯಿತೇನು? ಏನೋ ದೊಡ್ಡ ವಿಷಯ ಅಂತಿದ್ದೆ ನಾನು. ಅವರು ತಮ್ಮ ಮಕ್ಕಳನ್ನು ಕರೆದುಕೊಂಡು ಹೋದರೆ ನೀವೇನು ಮಾಡಲು ಸಾಧ್ಯ?" ಎಂದ.

ಸಿದ್ಧೇಶ್ವರಿಗೆ ಸಮಾಧಾನವಾಗಲಿಲ್ಲ. "ನಿಮ್ಮ ಅಣ್ಣ ಹೇಳಿದ್ದಾರೆ–ಮೊಕದ್ದಮೆ ಹಾಕಿದರೆ ಅವರಿಗೆ ಶಿಕ್ಷೆಯಾಗುವುದೆಂದು–" ಎಂದು.

"ಅಣ್ಣ ಈ ಮಾತು ಹೇಳಿರಲಾರರು–ಅಂದಿದ್ದರೂ ತಮಾಷೆಗೆ ಅಂದಿರಬೇಕು ಅಷ್ಟೆ."

ಸಿದ್ಧೇಶ್ವರಿ ರೇಗಿದರು—"ನನಗಿಷ್ಟು ವಯಸ್ಸಾಯಿತು. ಯಾವುದು ತಮಾಷೆ-ಯಾವುದಲ್ಲವೆಂದು ನನಗೆ ತಿಳಿಯದೇನು? ಆ ಮಕ್ಕಳು ನನ್ನೊಂದಿಗೆ ಇರಕೂಡದೆಂದೇ ನಿಮ್ಮಿಷ್ಟವಾದರೆ ನೇರವಾಗಿ ತಿಳಿಸಿಬಿಡ ಕೂಡದೇನು?"

ಹರೀಶನಿಗೆ ನಾಚಿಕೆಯಾಯಿತು. ಈ ರೀತಿಯ ದಾವಾ ಮಾಡಲು ಸಾಧ್ಯವಿಲ್ಲ, ನ್ಯಾಯಾಲಯ ಒಪ್ಪುವುದಿಲ್ಲ, ಬೇರೆ ಯಾವುದಾದರೂ ಮೊಕದ್ದಮೆ ಹಾಕಿ ಅವರಿಗೆ ಶಿಕ್ಷೆ ಮಾಡಿಸೋಣ. ಅದೇ ಈಗ ಎಲ್ಲಕ್ಕಿಂತಲೂ ಮೇಲು ಎಂದು ಅವರನ್ನೊಪ್ಪಿಸಲು ಯತ್ನಿಸಿದ.

ಆದರೆ ಸಿದ್ಧೇಶ್ವರಿ ಕೋಪದಿಂದ ಎದ್ದು ನಿಂತು "ನೀವು ನಿಮ್ಮ ದೊಡ್ಡ ಸ್ತ್ರಿಕೆ ನಿಮ್ಮ ಬಳಿಯೇ ಇಟ್ಟುಕೊಳ್ಳಿ. ನನ್ನ ಆಯುಸ್ಸಾಗಲೇ ಕಳೆಯುತ್ತ ಬಂತು. ಈಗ ಇದಕ್ಕೋಸ್ಕರ ಸುಳ್ಳು ಸುಳ್ಳು ದಾವಾಹಾಕಲಾರೆ. ಪರ ಲೋಕದಲ್ಲಿ ನನ್ನ ಪರವಾಗಿ ನೀವೇನೂ ವಾದಮಾಡಲು ಬರುವುದಿಲ್ಲ. ನೀವು ಬರೆಯದಿದ್ದರೆ ಬೇಡ. ಮಣಿಯನ್ನು ಕಳಿಸಿ ಪಕ್ಕದ ಬೀದಿಯ ನಾಗೇನ ಬಾಬುವಿನಿಂದ ಬರೆಸಿ ತರಿಸುತ್ತೇನೆ" ಎನ್ನುತ್ತಾ ಅಲ್ಲಿಂದ ಹೊರಟು ಹೋದರು.

ಮರುದಿನ ಬೆಳಿಗ್ಗೆಯೇ ಯಾವುದೋ ಖರ್ಚಿನ ವಿಷಯವಾಗಿ ಸಿದ್ಧೇಶ್ವರಿ ಮನೆವಾರ್ತೆಯ ಗುಮಾಸ್ತೆ ಗಣೇಶ ಚಕ್ರವರ್ತಿಯೊಂದಿಗೆ ಜಗಳವಾಡುತ್ತಿದ್ದರು. ಹನ್ನೆರಡು ಚೌಕದ [ಒಂದು ಚೌಕವೆಂದರೆ ನಾಲ್ಕು ರೂಪಾಯಿ] ಜತೆಗೆ ಇನ್ನೆರಡು ರೂಪಾಯಿ ಖರ್ಚಾದುದರಿಂದ ಒಟ್ಟು ಐವತ್ತು ರೂಪಾಯಿ ಆಗಿದೆಯೆಂದು ಅವರಿಗೆ ಲೆಕ್ಕ ಒಪ್ಪಿಸಲು ಅವನೆಷ್ಟೋ ಯತ್ನಿಸಿದ. ಸಿದ್ಧೇಶ್ವರಿ ಈ ಕೆಲಸವನ್ನು ಹೊಸದಾಗಿ ವಹಿಸಿಕೊಂಡಿದ್ದರು. ತಮಗೇನೂ ಗೊತ್ತಿಲ್ಲವೆಂದುಕೊಂಡು ಎಲ್ಲರೂ ತಮಗೆ ಮೋಸಮಾಡುವರೆಂದು ಅವರ ಸಂದೇಹ. ಹಾಗೆಯೇ ಗಣೇಶನೂ ಮೋಸಮಾಡುತ್ತಿದ್ದಾನೆಂದು ದೃಢವಾಗಿ ತಿಳಿದು ಜಗಳವಾಡುತ್ತಿದ್ದರು.

"ಗಣೇಶ, ಐವತ್ತು ರೂಪಾಯಿಯೆಂದರೆ ಕೊಂಚ ಲಂಚವಲ್ಲ!—ಒಂದು ಸೆರಗು ತುಂಬ ಹಣ!—ನಾನು ಓದಿಲ್ಲ, ಬರೆದಿಲ್ಲ-ಆದ್ದರಿಂದ ಏನೂ ತಿಳಿಯದವಳೆಂದುಕೊಂಡಿದ್ದಿಯೇನು! ಹನ್ನೆರಡು ಚೌಕದ ಜತೆಗೆ ಎರಡು ರೂಪಾಯಿ ಖರ್ಚುಮಾಡಿದರೆ ಒಟ್ಟು ಐವತ್ತು ರೂಪಾಯಿ ಆಗಿಹೋಯಿ

ತೇನು? ಇನ್ನೇನೂ ಉಳಿಯಲೇ ಇಲ್ಲವೇ? ನಾನೇನು ಅಷ್ಟೊಂದು ಮೂರ್ಖಳೆಂದುಕೊಂಡಿರುವೆಯೇನು?"

ಗಣೇಶ ವ್ಯಾಕುಲನಾದ. "ಇಲ್ಲ, ಅಮ್ಮ-ನೀಲಳನ್ನು ಕರೆದರೆ—"

"ನೀಲಳನ್ನು ಕರೆದು ಲೆಕ್ಕಹೇಳಬೇಕೇನೋ? ನನಗಿಂತ ಹೆಚ್ಚು ಅವಳಿಗೇನು ಗೊತ್ತು? ಇಲ್ಲ, ಗಣೇಶ-ಇದೆಲ್ಲ ಸರಿಯಿಲ್ಲ. ನಾನೀಗಲೇ ಹೇಳಿಬಿಡುತ್ತೇನೆ. ಶೈಲ ಇಲ್ಲವೆಂದು ನಿಮಗಿಷ್ಟ ಬಂದಂತೆ ಲೆಕ್ಕ ಹೇಳಿದರೆ ಸಾಗುವುದಿಲ್ಲ. ಅವಳು ಹೋಗದಿದ್ದರೆ-ನನಗೆ ಈ ಫಜೀತಿಯೇ ಇರುತ್ತಿರಲಿಲ್ಲ. ಆ ಸುಟ್ಟ ಮೋರೆಯುವಳನ್ನು ಹತ್ತುವರ್ಷದವಳಾಗಿದ್ದಾಗ ಸೊಸೆಯಾಗಿ ಮನೆ ತುಂಬಿಸಿಕೊಂಡು ಲಾಲಿಸಿ ಪಾಲಿಸಿ ಬೆಳೆಸಿದೆ. ಈಗ ಅವಳೇ ಜೋರು ಮಾಡಿಕೊಂಡು ಮನೆಯ ಮಕ್ಕಳಿಬರನ್ನೂ ಕರೆದುಕೊಂಡು ಹೋಗಿಬಿಟ್ಟಳು. ಹೋಗಲಿಬಿಡು-ನಾನೂ ನೋಡಿಕೊಳ್ಳುತ್ತೇನೆ. ಯಾವಾಗಲಾದರೂ ಕನ್ಹಯ್ಯ, ಪಟಲರಿಗೆ ವೈ ಚೆನ್ನಾಗಿಲ್ಲವೆಂದು ಗೊತ್ತಾಗಲಿ, ಆ ಮೇಲೆ ಅವರನ್ನು ಹೇಗೆ ಇಟ್ಟುಕೊಳ್ಳುವಳೋ ನೋಡಿಯೇ ಬಿಡುತ್ತೇನೆ. ನೀನೀಗ ಹೋಗು-ಮಧ್ಯಾಹ್ನ ಬಂದು, ಲೆಕ್ಕವನ್ನೆಲ್ಲಾ ಸರಿಯಾಗಿ ನೆನಪಿಗೆ ತಂದುಕೋ. ಅಷ್ಟು ಹಣ ಏನಾಯಿತು, ಹೇಗೆ ಖರ್ಚಾಯಿತು, ಏನು ಮಾಡಿದೆಯೆಂಬುದನ್ನು ತಿಳಿಸಿ ಹೋಗು" ಎಂದು ಗಣೇಶನನ್ನು ಕಳಿಸಿ ಬಿಟ್ಟರು.

ಪಾಪ! ಅವನು ದಿಕ್ಕುಗಾಣದೆ ಹೊರಗೆ ಹೊರಟುಹೋದ.

ಅಲ್ಲೇ ಕಾದುಕೊಂಡಿದ್ದ ನಡುಕಲಸೊಸೆ ಮೆಲ್ಲನೆ ಬಂದಳು "ಅಕ್ಕ-ನಿನಗೆ ಹೇಗೆ ಹೇಳುವುದೋ ಗೊತ್ತಿಲ್ಲ. ನಾನೂ ಸಂಸಾರ ನಿರ್ವಹಿಸಿದ್ದೇನೆ. ಪ್ರತಿ ಕಾಸಿಗೂ ಲೆಕ್ಕವನ್ನಿಟ್ಟಿದ್ದೇನೆ. ಕಿರಿಯ ಸೊಸೆ ಇಲ್ಲವೆಂದು ನೀನಿಷ್ಟು ಸಂಕಟಪಡುತ್ತಿರುವುದನ್ನು ನಾನು ನೋಡಿಕೊಂಡು ಸುಮ್ಮನಿರ ಲಾರೆ, ಅಕ್ಕ-ನನ್ನನ್ನು ಮೋಸಗೊಳಿಸಿ ಸುಳ್ಳು ಹೇಳುವಷ್ಟು ಧೈರ್ಯವೂ ಯಾರಿಗೂ ಇಲ್ಲ" ಎಂದಳು.

"ಅದು ಸರಿ ತಂಗಿ. ಈ ಕಾಯಿಲೆಯಲ್ಲೂ ಇಷ್ಟೊಂದು ಕಷ್ಟ ಬೀಳುವುದು ನನಗೂ ಆಗುವುದಿಲ್ಲ, ಶೈಲ ಇದ್ದಳು. ಎಲ್ಲಿಂದ ಎಷ್ಟು ರೂಪಾಯಿ ಬಂತು, ಎಷ್ಟು ಖರ್ಚು ಎಷ್ಟು ಹಣ ಬ್ಯಾಂಕಿಗೆ ಕಳಿಸಬೇಕು-ಇದೆಲ್ಲವನ್ನೂ ಅವಳೇ ನೋಡಿಕೊಳ್ಳುತ್ತಿದ್ದಳು. ಅದೆಲ್ಲಾ ನನ್ನಿಂದೆಲ್ಲಿ ಸಾಧ್ಯ?—ಅದೂ ಸರಿಯೇ, ತಂಗಿ. ನಾಳೆಯಿಂದ ನೀನೇ ಎಲ್ಲವನ್ನೂ

ನೋಡಿಕೊ" ಎಂದರು. ಆದರೆ ಬೀಗದ ಕೈ ಮಾತ್ರ ತಮ್ಮ ಸೆರಗಿಗೇ ಕಟ್ಟಿಕೊಂಡರು.

ದಿನಗಳು ಕಳೆದುವು. ನಯನತಾರಾ ಸಾವಿರ ತಂತ್ರ ಹೂಡಿದರೂ ಪೆಟ್ಟಿಗೆಯ ಬೀಗದಕೈ ಮಾತ್ರ ದಕ್ಕಲಿಲ್ಲ. ಅವಳೇನೋ ಬಹಳ ಚತುರೆ, ಚಾಲೂಕು-ಬಹಳ ದೂರದೃಷ್ಟಿಯಿಂದ ತಂತ್ರ ನಡೆಸುವಳು-ಆದರೂ ಈ ವಿಷಯದಲ್ಲೊಂದು ದೊಡ್ಡ ತಪ್ಪು ಮಾಡಿದ್ದಳು. ತನ್ನ ಸ್ವಾರ್ಥಕ್ಕಾಗಿ ನಂಬಿಕೆಯ ನಿಸ್ಪೃಹ ಹೆಂಗಸಿನಲ್ಲಿ ಸಂದೇಹದ ಸಸಿ ನೆಟ್ಟಳು. ಆ ಸಂದೇಹದ ನೆರಳು ತನ್ನ ಮೇಲೆ ಬೀಳದಂತೆ ತಪ್ಪಿಸಿಕೊಳ್ಳಲು ಅವಳಿಂದ ಆಗಲಿಲ್ಲ. ಸಿದ್ಧೇಶ್ವರಿ ಕಿರಿಯಸೊಸೆಯಲ್ಲಿದ್ದ ವಿಶ್ವಾಸ ಕಳೆದು ಕೊಂಡಂತೆ, ನಯನ ತಾರೆಯಲ್ಲೂ ಸಂದೇಹಪಟ್ಟಳು

೬

ಕೊರತೆ ಎಷ್ಟೇ ಹಿರಿದಾಗಿರಲಿ, ಅನಿರೀಕ್ಷಿತವಾಗಿರಲಿ ಇಲ್ಲವೇ ನಮ್ಮ ಇಚ್ಛೆಗೆದುರಾಗಿರಲಿ, ಬಹಳ ಕಾಲ ಅದಕ್ಕಾಗಿ ಯಾರೂ ಕೂತಿರುವುದಿಲ್ಲ. ಸಿದ್ಧೇಶ್ವರಿಗೆ ಹಾಸಿಗೆ ಬರಿದು ಬರಿದು ಎಂಬ ಭಾವನೆ ಕೊಂಚ ಕೊಂಚವಾಗಿ ಮರೆಯುತ್ತ ಬಂತು. ಶೈಲಜೆಯ ಕೊಠಡಿಯ ಕಡೆಗೆ ಕಾಲಿಡಲೂ ಅವರಿಂದಾಗುತ್ತಿರಲಿಲ್ಲ-ಆದರೆ ಈಗ ಆಕಡೆ ಉದ್ವೇಗವಿಲ್ಲದೆ ಹೋಗುತ್ತಿದ್ದರು. ಅವಳ ನೆನಪೂ ಬರುತ್ತಿರಲಿಲ್ಲ. ಕಷ್ಟಯ್ಯ, ಪಟಲರ ಸುದ್ದಿ ತಿಳಿಯಲು ಮೊದಲು ನೂರು ರೀತಿಯಿಂದ ಯತ್ನಿಸುತ್ತಿದ್ದರು, ಒದ್ದಾಡು ತ್ತಿದ್ದರು. ಆದರೆ ಈಗ ಅದೆಲ್ಲ ಅರ್ಥಕ್ಕಿಳಿದು ಹೋಗಿತ್ತು-ಹೀಗೆಯೇ ಒಂದು ವರ್ಷ ಕಳೆಯಿತು.

ಅಂದೊಂದು ಭೀಕರ ಸುದ್ದಿ ಸಿದ್ಧೇಶ್ವರಿಯ ಕಿವಿಯಮೇಲೆ ಬಿತ್ತು ಹಳ್ಳಿಯ ಮನೆಮಠ ಜಮೀನಿನ ಸಂಬಂಧದಲ್ಲಿ ಈಗ ಆರು ತಿಂಗಳಿಂದ ರಮೇಶನ ಮೇಲೆ ದಾವಾ ನಡೆಯುತ್ತಿದೆಯೆಂದೂ ಹರೀಶನೇ ಅದನ್ನು ಸ್ವತ ನಡೆಸುತ್ತಿದ್ದಾನೆಂದೂ ತಿಳಿಯಿತು. ಈ ಸುದ್ದಿ ಕೇಳಿ ಸಿದ್ಧೇಶ್ವರಿ ಗಾಬ ಯಿಂದ ತತ್ತರಿಸಿದರು.

ತಮ್ಮ ಕುತೂಹಲವನ್ನು ಹಿಂಗಿಸಲು ಸಾಕಷ್ಟು ಸಮಾಚಾ ಗಂಡನಿಂದ ತಿಳಿಯುವುದಸಾಧ್ಯವೆಂದು ಸಂಜೆ ಹರೀಶನನ್ನೇ ಕೇಳಿದಳು.

"ನಿಮ್ಮ ಅಣ್ಣನೊಂದಿಗೆ ರಮೇಶ ಮೊಕದ್ದಮೆ ನಡೆಸುತ್ತಿರುವನಂತೆ, ನಿಜವೇ?"

ಹರೀಶ ದರ್ಪದ ನಗೆಯೊಂದಿಗೆ "ಅಕ್ಷರಶಃ ನಿಜ, ಅತ್ತಿಗೆ!" ಎಂದ.

ಸಿದ್ಧೇಶ್ವರಿಯ ಮುಖ ಕಪ್ಪಿಟ್ಟಿತು— "ನನಗೇನೂ ನಂಬಿಕೆಯಿಲ್ಲ-ಸೂರ್ಯಚಂದ್ರರೀನ್ನೂ ಬೆಳಗುತ್ತಾರೆ-"

ನಯನತಾರಾ ಮಂಚದ ಒಂದು ಪಕ್ಕಕ್ಕೆ ಕುಳಿತು ಕಸೂತಿ ಹಾಕುತ್ತಿದ್ದವಳು ಮೃದುವಾಗಿ "ಬೆಳಗದೇ ಏನಕ್ಕ?-ಇದೇ ಮೈದುನನಿಗೇ ನೀನು ಸಾವಿರ ಸಾವಿರ ರೂಪಾಯಿ ಕೊಡುತ್ತಿದ್ದೆ-ಅದೆಲ್ಲಾ ಈಗ ಕಾಣುತ್ತಿದೆ" ಎಂದಳು.

ಸಿದ್ಧೇಶ್ವರಿ ಆಶ್ಚರ್ಯದಿಂದ ಕ್ಷಣಕಾಲ ಸುಮ್ಮನಿದ್ದು "ದಾವಾ ಯಾಕೆ?" ಎಂದು ಕೇಳಿದರು.

"ಯಾಕೆ? ದಾವಾ ಹಾಕದೆ ಬೇರೆ ದಾರಿಯೇ ಇರಲಿಲ್ಲ, ನಮಗೆ ಹಳ್ಳಿಯ ಆಸ್ತಿಯೇ ನಿಜವಾದ ಆಸ್ತಿ-ಸ್ಥಿರ ಸಂಪತ್ತು. ನಮ್ಮ ಮಕ್ಕಳು-ಹರಿ, ಮಣಿ, ವಿಪಿನ, ಪುಟ್ಟನ್ ಇವರಿಗೆ ಕೊಂಚವಾದರೂ, ಸೂಜಿ ಮೊನೆಯಷ್ಟು ಜಮೀನು ಉಳಿಯದಿರಬಹುದು - ಹಳ್ಳಿಯ ಮನೆಗೆ ಕಾಲಿಡಲೂ ಅವರಿಂದಾಗದಿರಬಹುದು-ಅದಕ್ಕೋಸ್ಕರ-ಅತ್ತಿಗೆ, ಈಗ ಅವನು ಎಲ್ಲವನ್ನೂ ಆಕ್ರಮಿಸಿ ಬಿಟ್ಟಿದ್ದಾನೆ. ಅಲ್ಲಿಯ ವರಮಾನವೆಲ್ಲಾ ಅವನ ಹೊಟ್ಟೆಗೆ! ಒಂದು ಹುಡಿಕಾಸನ್ನೂ ನಮಗೆ ಕೊಡುತ್ತಿಲ್ಲ, ಅದನ್ನೆಲ್ಲಾ ದುಡಿದು ರೂಢಿಸಿದ್ದು ಅಣ್ಣನೇ ಆದರೂ, ಅಣ್ಣನ ಕಾಗದಕ್ಕೊಂದು ಉತ್ತರಕೂಡ ಕೊಡದಂತಹ ದ್ರೋಹಿ, ಅವನು. ಆ ಮನೆಯಿಂದ ಅವನ ಕಾಲು ಕೀಳಿಸದಿದ್ದರೆ ನಾನು ಹರೀಶನೇ?

ಸಿದ್ಧೇಶ್ವರಿ ಮತ್ತೆ ಕೊಂಚಕಾಲ ಸುಮ್ಮನಿದ್ದು—"ಸರಿ, ಪಾಪ! ಅವರೂ ಮಕ್ಕಳುಮರಿ ಕಟ್ಟಿಕೊಂಡು ಎಲ್ಲಿಗೆ ಹೋಗಬೇಕು?" ಎಂದರು.

"ಅದು ಅವರ ಹಣೆಬರಹ-ನಮಗೇನು ಅದೆಲ್ಲಾ ಕಟ್ಟಿಕೊಂಡು" ಎಂದ ಹರೀಶ.

"ನಿಮ್ಮಣ್ಣ ಏನೆಂದರು?"

"ಅಣ್ಣ ಕೊಂಚ ಈ ಕಡೆಯೆಲ್ಲಾ ಗಮನ ಕೊಟ್ಟಿದ್ದರೆ ಇಷ್ಟೆಲ್ಲಾ ತೊಂದರೆಯೇ ಇರುತ್ತಿರಲಿಲ್ಲ. ರಮೇಶ ಅವರ ಆಸ್ತಿಯನ್ನೇ ನುಂಗಿ, ಅವರ ಹಣದಿಂದಲೇ ಅವರ ಮೇಲೆಯೇ ಮೊಕದ್ದಮೆ ನಡೆಸುತ್ತಿದ್ದಾನೆಂದು ಕಣ್ಣಲ್ಲಿ

ಕಣ್ಣಿಟ್ಟು ತೋರಿಸಿದರೂ ಅವರದನ್ನೊಪ್ಪಲಿಲ್ಲ. ರಮೇಶ ಅವರನ್ನೇ ಹೊಡೆದು ಬಿಡಬೇಕೆಂದಿದ್ದ-ಬಹಳ ಕಷ್ಟದಿಂದ ಉಳಿಸಿದ್ದಾಯಿತು."

ನಯನತಾರಾ ಬಿನ್ನಾಣದಿಂದ "ಅದೆಲ್ಲಾ ಸರಿ-ಕಿರಿ ಮೈದುನನೇನೋ ತಪ್ಪುಮಾಡಿರಬಹುದು. ಆದರೆ ಆ ಕಿರಿಸೊಸೆ ಹೇಗೆ ಇದಕ್ಕೊಪ್ಪಿದಳೋ ನನಗೆ ಅರ್ಥವೇ ಆಗುವುದಿಲ್ಲ. ನಾವು ಕೆಟ್ಟವರಿರಬಹುದು, ದುಷ್ಟರಿರ ಬಹುದು-ಆದರೆ ಅಕ್ಕ, ಹಿರಿಯ ಮೈದುನ ಹಾಗಲ್ಲವೆಂಬುದು ಅವಳಿಗೆ ತಿಳಿಯದೇ?-ಅವರನ್ನು ಜೈಲಿಗೆ ಕಳುಹಿಸಿ ಅವಳಿಗೆ ಯಾವ ಸುಖ ತಾನೇ ಬಂದೀತೋ?" ಎಂದಳು.

ಸಿದ್ಧೇಶ್ವರಿಯ ಮೈಯೆಲ್ಲಾ ನಡಗಿತು. ಒಂದು ಮಾತನ್ನೂ ಆಡದೆ ಅಲ್ಲಿಂದ ಹೊರಬಿದ್ದರು.

ಗಂಡನ ಕೋಣೆಗೆ ನೇರವಾಗಿ ಅಲ್ಲಿಂದ ಬಂದಾಗ ಗಿರೀಶ ಯಾವುದೋ ಕಾಗದ ಓದುತ್ತಿದ್ದರು. ತಲೆಯೆತ್ತಿ ಹೆಂಡತಿಯ ಕಡೆ ನೋಡಿದೊಡನೆಯೇ ಅವಳ ಮುಖ ಎಂದಿಗಿಂತ ಹೆಚ್ಚು ಸಪ್ಪಗಿದೆಯೆಂಬುದು ಅವರ ಕಣ್ಣಿಗೂ ಬಿತ್ತು. ಕಾಗದ ಆಕಡೆಗಿಟ್ಟು "ಈವತ್ತು ಜ್ವರ ಬಂದಿತ್ತೇ?" ಎಂದು ಕೇಳಿದರು.

ಸಿದ್ಧೇಶ್ವರಿ ನೊಂದ ದನಿಯಲ್ಲಿ "ಸದ್ಯ-ಈಗಲಾದರೂ ಕೇಳಿದಿರಲ್ಲಾ-ಅದೇ ಸಂತೋಷ!" ಎಂದರು.

ಗಿರೀಶ ಕೊಂಚ ಮೃದುವಾಗಿ "ಸರಿಹೋಯ್ತು! ಕೇಳವೇ ಏನು" ಮೊನ್ನೆ ತಾನೇ ಮಣಿಯನ್ನು ಕರೆದು ಅಮ್ಮನಿಗೆ ಔಷಧ ಪಥ್ಯ ಸರಿಯಾಗಿ ಕೊಡುತ್ತಿರುವೆಯೇನೋ ಎಂದು ಕೇಳಿದೆ. ಆದರೆ ಈಗಿನ ಹುಡುಗರು ತಂದೆ ತಾಯಿಗಳ ಮಾತನ್ನೇ ಕೇಳುವುದಿಲ್ಲ!" ಎಂದರು.

ಸಿದ್ಧೇಶ್ವರಿಗೆ ಕೋಪ ಬಂತು—"ಈ ವಯಸ್ಸಿನಲ್ಲೂ ಸುಳ್ಳೇಕೆ ಹೇಳು ತ್ತೀರಿ? ಮಣಿ ತನ್ನ ಚಿಕ್ಕಮ್ಮನ ಜತೆಯಲ್ಲಿ ಅಲಹಾಬಾದಿಗೆ ಹೋಗಿ ಆಗಲೇ ಒಂದು ತಿಂಗಳಾಗುತ್ತಾ ಬಂತು. ನೀವು ಮೊನ್ನೆ ಅವನನ್ನು ಕೇಳಿದಿರಿ ಅಲ್ಲವೇ!-ಎಂದೂ ಕೇಳದವರು ಈಗೇಕೆ ಕೇಳುವಿರಿ? ಹೋಗಲಿ ಬಿಡಿ ನಾನು ಬಂದುದು ಅದಕ್ಕಲ್ಲ-ನಾನು ಬಂದುದು ಅದೇನೋ ಮೊಕ ದ್ದಮೆಯಂತಲ್ಲಾ ಅದೇನೆಂದು ಕೇಳಲು-ದಾವಾ ಯಾಕೆ?-"

ಗಿರೀಶ ಕೋಪದಿಂದ ತಿರುಗಿ ಬಿದ್ದರು. "ಅವನು ಕಳ್ಳ! ಶುದ್ಧ ದ್ರೋಹಿ-ನೀಚ! ಕಂಗಾಲನಾಗಿ ಹೋಗಿದ್ದಾನೆ! ಮನೆ ಮಠವೆಲ್ಲಾ

ಹಾಳುಗೆಡವಿದ್ದಾನೆ! ಅವನನ್ನು ಕಿತ್ತೊಗೆದ ಹೊರತು ನಮಗೇನೂ ಉಳಿಯುವಂತೆಯೇ ಇಲ್ಲ!-ಎಲ್ಲಾ ಹಾಳುಮಾಡಿ ಬಿಟ್ಟಿದ್ದಾನೆ-"

"ಸರಿ-ಅದೆಲ್ಲಾ ಮಾಡಿದ್ದಾನೆ-ಆದರೆ ದಾವಾ ನಡೆಸಲು ಸುಮ್ಮನೆ ಆಗಿಹೋದೀತೇನು ?-ಹಣ ಬೇಡವೇ ? ಅವನಿಗೆ ಹಣವೆಲ್ಲಿಂದ ಬಂತು ?" ಎಂದರು ಸಿದ್ಧೇಶ್ವರಿ.

ಹರೀಶ ತನ್ನ ಕೊಠಡಿಯಿಂದ ಕೆಳಕ್ಕಿಳಿದು ಹೋಗುತ್ತಿದ್ದವನು ಅಣ್ಣನ ಮಾತಿನ ರಭಸ ಕೇಳಿ ಕೋಣೆಯೊಳಕ್ಕೆ ಬಂದ; ಸಿದ್ಧೇಶ್ವರಿಯ ಪ್ರಶ್ನೆಗೆ ಅವನೇ ಉತ್ತರಕೊಟ್ಟ.

"ಹಣದ ವಿಷಯ ಅವಳೀಗ ತಾನೇ ಹೇಳಲಿಲ್ಲವೇ, ಅತ್ತಿಗೆ-ರೇಷ್ಮೆ ವ್ಯಾಪಾರಕ್ಕೆಂದು ಅಣ್ಣನ ಹತ್ತಿರ ನಾಲ್ಕು ಸಾವಿರ ರೂಪಾಯಿ ತೆಗೆದುಕೊಂಡಿದ್ದ, ಅದು ಹತ್ತಿರದಲ್ಲೇ ಇದೆ. ಇದೂ ಅಲ್ಲದೆ ಕಿರಿಸೊಸೆ ಇದುವರೆಗೂ ಮನೆಯ ಹಣವನ್ನೆಲ್ಲಾ ಹತ್ತಿರವೇ ಇಟ್ಟುಕೊಂಡಿದ್ದಳು. ಇನ್ನೇನು -ನೀವೇ ಯೋಚಿಸಿ ಅತ್ತಿಗೆ."

ಗಿರೀಶ ಮತ್ತೆ ಜೋರಾಗಿ ಕೂಗಲಾರಂಭಿಸಿದರು—"ನನ್ನ ಎಲ್ಲವನ್ನೂ ದೋಚಿಕೊಂಡು ಹೋದ-ಏನಾದರೂ ಬಾಕಿ ಬಿಟ್ಟಿದ್ದಾನೆಯೇ-ಹರೀಶ! ಈಗ ಅವನು ತಲೆಕೆಡಿಸಿಕೊಂಡು ವಿವೇಚನೆಯಿಲ್ಲದ ಹುಚ್ಚನಾಗಿದ್ದಾನೆ. ಶುಕ್ರವಾರದಂದು ಕೋರ್ಟಿನ ಹತ್ತಿರ ಬಂದು ಮನೆ ರಿಪೇರಿಮಾಡಿಸಬೇಕು-ಐನೂರು ರೂಪಾಯಿ ಕೊಡೆಂದ."

ಹರೀಶ ಆಶ್ಚರ್ಯದಿಂದ "ಇದೇನಣ್ಣ ? ಅಷ್ಟೊಂದು ಧೈರ್ಯ ಬಂತೇ ಅವನಿಗೆ ?" ಎಂದ.

"ಧೈರ್ಯಕ್ಕೇನು ಕಡಿಮೆ ? ಒಂದೇ ಸಮನಾಗಿ ಲೆಕ್ಕ ಒಪ್ಪಿಸಿದ. ಇದು ರಿಪೇರಿಯಾಗಬೇಕು, ಅದು ಸರಿಮಾಡಬೇಕು. ಇದಿಲ್ಲದೆ ಆಗುವಂತೆಯೇ ಇಲ್ಲ. ಹೀಗೆ ಹಾಗೆ ಅಂತ - ಅಷ್ಟೇ ಅಲ್ಲ ಮನೆಯಲ್ಲೂ ತೊಂದರೆ, ಬಟ್ಟೆ ಹೊಲಿಸಬೇಕು, ಕಾಳು ಕೊಂಡುಕೊಳ್ಳಬೇಕು ಎಂದು ಮತ್ತೂ ಮುನ್ನೂರು ರೂಪಾಯಿ ಕೇಳಿದ."

"ನಾಚಿಕೆಗೇಡಿ ! ಆಮೇಲೆ ?" ಎಂದ ಹರೀಶ ರುದ್ರ ಕೋಪದಿಂದ.

"ನೀನು ಅಂದುದು ಸರಿ !-ಶುದ್ಧ ನಾಚಿಕೆಗೇಡು ಹೇಸಿಕೆ ಅವಮಾನ ಒಂದೂ ಇಲ್ಲ! ಅಂತೂ ಒಟ್ಟು ಎಂಟುನೂರು ರೂಪಾಯಿ ತೆಗೆದುಕೊಂಡೇ ಹೋದ."

"ತೆಗೆದುಕೊಂಡು ಹೋದ ಸರಿ! - ನೀವು ಕೊಟ್ಟುಬಿಟ್ಟಿರಾ" ಎಂದು ಬಾಯಿಬಿಟ್ಟ ಹರೀಶ.

"ಇಲ್ಲದಿದ್ದರೆ ಅವನು ಬಿಡಬೇಕಲ್ಲಾ-"

ಹರೀಶ ಬೆಂಕಿಯಾದ. ಕೊಂಚಕಾಲ ಸ್ತಬ್ಧವಾಗಿದ್ದು "ಮೊಕದ್ದಮೆ ನಡೆಸಿಯಾದರೂ ಏನು ಉಪಯೋಗ ಅಣ್ಣ?" ಎಂದ.

ಗಿರೀಶ ಕೂಡಲೇ ಉತ್ತರ ಕೊಟ್ಟರು—"ಏನೂ ಇಲ್ಲ! ಏನೂ ಇಲ್ಲ! ತನ್ನ ಸಂಸಾರ ನಿರ್ವಹಿಸುವಷ್ಟೂ ಶಕ್ತಿಯಿಲ್ಲ ಅವನಿಗೆ-ಶುದ್ಧ ಮುಟ್ಠಾಳ! ತಿನ್ನುವುದು, ಮಲಗುವುದು ಅಷ್ಟೇ! ಜನ ಈಶ್ವರನ ಲಿಂಗ ಸ್ಥಾಪಿಸುವಂತೆ, ನಾವೂ ಅವನ್ನಲ್ಲಿ ಸ್ಥಾಪಿಸಿದ್ದೇವೆ, ಗೊತ್ತಾಯಿತೇ ಹರೀಶ?" ಎನ್ನುತ್ತಾ ತಮ್ಮ ರಸಿಕತೆಗೆ ತಾವೇ ಮಾರುಹೋಗಿ ತುಂಬು ನಗೆಯಿಂದ ಮನೆಯನ್ನೆಲ್ಲಾ ನಡುಗಿಸಿಬಿಟ್ಟರು - ಹರೀಶನಿಗೆ ಇನ್ನು ತಡೆಯಲಾಗದೆ ಹಲ್ಲು ಹಲ್ಲು ಕಡಿಯುತ್ತಾ "ನಾನೊಬ್ಬನೇ ನೋಡಿಕೊಳ್ಳುತ್ತೇನೆ" ಎನ್ನುತ್ತಾ ಅಲ್ಲಿಂದ ಹೊರಟುಹೋದ.

o o o o

ಮಾಘ ಶುದ್ಧ ಸಪ್ತಮಿಯ ದಿನ ಮೊಕದ್ದಮೆ ನಡೆಯಬೇಕಾಗಿತ್ತು. ಎರಡು ದಿನಕ್ಕೆ ಮೊದಲು ಹಳ್ಳಿಯ ಬಂಧುವೊಬ್ಬ ತನ್ನ ಮಗಳ ಮದುವೆಗಾಗಿ ಗಿರೀಶನನ್ನು ಹಿಡಿದು "ನೀವು ಮದುವೆಗೆ ಬಂದು ಅದು ಸಾಂಗವಾಗಿ ನೆರವೇರುವಂತೆ ಹರಸಬೇಕೆಂದು ನನ್ನಿಚ್ಛೆ. ಒಂದು ದಿನಕ್ಕಾಗಿಯಾದರೂ ಹಳ್ಳಿಗೆ ಬರಲೇಬೇಕು" ಎಂದು ಬೇಡಿಕೊಂಡ.

ಗಿರೀಶನ ಬಾಯಿಂದ "ಇಲ್ಲ"ವೆಂಬ ಮಾತೇ ಹೊರಡುತ್ತಿರಲಿಲ್ಲ! ಒಪ್ಪಿಗೆ ಕೊಟ್ಟು "ಖಂಡಿತ ಬರುತ್ತೇನೆ" ಎಂದು ವಚನ ಕೊಟ್ಟರು.

ಬಂಧು ಸಂತೋಷದಿಂದ ಹೊರಟು ಹೋದ. ಆದರೆ ಈ "ಖಂಡಿತ" ಪದದ ನಿಜವಾದ ಅರ್ಥವೇನಾದೀತೆಂಬುದು ತಿಳಿದುದು ಸಿದ್ಧೇಶ್ವರಿಗೆ ಮಾತ್ರ. ವಚನ ಕೊಟ್ಟುದನ್ನು ಮರುನಿಮಿಷವೇ ಗಿರೀಶ ಮರೆತಹೋದರೂ ಸಿದ್ಧೇಶ್ವರಿ ಮರೆಯಲಿಲ್ಲ!

ಮೊಕದ್ದಮೆಯ ದಿನ ಬೆಳಿಗ್ಗೆ ಗಿರೀಶ ಸಿಡಿಲೆರಗಿದಂತೆ ಕೇಳಿದರು. "ಇದೇನು ಹೀಗೆ ಹೇಳುತ್ತಿದ್ದೀ? ಹೇಗೆ ತಾನೇ ಸಾಧ್ಯ. ಇವತ್ತು ನನಗೆ ಆ ಜಯಪುರದ ಮೊಕ-"

"ಇಲ್ಲ-ಇಲ್ಲ! ಅದೆಲ್ಲಾ ಸಾಧ್ಯವೇ ಇಲ್ಲ! ನೀವು ಹೋಗಲೇಬೇಕು! ವಕೀಲರಾದ ಮೇಲೆ ಒಂದೇ ಸಮನಾಗಿ ಸುಳ್ಳು ಹೇಳುತ್ತಿದ್ದೀರಿ. ಇದೊಂದು ಮಾತನ್ನಾದರೂ ಉಳಿಸಿಕೊಳ್ಳಿ. ಪರಲೋಕದ ಭಯ ಕೊಂಚವಾದರೂ ಬೇಡವೇ?

"ಪರಲೋಕ, ಹುಂ-ಸರಿ-ಆದರೆ-"

"ಆದರೆಗೀದರೆ ಒಂದೂ ನಡೆಯುವುದಿಲ್ಲ. ನೀವು ಹೋಗಿಯೇ ತೀರಬೇಕು-ಹೋಗಲೇಬೇಕು."

ಕೊನೆಗೂ ಗಿರೀಶ ಹಳ್ಳಿಗೆ ಹೊರಡಲೇ ಬೇಕಾಯಿತು.

ಹೊರಡುವಾಗ ಸಿದ್ಧೇಶ್ವರಿ ಬಹಳ ಕೋಮಲಕಂಠದಿಂದ "ಇಬ್ಬರು ಮಕ್ಕಳನ್ನೂ-" ಎನ್ನುತ್ತಾ ಇದ್ದಕ್ಕಿದ್ದಂತೆ ಅತ್ತುಬಿಟ್ಟರು.

"ಸರಿ, ಸರಿ, ನೋಡೋಣ" ಎನ್ನುತ್ತಾ ಗಿರೀಶ ಹೊರಟುಹೋದರು. ಆದರೆ ಯಾವುದನ್ನು 'ನೋಡೋಣ'ವೆಂದರೋ ಗಂಡಹೆಂಡಿರಲ್ಲಿ ಯಾರಿಗೂ ತಿಳಿಯಲಿಲ್ಲ. ನಯನತಾರಾ ಸಿದ್ಧೇಶ್ವರಿಯನ್ನು ಸಂಜ್ಞೆಯಿಂದಲೇ ಕೂಗಿ ಆ ಮನೆಯಲ್ಲಿ ಊಟ ತಿಂಡಿ ಯಾವುದೂ ಬೇಡವೆಂದು ಹೇಳಲಿಲ್ಲವೇ, ಅಕ್ಕ?" ಎಂದಳು.

ಸಿದ್ಧೇಶ್ವರಿ ಆಶ್ಚರ್ಯದಿಂದ "ಯಾಕೆ?" ಎಂದರು.

ನಯನತಾರಾ ವಿಕೃತ ಗಾಂಭೀರ್ಯದಿಂದ "ಯಾರಿಗೆ ಗೊತ್ತಕ್ಕ— ಏನೂ ಹೇಳಲಾಗುವುದಿಲ್ಲ—" ಎಂದಳು.

ಸಿದ್ಧೇಶ್ವರಿಯು ಕಣ್ಣಿನಿಂದ ಹನಿಗಳು ಪಟಪಟನೆ ಉದುರುತ್ತಿದ್ದುವು. ಕೊಂಚ ಸುಮ್ಮನಿದ್ದು "ನೀನು ಹಾಗೆ ಮಾಡಿದರೂ ಮಾಡಬಹುದು. ಶೈಲಳ ಕೊರಳು ಕೊಯ್ದರೂ ಅವಳು ಹಾಗೆ ಮಾಡುವುದಿಲ್ಲ!" ಎಂದು ಅಲ್ಲಿಂದ ಹೊರಟು ಹೋದರು.

ಮೊಕದ್ದಮೆಗಾಗಿ ಹೊರಡಲು ರಮೇಶ ಸಿದ್ಧನಾಗುತ್ತಿದ್ದ. ಶೈಲಜಾ ಆಗ ಅಲ್ಲಿರಲಿಲ್ಲ. ಒಳಗೆ ದೇವರ ಮನೆಯಲ್ಲಿ ಕೊನೆಯ ಒಡವೆಯನ್ನು ಬಿಚ್ಚಿಟ್ಟು, ಕೊರಳಿಗೆ ಸೆರಗು ಸುತ್ತಿಕೊಂಡು ದೇವರಲ್ಲಿ ಮೊರೆಯಿಡುತ್ತಿದ್ದಳು.

"ಭಗವಾನ್-ಇನ್ನೇನೂ ಉಳಿದಿಲ್ಲ, ಹೇಗಾದರೂ ಆಗಲಿ ಈಗಲಾದರೂ ನನಗೆ 'ನಿಷ್ಕೃತಿ' (ಮುಕ್ತಿ) ಕೊಡು. ನನ್ನ ಮಕ್ಕಳು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಅವರು ಸುಮ್ಮನೆ ಯೋಚಿಸಿ ಯೋಚಿಸಿ ಒಣಕಡ್ಡಿಯಾಗಿದ್ದಾರೆ-"

"ಓ ಕನ್ಹಯ್ಯ-ಏ ಪಟಲ-"

ಶೈಲಜಾ ಎಚ್ಚೆತ್ತಳು. ಹಿರಿಮೈದುನನ ದನಿ!-ಕಿಟಕಿಯ ಕಂಬಿಯ ಮೂಲಕ ನೋಡಿದಳು-ಆದರೇ! ನರೆತ ತಲೆಕೂದಲು ಅರೆನರೆತ ಮೀಸೆ, ಅದೇ ಶಾಂತ ಸೌಮ್ಯಮೂರ್ತಿ! ಮೊದಲಿನಂತೆಯೇ-ಕೊಂಚವಾದರೂ ಬದಲಾಗಿಲ್ಲ-ಕನ್ಹಯ್ಯ ಓದುವುದು ಬಿಟ್ಟು ಓಡಿಬಂದು ಕಾಲಿಗೆ ನಮಸ್ಕರಿಸಿದ. ಪಟಲ ಆಟವಾಡುತ್ತಿದ್ದುದನ್ನು ಬಿಟ್ಟು ಕುಣಿಯುತ್ತಾ ಓಡಿಬಂದ-ಗಿರೀಶ ಅವನನ್ನೆತ್ತಿಕೊಂಡು ಮುದ್ದಾಡಲಾರಂಭಿಸಿದರು.

ರಮೇಶ ಒಳಗಿಂದ ಬಂದು ನಮಸ್ಕರಿಸಿದ.

"ಎಲ್ಲಿಗೋ ಹೊರಟದ್ದೀ?" ಎಂದರು ಗಿರೀಶ.

ರಮೇಶ ಅಸ್ಪಷ್ಟವಾಗಿ ಸಣ್ಣದನಿಯಲ್ಲಿ "ನಗರಕ್ಕೆ-" ಎಂದ.

ಗಿರೀಶ ಕಣ್ಣೆವೆಯಿಕ್ಕುವುದರಲ್ಲೇ ಕಿಡಿಕಿಡಿಯಾದರು. "ಕೆಲಸಕ್ಕೆ ಬಾರದ ಮುಟ್ಠಾಳ! ನನ್ನದನ್ನೇ ತಿನ್ನುವುದು-ನನ್ನ ಮೇಲೆಯೇ ಕತ್ತಿಕಟ್ಟುವುದು. ನಿನಗೆ ಒಂದು ಬಿಡಿಕಾಸಿನ ಜಮೀನನ್ನಾದರೂ ಕೊಟ್ಟರೆ ಕೇಳು-ನನ್ನ ಮನೆಬಿಟ್ಟು ಈಗಲೇ-ಹೊರಡು. ಹೀಗೆಯೇ ಇನ್ನೊಂದು ನಿಮಿಷವಾದರೂ ನಿಂತಿಯೇ-ತೊಲಗು-"

ರಮೇಶ ಏನೂ ಅನ್ನಲಿಲ್ಲ. ಅಣ್ಣನಕಡೆ ತಲೆಯೆತ್ತಿ ನೋಡಲೂ ಇಲ್ಲ. ಹಾಗೆಯೇ ಮಾತಿಲ್ಲದೆ ಹೊರಗೆ ಹೊರಟುಹೋದ. ಅಣ್ಣನಿಗೆ ಎಷ್ಟು ಗೌರವ ಕೊಡುತ್ತಿದ್ದನೊ, ಅಷ್ಟೇ ಚೆನ್ನಾಗಿ ಅಣ್ಣನ ಸ್ವಭಾವವನ್ನೂ ತಿಳಿದಿದ್ದ. ಅಣ್ಣನ ಮಾತಿನ ತಿರಸ್ಕಾರದ ಹಿಂದೆ ಯಾವ ಭಾವವೂ ಇಲ್ಲವೆಂಬುದು ಅವನಿಗೆ ಚೆನ್ನಾಗಿ ಗೊತ್ತು!

ಶೈಲಜಾ ಬಂದು ಸೆರಗು ಸರಿಮಾಡಿಕೊಂಡು ನಮಸ್ಕರಿಸಿದಳು.

ಗಿರೀಶ ಆಶೀರ್ವದಿಸುತ್ತಾ "ಬಾ, ಮಗು, ಬಾ" ಎಂದರು. ಅವರ ದನಿಯಲ್ಲಿ ಕೋಪದ ಬಿಸಿಯಾಗಲಿ, ಗಡಸುತನವಾಗಲಿ ಇರಲಿಲ್ಲ. ಇದೇ ವ್ಯಕ್ತಿ ಒಂದು ಕ್ಷಣ ಮುಂಚೆ ಮನೆಹಾರಿ ಹೋಗುವಂತೆ ಗರ್ಜಿಸುತ್ತಿದ್ದರೆಂದು ಹೇಳಿದರೆ ಯಾರೂ ನಂಬುತ್ತಿರಲಿಲ್ಲ.

ಗಿರೀಶನ ದೃಷ್ಟಿಗೆ ಸಾಮಾನ್ಯವಾಗಿ ಯಾವುದೂ ಬೀಳುತ್ತಲೇ ಇರಲಿಲ್ಲ. ಆದರೆ ಇಂದೇನೋ ಅವರ ಕಣ್ಣಿಗೆ ಹೊಸ ದೃಷ್ಟಿ ಬಂದಿತ್ತೋ ಏನೋ-ಶೈಲಜೆಯಕಡೆ ನೋಡಿ "ನಿನ್ನ ಮೈಮೇಲಿನ ಒಡವೆಗಳೆಲ್ಲಿ ಮಗು, ಒಂದೂ ಕಾಣುವುದೇ ಇಲ್ಲವಲ್ಲ" ಎಂದರು.

ಶೈಲಜಾ ತಲೆತಗ್ಗಿಸಿ ಸುಮ್ಮನೆ ನಿಂತಿದ್ದಳು.

ಗಿರೀಶನ ಧ್ವನಿ ಕೊಂಚಕೊಂಚವಾಗಿ ಏರಿತು.

"ಆ ಮುಟ್ಠಾಳನೇ ಎಲ್ಲವನ್ನೂ ಮಾರಿ ತಿಂದುಹಾಕಿ ಬಿಟ್ಟತಾನೇ-ಯಾರದ್ದು ಅದೆಲ್ಲ? ನನ್ನದೇ ಅಲ್ಲವೇ!-ಅವನನ್ನು ಜೈಲಿಗೆ ಕಳಿಸಿಯೇ ತೀರುತ್ತೇನೆ"-ಹೀಗೆಯೇ ಇನ್ನೂ ಏನೇನೋ ಕೋಪದ ಮಾತು!

○ ○ ○ ○

ಸಂಜೆ—ಮೊಕದ್ದಮೆಯಿಂದ ಹರೀಶ ಕಪ್ಪಿಟ್ಟ ಮುಖದಿಂದ ಹೂಗ್ಲಿಯ ನ್ಯಾಯಾಸ್ಥಾನದಿಂದ ಮನೆಗೆ ಹಿಂತಿರುಗಿ ಬೂಡ್ಸನ್ನಾಗಲಿ, ಬಟ್ಟೆಯನ್ನಾಗಲಿ, ಕಳಚದೆ ಹಾಸಿಗೆಯ ಮೇಲೆ ಬಿದ್ದುಕೊಂಡ.

ನಯನತಾರಾ ಅಳುಮುಖದಿಂದ ನೂರುಬಾರಿ ಮಾತಾಡಿಸಲು ಯತ್ನಿಸಿದಳು; ಸಮಾಚಾರ ತಿಳಿದು ಸಿದ್ಧೇಶ್ವರಿಯೂ ಓಡಿಬಂದರು. ಆದರೆ ಹರೀಶ ಬಂದವನೇ ಸುಮ್ಮನೆ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದ-ಅವನ ಬಾಯಿಂದ ಯಾವ ಮಾತನ್ನೂ ಹೊರಡಿಸುವುದು ಅಸಾಧ್ಯವಾಗಿತ್ತು.

ಮೊಕದ್ದಮೆಯಲ್ಲಿ ಸೋಲಾಗಿದೆಯೆಂಬುದರಲ್ಲಿ ಯಾವ ಸಂದೇಹವೂ ಉಳಿಯಲಿಲ್ಲ. ಮೊಕದ್ದಮೆಯೆಂದ ಮೇಲೆ ಸೋಲು ಗೆಲುವುಗಳಿದ್ದೇ ಇವೆ. ಇದೂ ಅಲ್ಲದೆ ಶ್ರೇಷ್ಠ ನ್ಯಾಯಾಲಯ (High Court) ಇದೆ. ವಿಲಾಯಿತಿಯಲ್ಲಿ ಅಪೀಲು ಮಾಡಬಹುದು. ಈಗಲೇ ಹೀಗೆ ಕೈಕಟ್ಟಿ ಕೊತರೇನಾದಂತಾಯಿತು ಎಂದು ಹೆಂಡತಿಯೂ ಅತ್ತಿಗೆಯೂ ವಿಧವಿಧವಾಗಿ ಸಮಾಧಾನಗೊಳಿಸಲು ಯತ್ನಿಸಿದರು.

ಆದರೆ ಅವರಿಬ್ಬರಲ್ಲಿದ್ದಷ್ಟು ಆಸೆ ಭರವಸೆಗಳು ಅಣುಮಾತ್ರವೂ ಸ್ವತಃ ವಕೀಲನಾದ ಹರೀಶನಲ್ಲಿರಲಿಲ್ಲ.

ಇನ್ನು ಸಹಿಸಲಸಾಧ್ಯವಾಗಿ ಸಿದ್ಧೇಶ್ವರಿ ಹರೀಶನನ್ನು ಅಲುಗಿಸಿ "ನಿಮಗೆಂದಿಗೂ ಸೋಲಾಗುವುದಿಲ್ಲ-ನಾನು ಹೇಳುತ್ತೇನೆ-ಎಷ್ಟೇ ರೂಪಾಯಾದರೂ ಸರಿ, ನಾನು ಕೊಡುತ್ತೇನೆ. ನೀವು ಹೈಕೋರ್ಟಿಗೆ ಹೋಗಿ-ನಾನು ಆಶೀರ್ವಾದ ಕೊಡುತ್ತೇನೆ. ನಿಮಗೆ ಖಂಡಿತ ಜಯವಾಗುತ್ತೆ" ಎಂದರು.

ಇಷ್ಟು ಹೊತ್ತಿನ ಮೇಲೆ ಹರೀಶ ಎದ್ದು ಕುಳಿತು ತಲೆಯಲ್ಲಾಡಿಸುತ್ತಾ —"ಇಲ್ಲ, ಅತ್ತಿಗೆ, ಈಗ ಅದು ಸಾಧ್ಯವಿಲ್ಲ-ಎಲ್ಲಾ ಆಗಿಹೋಯಿತು.

ಹೈಕೋರ್ಟಿನಲ್ಲಿ, ವಿಲಾಯಿತಿಗೆ ಹೋದರೂ ಏನೂ ಪ್ರಯೋಜನವಿಲ್ಲ, ಆಸ್ತಿಯೆಲ್ಲಾ ಅಣ್ಣ ತಮ್ಮ ಹೆಸರಿನಲ್ಲೇ ಕೊಂಡುಕೊಂಡಿದ್ದರು. ಹಳ್ಳಿಗೆ ಮದುವೆಗೆ ಹೋಗಿದ್ದರಲ್ಲಾ-ಆಗ ತಮ್ಮ ಆಸ್ತಿಯನ್ನೆಲ್ಲಾ ಕಿರಿಸೊಸೆಯ ಹೆಸರಿಗೆ ದಾನ ಮಾಡಿ ಬಿಟ್ಟಿದ್ದಾರೆ. ಈಗ ಅದು ರಿಜಿಸ್ಟರ್ (Registration) ಕೂಡ ಆಗಿ ಹೋಯಿತು. ಇನ್ನು ಮೇಲೆ ಹಳ್ಳಿಯ ಕಡೆ ಮುಖ ತೋರುವಂತೆಯೇ ಇಲ್ಲ" ಎಂದ.

ಹೆಂಗಸರಿಬ್ಬರೂ ಒಬ್ಬರ ಮುಖವನ್ನೊಬ್ಬರು ದಿಟ್ಟಿಸುತ್ತಾ ಮಣ್ಣಿನ ಮೂರ್ತಿಗಳಂತೆ ಕುಳಿತಿದ್ದರು.

ರಾತ್ರಿ ಗಿರೀಶ ನ್ಯಾಯಾಲಯದಿಂದ ಹಿಂದಿರುಗಿದಾಗ ಆದ ಗಲಾಟೆಯನ್ನು ವರ್ಣಿಸುವುದಸಾಧ್ಯ. ಬುದ್ಧಿಯಿಲ್ಲ ತಲೆಕೆಟ್ಟಿದೆ, ಹುಚ್ಚು ಹಿಡಿದಿದೆ-ಹಾಗೆ ಹೀಗೆಂದು ಅವರನ್ನು ತಿರಸ್ಕರಿಸದವರೇ ಇಲ್ಲ!

ಆದರೆ ಗಿರೀಶ ಎಲ್ಲರ ವಿರುದ್ಧ ನಿಂತು ಇದಲ್ಲದೆ ಬೇರೆ ದಾರಿಯೇ ಇರಲಿಲ್ಲವೆಂದು ವಾದಿಸಿದರು. ಆ ದುರ್ಭಾಗ್ಯ, ಮುಟ್ಠಾಳ-ಕಿರಿಸೊಸೆಯ ಒಡವೆಗಳನ್ನೆಲ್ಲಾ ಮಾರಿ ತಿಂದು ಹಾಕಿದ್ದಾನೆ. ಇನ್ನು ಕೆಲವು ದಿನ ಹೋಗಿದ್ದರೆ ಮನೆಯ ಇಟ್ಟಿಗೆ, ಮರಮುಟ್ಟುಗಳನ್ನೂ ಬಿಡುತ್ತಿರಲಿಲ್ಲ, ಹಳ್ಳಿಯ ಪಿತ್ರಾರ್ಜಿತ ಆಸ್ತಿಯೆಲ್ಲಾ ಹಾಳಾಗಿ ಹೋಗುತ್ತಿತ್ತು. ಮುಖರ್ಜಿ ವಂಶದ ಗೌರವ ಹೊತ್ತ ನಾವೆಯು ಮುಳುಗಿ ಹೋಗುತ್ತಿತ್ತು. ಅದನ್ನೆಲ್ಲಾ ಚೆನ್ನಾಗಿಯೇ ಯೋಚಿಸಿ ಆ ನಾವೆಗೆ 'ನಿಷ್ಕೃತಿ' (ಮುಕ್ತಿ) ತೋರಿ ಬಂದಿದ್ದೇನೆ-ಅದನ್ನುಳಿಸುವ ಏರ್ಪಾಡು ನಡೆಸಿದ್ದೇನೆ, ಎಂದು ಹೇಳಿದರು.

ಸಿದ್ಧೇಶ್ವರಿ ಮಾತ್ರ ಒಂದು ಕಡೆ ಮೌನವಾಗಿ ಕೂತಿದ್ದರು. ಇದುವರೆಗೂ ಅವರು ಯಾವ ಮಾತನ್ನೂ ಆಡಿರಲಿಲ್ಲ. ಎಲ್ಲರೂ ಹೊರಟುಹೋದ ಮೇಲೆ ಗಂಡನ ಹತ್ತಿರ ಬಂದರು. ಕಣ್ಣಿನಿಂದ ಇನ್ನೂ ಹನಿ ಮಿಡಿಯುತ್ತಲೇ ಇತ್ತು. ಗಿರೀಶನ ಕಾಲಿಗೆ ತಲೆಯಿಟ್ಟು ನಮಸ್ಕರಿಸಿ ಮೆಲ್ಲನೆ ಗದ್ಗದ ದನಿಯಿಂದ "ನನ್ನನ್ನು ನೀವು ಕ್ಷಮಿಸಿ; ಕಂಡಕಂಡವರು ನಿಮ್ಮನ್ನು ಬಾಯಿಗೆ ಬಂದಂತೆಲ್ಲಾ ಅಂದು ಹೋದರು. ಆದರೆ ಅವರೆಲ್ಲರಿಗಿಂತ ನೀವೆಷ್ಟು ಹಿರಿಮೆಯುಳ್ಳವರೆಂದು ಹಿಂದೆಂದೂ ಕಾಣದಂತೆ ಇಂದು ನನಗೆ ಅರಿವಾಯಿತು!" ಎಂದು ಗಳಗಳನೆ ಅತ್ತುಬಿಟ್ಟರು.

ಗಿರೀಶ ಅವರನ್ನು ಸಮಾಧಾನಗೊಳಿಸಿ ಅತ್ಯಂತ ಸಂತೋಷದಿಂದ ತಲೆದೂಗುತ್ತಾ—"ನೋಡಿದೆಯೋ-ನನಗೆ ನಾಲ್ಕು ಕಡೆಯೂ ಗಮನ

ವಿದೆಯೋ ಇಲ್ಲವೋ ?-ರಮೇಶ ನಿನ್ನೆ ಮೊನ್ನೆಯ ಹುಡುಗ-ಅವನು ನನ್ನ ಕಣ್ಣಿಗೆ ಮಣ್ಣೆರಚಿ ನನ್ನ ಆಸ್ತಿ ಹಾಳುಮಾಡುವನೇನು !-ಅವನನ್ನೆಂತಹ ಶೃಂಖಲೆಯಿಂದ ಕಟ್ಟಿದೇನೆ ಗೊತ್ತೇ-ಇನ್ನು ಆ ಮಗುವಿನ ಆಟ ಯಾವುದೂ ನಡೆಯುವುದಿಲ್ಲ-ಗೊತ್ತೋ ಎಂದರು. ತಮ್ಮ ಮಾತಿನಲ್ಲಿ ಯಾವ ಹಾಸ್ಯ ಕಂಡರೋ ಏನೋ-ಗಹಗಹಿಸಿ ನಕ್ಕು ಮನೆಯನ್ನೆಲ್ಲಾ ತುಂಬಿಸಿದರು.

ನಿಷ್ಕೃತಿ

ಹಿಂದೂ ಅವಿಭಕ್ತ ಕುಟುಂಬದಲ್ಲಿ ಸಹಜವಾಗಿ ಏಳುವ ಸಮಸ್ಯೆಗಳ ನೈಜ ಚಿತ್ರಣ ನಿಷ್ಕೃತಿ. ಶರತ್‌ರ ಇತರ ಕಾದಂಬರಿಗಳಂತೆ ಮನರಂಜನೆಯ ಜೊತೆಯಲ್ಲೇ ಮನೋವಿಕಾಸವೂ ಈ ಕಾದಂಬರಿಯ ಧ್ಯೇಯ.

ನಿಷ್ಕೃತಿ ಗಾತ್ರದಲ್ಲಿ ಕೇವಲ ಚಿಕ್ಕದಾದರೂ ಗುಣದಲ್ಲಿ ಶರತ್ಕಾದಂಬರಿಯ ವೈಶಿಷ್ಟ್ಯತೆಯನ್ನು ಸಂಪೂರ್ಣವಾಗಿ ಹೊಂದಿದೆ. ನಿರ್ಮಲ ಸಾತ್ವಿಕ ಮನಸ್ಸಿನ ಹಿರಿಯ ಸೊಸೆ ಸಿದ್ಧೇಶ್ವರಿ, ಕರ್ತವ್ಯತತ್ಪರೆ ಶೈಲಜೆ, ಕುಹಕಿ ನಯನತಾರಾ ಇವರು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುವ ವ್ಯಕ್ತಿಗಳು.

ಶರಚ್ಚಂದ್ರರ ಶೈಲಿಗೆ ಚ್ಯುತಿ ಬರದಂತೆ ಎಸ್. ಅನಂತನಾರಾಯಣ ಅವರು ಅನುವಾದಿಸಿದ್ದಾರೆ.

ಸ್ಟ್ಯಾಂಡರ್ಡ್ ಬುಕ್ ಡಿಪೋ,
ಅವೆನ್ಯೂ ರೋಡ್ : : ಬೆಂಗಳೂರು–೨

VER PRINTED AT THE EASTERN PRESS, BANGALORE-2